ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 6 ಶುಕ್ರವಾರ 2023 | ₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 260 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ ಶುಕ್ರವಾರ 6 ಜನವರಿ 2023



ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಟ್ರಸ್ಟ್ ನಿರ್ಮಾಣ ಕಾಮಗಾರಿಗೆ ಸಂಸದ ವಿ.ಶ್ರೀನಿವಾಸಪ್ರಸಾದ್ ಗುದ್ದಲಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಟ್ರಸ್ಟ್ ಪದಾಧಿಕಾರಿಗಳಾದ ಜಿ.ಲಿಂಗಯ್ಯ, ಹೆಚ್.ಕೆ.ಅನಂತ, ಪ್ರತಿಮಾ ಪ್ರಸಾದ್, ಸಿಎ ಗಿರೀಶ್ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ಸ್ವಾತಂತ್ರ್ಯಾ ನಂತರ ರಾಜ್ಯ ಕಂಡ ಅತ್ಯಂತ ಭ್ರಷ್ಟ ಸರ್ಕಾರ

● ತಮ್ಮದೇ ಬಿಜೆಪಿ ಸರ್ಕಾರದ ವಿರುದ್ಧ ಎಂಎಲ್‌ಸಿ ವಿಶ್ವನಾಥ್ ವಾಗ್ದಾಳಿ ● ವಿಧಾನಸೌಧ ಈಗ ಮಾಲ್ ಆಗಿ ಪರಿವರ್ತನೆ ಆಗಿದೆ

ಮೈಸೂರು, ಜ.5(ಎಂಟಿವೈ)– ಸ್ವಾತಂತ್ರ್ಯಾನಂತರ ರಾಜ್ಯ ಕಂಡ ಅತ್ಯಂತ ಭ್ರಷ್ಟ ಸರ್ಕಾರ ಈಗಿನ ಬಿಜೆಪಿ ಸರ್ಕಾರ ಎಂದು ತಮ್ಮದೇ ಸರ್ಕಾರದ ವಿರುದ್ಧ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ವಾಗ್ದಾಳಿ ನಡೆಸಿದ್ದಾರೆ.

ಮೈಸೂರಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವಿಧಾನಸೌಧದ ಬಳಿ 10.50 ಲಕ್ಷರೂ. ಹಣ ದೊರೆತ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 2006ರಲ್ಲಿ ಬರೆದ 'ಹಳ್ಳಿಹಕ್ಕಿ ಹಾಡು' ಪುಸ್ತಕದಲ್ಲಿ ವಿಧಾನಸೌಧ ಸದಾ ಸುಂದರಿ ಎಂದು ಬರೆದಿದ್ದೇನೆ. ಇಂದು ವಿಧಾನಸೌಧ ಮಾಲ್ ಆಗಿ ಪರಿವರ್ತನೆ ಆಗಿದೆ. ಯಾವುದನ್ನು ಬೇಕಾದರೂ ಕ್ರಯ ಮಾಡಬಹುದು, ಏನ್ ಬೇಕಾದರೂ ವಿಕ್ರಯ ಮಾಡಬಹುದಾಗಿದೆ. ಹಾಗಾಗಿ ಯಾರು, ಯಾರನ್ನಾದರೂ ಕ್ರಯ ಮಾಡಲು ಹಣ ತೆಗೆದುಕೊಂಡು ಹೋಗಿರಬಹುದು ಎಂದರು.


ನಾನು ಬಿಜೆಪಿಯ ಭಾಗ. ರಾಜ್ಯದಲ್ಲಿ ನಾಲ್ಕು ದಶಕಗಳ ರಾಜಕಾರಣ ನೋಡಿದ್ದೇನೆ. ವಿದ್ಯಾರ್ಥಿ ದೆಸೆಯಲ್ಲಿಯೇ ರಾಜಕೀಯ ಪ್ರವೇಶಿಸಿದ್ದೇನೆ. ಅನೇಕರೊಂದಿಗೆ ಕೆಲಸ ಮಾಡಿದ್ದೇನೆ. ನಾನು ಯಾವ ವರ್ಷವೂ ಇಷ್ಟೊಂದು ಸುಳ್ಳು, ಭ್ರಷ್ಟಾಚಾರದ ಸರ್ಕಾರ ನೋಡಿರಲಿಲ್ಲ. ಬಾಯಿಗೆ ಬಂದಂತೆ ಮಾತನಾಡುವ ನಾಯಕರನ್ನು ಕಂಡಿರಲಿಲ್ಲ ಎಂದು ಕಿಡಿಕಾರಿದರು.

ಸಾಹಿತ್ಯ ಕ್ಷೇತ್ರದ ಕೇಸರೀಕರಣ: ಕನ್ನಡ ಶಾಲೆಗಳ ಬಳಿಕ ಮಹಾರಾಜರು ಕಟ್ಟಿದ ಕನ್ನಡ ಸಾಹಿತ್ಯ ಪರಿಷತ್ ಅನ್ನು ಕೇಸರೀಕರಣ ಮಾಡಲಾಗುತ್ತಿದೆ. ಮಹಾರಾಜರು ಕಟ್ಟಿದ ಸಾಹಿತ್ಯ ಸಂಸ್ಥೆಯನ್ನು ಎಲ್ಲಾ ಸೇರಿ ಹಾಳು ಮಾಡುತ್ತಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಕೇಸರಿ ಬಣ್ಣ ಬಳಿಯೋದು ಸರಿಯಲ್ಲ. ಸಾರಸ್ವತಲೋಕ ಸರ್ವರನ್ನು ಒಳಗೊಂಡಂತೆ ಮುನ್ನಡೆಸಬೇಕು. ಆದರೆ ಹಾವೇರಿಯಲ್ಲಿ ನಡೆಯುವ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನ ವರ್ಣ, ಜಾತಿ, ಪಕ್ಷ ಸೇರಿದಂತೆ ಎಲ್ಲಾ ಭೇದಗಳೊಂದಿಗೆ ನಡೆಯುತ್ತಿದೆ. ರಾಜ್ಯದಲ್ಲಿ 75 ಲಕ್ಷ ಕನ್ನಡ ಮಾತಾಡುವ ಮುಸ್ಲಿಂರಿದ್ದಾರೆ. 14 ಲಕ್ಷ ಜನ ಬ್ಯಾರಿ ಮಾತಾಡುತ್ತಾರೆ. ಅವರನ್ನು ಹೊರಗಿಟ್ಟು ಸಮ್ಮೇಳನ ಮಾಡುತ್ತಿರುವುದು ಸರಿಯಲ್ಲ. ಕಸಾಪದ ಅಧ್ಯಕ್ಷ ಡಾ.ಮಹೇಶ್ ಜೋಷಿ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ತಮ್ಮ ಇಷ್ಟಕ್ಕೆ ಅನುಸಾರವಾಗಿ ಸಮ್ಮೇಳನ ನಡೆಸುತ್ತಿದ್ದಾರೆ. ಯಾರಿಗೂ ಸಮಾಧಾನ ತಂದಿಲ್ಲ. ಸಾಹಿತ್ಯ ಕ್ಷೇತ್ರ ಇದು, ರಾಜಕಾರಣವಲ್ಲ. ಸರ್ವಪಕ್ಷ ಸಮ್ಮೇಳನದಂತೆ ನಡೆಯುತ್ತಿದೆ. ಸರ್ವ ಸಾಹಿತಿಗಳ ಸಮ್ಮೇಳನವಾಗುತ್ತಿಲ್ಲ. ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಹಾವೇರಿಯಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ಸಿಗೆ 20 ಕೋಟಿ ರೂ. ನೀಡಿದೆ. ತೆರಿಗೆದಾರರ ಹಣ ಪೋಲು ಮಾಡಲಾಗುತ್ತಿದೆ. ದಲಿತರು, ಮಹಿಳೆಯರಿಗೆ ಅವಕಾಶ ನೀಡಿಲ್ಲ. ಕನ್ನಡ ಸಾಹಿತ್ಯವನ್ನು ದಿವಾಳಿತನಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಲಾಗುತ್ತಿದೆ. ಪ್ರತಿ ವರ್ಷ ಸಾಹಿತ್ಯ ಸಮ್ಮೇಳನಕ್ಕೆ ಹೋಗುತ್ತಿದ್ದೆ. ಈ ವರ್ಷ ಹೋಗುವುದಿಲ್ಲ. 7 ಪುಸ್ತಕ ಬರೆದಿರುವ, ಸಚಿವನಾಗಿದ್ದ ನನಗೇ ಆಹ್ವಾನ ಪತ್ರಿಕೆಯನ್ನೂ ಕೊಟ್ಟಿಲ್ಲ ಎಂದು ಹೇಳಿದರು.

ಸಾಹಿತಿಗಳು ತಿರುಗಿಬಿದ್ದು ಪರ್ಯಾಯವಾಗಿ ಜನ ಸಾಹಿತ್ಯ ಸಮ್ಮೇಳನ ಮಾಡುತ್ತಿದ್ದಾರೆ. ನಾನು ಅದರಲ್ಲಿ ಭಾಗವಹಿಸುತ್ತೇನೆ. ಕನ್ನಡ ಭಾಷೆಯನ್ನು ರಾಜಕಾರಣಿಗಳು ಕೊಲ್ಲುತ್ತಿದ್ದಾರೆ. ತಮ್ಮ ಮಾತಿನ ಮೇಲೆ ಹಿಡಿತವಿರಬೇಕು. ಆದರೆ, ಪುಡಿ ರೌಡಿಗಳ ರೀತಿಯಲ್ಲಿ ಮಾತಾಡುತ್ತಿದ್ದಾರೆ ಎಂದರು. ಮೈಸೂರು–ಬೆಂಗಳೂರು ದಶಪಥ ರಸ್ತೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣ ಮಾಡುವಂತೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಒತ್ತಾಯಕ್ಕೆ ನನ್ನ ಸಹಮತವಿದೆ. ಅದನ್ನು ಸ್ವಾಗತಿಸುತ್ತೇನೆ ಎಂದು ತಿಳಿಸಿದರು.

> “ಕೇಂದ್ರ ಸರ್ಕಾರವೂ ರೈತ ವಿರೋಧಿಯಂತೆ ನಡೆದುಕೊಳ್ಳುತ್ತಿದೆ. ಇದರಿಂದ ಕೇಂದ್ರದ ಸಚಿವರು ಭಯಗೊಂಡಿದ್ದಾರೆ. ರೈತರ ಪ್ರತಿಭಟನೆಗೆ ಹೆದರಿದ್ದಾರೆ. ಅದಕ್ಕಾಗಿ ರಸ್ತೆಯಲ್ಲಿ ಪ್ರಯಾಣಿಸದೆ ವೈಮಾನಿಕ ಸಮೀಕ್ಷೆ ಮಾಡಿದ್ದಾರೆ. ದಶಪಥ ರಸ್ತೆ ಕಾಮಗಾರಿಯಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ. ಅಪಘಾತ ವಲಯವೂ ಇದೆ ಎಂದು ಹಲವರು ಆರೋಪಿಸಿದ್ದಾರೆ. ಇದನ್ನು ಪರಿಶೀಲಿಸಿ ಸರಿಪಡಿಸಲು ಕೇಂದ್ರದ ಹೆದ್ದಾರಿ ಸಚಿವರು ಆಗಮಿಸಿರುವುದು ಸಂತೋಷ. **–ಎ.ಹೆಚ್.ವಿಶ್ವನಾಥ್**



ಎಸ್.ಎಂ.ಕೃಷ್ಣ ನಿವೃತ್ತರಾಗಬಾರದು

ನಾಡು ಕಂಡ ಮುತ್ಸದ್ದಿ ರಾಜಕಾರಣಿಗಳಲ್ಲಿ ಮಾಜಿ ಸಿಎಂ ಎಸ್.ಎಂ.ಕೃಷ್ಣ ಓರ್ವರಾಗಿದ್ದಾರೆ. ನಾನು ಸೇರಿದಂತೆ ಹಲವರಿಗೆ ಮಾರ್ಗದರ್ಶನ ನೀಡಿದ್ದಾರೆ. ಸಚಿವರನ್ನಾಗಿ ಮಾಡಿದ್ದಾರೆ. ಹಿರಿಯ ನಾಯಕರಾಗಿ ಸಲಹೆ, ಸಹಕಾರ ನಾಡಿಗೆ ಬೇಕು. ಅವರು ನಿವೃತ್ತಿಯಾಗಬಾರದು. ಇತ್ತೀಚಿನ ದಿನಗಳಲ್ಲಿ ಬಿಜೆಪಿಯವರು ಯಾರನ್ನೂ ನಂಬುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ಬಂದು ಎಲ್ಲಾ ಮತವನ್ನು ಬಿಜೆಪಿ ಬುಟ್ಟಿಗೆ ಹಾಕಿಸುತ್ತಾರೆ ಎಂದು ಭಾವಿಸಿದ್ದಾರೆ. ಹಾಗಾಗಿ ಬಿಜೆಪಿಗರಿಗೆ ಎಸ್.ಎಂ.ಕೃಷ್ಣ ಸೇರಿದಂತೆ ಯಾರೂ ಬೇಕಾಗಿಲ್ಲ ಎನಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನೈತಿಕತೆ ಇದ್ದರೆ ಸಿದ್ದರಾಮಯ್ಯ ಕಾಂಗ್ರೆಸ್‌ನಿಂದ ಹೊರ ಬರಲಿ

ಮೈಸೂರು,ಜ.5–(ಆರ್‌ಕೆ)–ನೈತಿಕತೆ ಇದ್ದರೆ ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷದಿಂದ ಹೊರ ಬರಲಿ ಎಂದು ಸಚಿವ ಡಾ.ಸಿ.ಎನ್. ಅಶ್ವಥ್‌ನಾರಾಯಣ ತಿಳಿಸಿದ್ದಾರೆ.



ಕೇಂದ್ರ ಸಚಿವ ನಿತಿನ್ ಗಡ್ಕರಿ ಮೈಸೂರು–ಬೆಂಗಳೂರು ದಶ ಪಥ ಹೆದ್ದಾರಿ ಪರಿಶೀಲನೆ ವೇಳೆ ಜೀಗೇನಹಳ್ಳಿ ಬಳಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ವಿಧಾನಸೌಧದಲ್ಲಿ ಹಣ ಸಿಕ್ಕಿದ ವಿಷಯದಲ್ಲಿ ಭ್ರಷ್ಟತೆ ಬಗ್ಗೆ ಮಾತನಾಡುತ್ತಿರುವವರು ತಾವು ಯಾವ ಹೋಟೆಲಿನಲ್ಲಿದ್ದರು, ಎಂತೆಂತಹ ಭ್ರಷ್ಟಾಚಾರ ಮಾಡಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ ಎಂದು ಕಿಡಿಕಾರಿದರು. ನಾವು ಜನಪರ ಆಡಳಿತ ಮಾಡುತ್ತಿದ್ದೇವೆ. ಕಾಂಗ್ರೆಸ್‌ನವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ನೈತಿಕತೆ ಇಲ್ಲ. ಸಿದ್ದರಾಮಯ್ಯ ಸೇರಿದಂತೆ ಅವರ ಅನುಯಾಯಿಗಳು ಕುಟುಂಬ ಪಕ್ಷದಲ್ಲಿರುವವರು. ತಾವು ಎಲ್ಲಿದ್ದೀವಿ ಎಂಬುದನ್ನು ತಿಳಿಯದೇ ಕುಟುಂಬ ರಾಜಕೀಯದ ಬಗ್ಗೆ ಮಾತನಾಡುತ್ತಾರೆ. ಅವರಿಗೆ ನೈತಿಕತೆ ಇದ್ದರೆ ಆ ಪಕ್ಷದಿಂದ ಹೊರ ಬರಲಿ ಎಂದು ಸಚಿವರು ಸವಾಲೆಸೆದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಕಾವೇರಿ ಮಾತೆ ಹೆಸರನ್ನು ಚತುಷ್ಪಥ ಹೆದ್ದಾರಿಗೆ ಇಡಲು ಮನವಿ ಮಾಡಿರುವುದರಲ್ಲಿ ಯಾವುದೇ ವಿವಾದವಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ, ಆದರೆ ಈ ರಸ್ತೆ ಸಾರ್ವಜನಿಕರಿಗೆ ವರದಾನವಾಗಿದೆ ಎಂದು ಪ್ರಶ್ನೆಯೊಂದಕ್ಕೆ ಡಾ.ಅಶ್ವಥ್‌ನಾರಾಯಣ ಪ್ರತಿಕ್ರಿಯೆ ನೀಡಿದರು.

ಸಿದ್ದರಾಮಯ್ಯರಿಗೆ ಬುದ್ಧಿಭ್ರಮಣೆ: ಸಿಎಂ ವಿರುದ್ಧ 'ನಾಯಿ ಮರಿ' ಪದಬಳಕೆ ಮಾಡಿರುವ ಸಿದ್ದರಾಮಯ್ಯರಿಗೆ ಬುದ್ಧಿಭ್ರಮಣೆಯಾಗಿದೆ. ಅವರು ರಾಜಕೀಯ ನಿವೃತ್ತಿ ಹೊಂದಿ ಮನೆಯಲ್ಲಿರುವುದು ಸೂಕ್ತ ಎಂದು ಮಂಡ್ಯ ಉಸ್ತುವಾರಿ ಸಚಿವ ಗೋಪಾಲಯ್ಯ ಖಾರವಾಗಿ ಪ್ರತಿಕ್ರಿಯಿಸಿದ್ದಲ್ಲದೆ. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿಯವರು ಸ್ಯಾಂಟ್ರೋ ರವಿ ವಿರುದ್ಧ ಮಾಡಿರುವ ಆರೋಪಗಳ ಬಗ್ಗೆ ನನಗೆ ಮಾಹಿತಿಯೇ ಇಲ್ಲ ಎಂದರು.

ವಿಧಾನಸೌಧದಲ್ಲಿ 10.50 ಲಕ್ಷ ರೂ. ಹಣ ಸಿಕ್ಕಿದ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಸಂಸದ ಡಿ.ಕೆ.ಸುರೇಶ್, ಇದು ನಿರಂತರವಾಗಿ ನಡೆಯುತ್ತಿದೆ. ಸರ್ಕಾರದ ಮುಖ್ಯಸ್ಥರ ವಿರುದ್ಧ ಕೇಸು ದಾಖಲಿಸಬೇಕು ಎಂದರು. 40 ಪರ್ಸೆಂಟ್ ಸರ್ಕಾರದಲ್ಲಿ ಇದು ಮಾಮೂಲಾಗಿದೆ. ಗುತ್ತಿಗೆದಾರರ ಸಂಘದವರು ಮಾಡುತ್ತಿರುವ ಆರೋಪ ಸರಿ ಇದೆ ಎಂಬುದಕ್ಕೆ ಹಣ ಸಿಕ್ಕಿರುವುದೇ ಸಾಕ್ಷಿ. ಈ ಸರ್ಕಾರದಲ್ಲಿ ಹಣವಿಲ್ಲದೇ ಯಾವುದೇ ಕೆಲಸವೂ ಆಗೋದಿಲ್ಲ ಎಂಬುದು ಜಗಜ್ಜಾಹಿರಾಗಿದೆ ಎಂದು ಆರೋಪಿಸಿದರು. ರಾಮನಗರ ಬಳಿ ಹೆದ್ದಾರಿ ಕಾಮಗಾರಿ ಲೋಪ ಸರಿಪಡಿಸಿ ಎಂದರೆ ಸಂಸದರು ಯೋಜನೆಗೆ ಅಡ್ಡಿಪಡಿಸುತ್ತಾರೆ ಎಂದು ಆರೋಪಿಸುತ್ತಾರೆ, ಕನಕಪುರದ ರಸ್ತೆ ಕಾಮಗಾರಿ ಸ್ಥಗಿತಗೊಳ್ಳಲು ಗುತ್ತಿಗೆದಾರ ಸಾವನ್ನಪ್ಪಿರುವುದು ಕಾರಣ ಎಂದು ಸ್ಥಳದಲ್ಲಿದ್ದ ಸಿ.ಪಿ.ಯೋಗೇಶ್ವರ್ ಎದುರು ಡಿ.ಕೆ.ಸುರೇಶ್ ನುಡಿದಾಗ ಕೆಲ ಸಮಯ ಅವರಿಬ್ಬರೂ ಪರಸ್ಪರ ಕಾಲೆಳೆದುಕೊಂಡರು.

ನಾಗಮಲೆಗೆ ಇಂದು ಪಾದಯಾತ್ರೆ

ಮೈಸೂರು, ಜ.5– ಮೈಸೂರಿನ ಬಿಎಂಶ್ರೀ ನಗರದ ಶ್ರೀ ಮಹಾಗಣಪತಿ ದೇವಸ್ಥಾನ ಟ್ರಸ್ಟ್ ಹಾಗೂ ಶ್ರೀ ಮಲೆಮಹದೇಶ್ವರ ಸೇವಾ ಸಮಿತಿ ಸಹಯೋಗದಲ್ಲಿ ಮೈಸೂರಿನಿಂದ ನಾಗಮಲೆಗೆ 12ನೇ ವರ್ಷದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ನಾಳೆ (ಜ.6) ಮುಂಜಾನೆ 3 ಗಂಟೆಗೆ ಮಹಾಗಣಪತಿ ದೇವಾಲಯದಿಂದ ಭಕ್ತರು ಪಾದಯಾತ್ರೆ ಆರಂಭಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಾಗಣಪತಿ ದೇವಾಲಯದಲ್ಲಿ ಮಹದೇಶ್ವರಸ್ವಾಮಿ ಪೂಜೆ, ಹೋಮ, ಪ್ರಮುಖ ರಸ್ತೆಗಳಲ್ಲಿ ಹುಲಿವಾಹನ ಮೆರವಣಿಗೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯದ ಜೊತೆಗೆ ಸಾವಿರಾರು ಜನರಿಗೆ ಅನ್ನ ಸಂತರ್ಪಣೆ ನೆರವೇರಿಸಲಾಯಿತು.

ಬಾಂಬೆಗೆ ಹೆಣ್ಣು ಮಕ್ಕಳ ಕಳಿಸಿದ್ನ ಕುಮಾರಸ್ವಾಮಿ ನೋಡಿದ್ರಾ...!?

ಮೈಸೂರು,ಜ.5(ಎಂಟಿವೈ)–ಗಾಂಭೀರ್ಯತೆ ಇಲ್ಲದ ನಾಯಕನಾಗಿರುವ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮಾಡಿರುವ ಆಪಾದನೆಯನ್ನು ಯಾರೂ ಕೂಡ ಗಂಭೀರವಾಗಿ ಪರಿಗಣಿಸಬಾರದು. ಪಿಂಪ್ ಮಾತು ಕೇಳಿ ಪ್ರತ್ಯಕ್ಷದರ್ಶಿಯಂತೆ ಹೇಳಿಕೆ ನೀಡಿರುವುದು ಖಂಡನೀಯ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೊಡ್ಡ ಚರಿತ್ರೆ ಇರುವ ಕುಟುಂಬದಿಂದ ಬಂದಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮಗನಾಗಿ ಇಂತಹ ಮಾತು ಆಡಬಾರದು. ಆಪರೇಷನ್ ಕಮಲಕ್ಕೆ ಒಳಗಾಗಿ ಬಾಂಬೆಗೆ ಹೋಗಿದ್ದ ಶಾಸಕರಿಗೆ ಸ್ಯಾಂಟ್ರೋ ರವಿ ಯುವತಿಯರನ್ನು ಕಳುಹಿಸಿಕೊಟ್ಟಿದ್ದರು ಎಂದು ಹೆಚ್.ಡಿ.ಕುಮಾರಸ್ವಾಮಿ ಹಿಟ್ ಅಂಡ್ ರನ್ ಹೇಳಿಕೆ ನೀಡಿರುವುದು ಸರಿಯಲ್ಲ. ಯಾರದೋ ಮುಖಕ್ಕೆ ಮಸಿ ಬಳಿಯುವ ಕೆಲಸ ಮಾಡಬಾರದು.

ಸಮ್ಮಿಶ್ರ ಸರ್ಕಾರ ಪತನಗೊಳಿಸಲು ಬಾಂಬೆಗೆ ತೆರಳಿದ್ದ ಶಾಸಕರಿಗೆ ಮೋಜು ಮಾಡಲು ಯುವತಿಯರನ್ನು ವೇಶ್ಯಾವಾಟಿಕೆಯ ಪಿಂಪ್ ಸ್ಯಾಂಟ್ರೋ ರವಿ ಕಳುಹಿಸಿಕೊಟ್ಟಿದ್ದರು ಎಂದು ಹೇಳಿಕೆ ನೀಡಿರುವುದು ಖಂಡನೀಯ. ಎರಡು ಬಾರಿ ಮುಖ್ಯಮಂತ್ರಿಯಾಗಿರುವ ಅವರಿಂದ ಇಂತಹ ಹೇಳಿಕೆ ನಿರೀಕ್ಷಿಸಿರಲ್ಲಿಲ್ಲ. ಕಾಂಗ್ರೆಸ್–ಜೆಡಿಎಸ್ 17 ಶಾಸಕರು ಬಾಂಬೆಗೆ ಹೋಗಲು ಕಾರಣ ಯಾರು ಗೊತ್ತಾ. ಕುಮಾರಸ್ವಾಮಿಯ ದುರಹಂಕಾರ ಮತ್ತು ಕೆಲವು ನಾಯಕರ ಮೇಲಿನ ಜಿಗುಪ್ಸೆಯಿಂದ ಶಾಸಕರು ಬೇಸತ್ತಿದ್ದರು. ಜೆಡಿಎಸ್ ಶಾಸಕರಾದ ಗೋಪಾಲಯ್ಯ, ನಾರಾಯಣಗೌಡ ಯಾಕೆ ಹೋದರು. ಬಾಂಬೆಗೆ ಹೆಣ್ಣು ಮಕ್ಕಳನ್ನು ಕಳುಹಿಸಿದ್ದನ್ನು ಕುಮಾರಸ್ವಾಮಿ ಬಂದು ನೋಡಿದ್ದರೆ, ತಮ್ಮ ಪಕ್ಷದ ಶಾಸಕರನ್ನು ಹಿಡಿದಿಟ್ಟುಕೊಳ್ಳುವ ನಾಯಕನ ಗುಣ ಲಕ್ಷಣ ಇಲ್ಲದ ಹಾಗೂ ಶಾಸಕರೊಂದಿಗೆ ಸಮನ್ವಯ ಸಾಧಿಸಲು ಆಗದೇ ಸರ್ಕಾರ ಪತನಕ್ಕೆ ಕಾರಣರಾದರು. ಪಿಂಪ್ ಮಾತು ಕೇಳಿಕೊಂಡು ಹೇಳಿಕೆ ಕೊಟ್ಟು ಯಾರದೋ ಮುಖಕ್ಕೆ ಮಸಿ ಬಳಿಯುವುದು ಸರಿಯಲ್ಲ. 3 ವರ್ಷಗಳಿಂದ ಯಾಕೆ ಸುಮ್ಮನಿದ್ದೀರಿ. ಆ ಹೆಣ್ಣು ಮಕ್ಕಳು ಯಾರು, ಅವರನ್ನು ಯಾರು ಕಳುಹಿಸಿದ್ದರು ಎಂಬುದನ್ನು ಬಹಿರಂಗಪಡಿಸುವಂತೆ ಒತ್ತಾಯಿಸಿದರು.

ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಈಗ ಇಂತಹ ಹೇಳಿಕೆ ನೀಡಿದ್ದಾರೆ. ಇದನ್ನು ಯಡಿಯೂರಪ್ಪ ಅವರನ್ನು ಕೇಳಬೇಕಿತ್ತು. ಬಸವರಾಜ ಬೊಮ್ಮಾಯಿ ಅವರನ್ನು ಪ್ರಶ್ನಿಸೋದು ಸರಿನಾ. ಸಮ್ಮಿಶ್ರ ಸರ್ಕಾರ ಪತನ ಅವರ ವೈಫಲ್ಯ. ಅದನ್ನು ಮುಚ್ಚಿಕೊಳ್ಳಲು ಇತರರಿಗೆ ಮಸಿ ಬಳಿಯುತ್ತಿದ್ದಾರೆ. ಹುಡುಗಿಯರ ಸರಬರಾಜು ಶುದ್ಧ ಸುಳ್ಳು ಪ್ರಶ್ನೆ ಕೇಳೋಕೆ ನೀವೇ ಆಗಬೇಕು. ದಾಸಯ್ಯ ಕೂಡ ಪ್ರಶ್ನೆ ಕೇಳುತ್ತಾರೆ. ಇದೇನು ಪ್ರಶ್ನಾವಳಿಯೇ, ನಿಮಗೆ ಗೊತ್ತಿದ್ದರೆ ಹೇಳಿ. ಸಮಯ ಬಂದಾಗ ಹೇಳುತ್ತೀನಿ ಅಂತೀರಾ. ಈಗ ಸಮಯ ಬಂದಿದೆ. ನಿಮ್ಮ ಇಬ್ಬಂದಿ ನೀತಿ ಬಿಟ್ಟು, ಸತ್ಯ ಹೇಳಿ. ಇದರಿಂದ ನಿಮಗೆ ಓಟ್ ಬರುವುದಿಲ್ಲ ಎಂದು ಕಿಡಿಕಾರಿದರು.

ಕರ್ನಾಟಕದಲ್ಲಿ ಮೈಸೂರು ಮಹಾರಾಜರು, ದೇವರಾಜ ಅರಸು, ನಿಜಲಿಂಗಪ್ಪ ರಾಮಕೃಷ್ಣ ಹೆಗಡೆ, ಕೆಂಗಲ್ ಹನುಮಂತಯ್ಯ ಮಹಾನ್ ನಾಯಕರು ಆಡಳಿತ ನಡೆಸಿ ಮಾದರಿಯಾಗಿದ್ದಾರೆ. ರಾಜ್ಯದ ರಾಜಕಾರಣಕ್ಕೆ ಇತಿಹಾಸ ಇದೆ. ರಾಜಕಾರಣಿಗಳು ಅದನ್ನು ಧೂಳೀಪಟ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.



ಮೈಸೂರು ನಾಡನಹಳ್ಳಿ ಪೊಲೀಸ್ ಬಡಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶ್ರೀರಾಂಪುರ ಶಕ್ತಿಕೇಂದ್ರದಿಂದ ಬೂತ್ ವಿಜಯ ಅಭಿಯಾನ ನಡೆಸಲಾಯಿತು. ಈ ವೇಳೆ ಬೂತ್ ಅಧ್ಯಕ್ಷರ ಮನೆ ಮೇಲೆ ಪಕ್ಷದ ಧ್ವಜವನ್ನು ಕಟ್ಟಲಾಯಿತು. ಶಕ್ತಿಕೇಂದ್ರದ ಅಧ್ಯಕ್ಷ ಸುರೇಶ್, ಮಂಡಲ ಅಧ್ಯಕ್ಷ ಮಹೇಶ್, ನಿಕಟಪೂರ್ವ ಜಿಲ್ಲಾಧ್ಯಕ್ಷ ಹೇಮಂತ್ ಕುಮಾರ್‌ಗೌಡ, ಮಹೇಂದ್ರ, ಶಿವು, ನಂಜುಂಡಸ್ವಾಮಿ, ಚೇತನ್, ಸುಶೀಲಮ್ಮ, ಪುನೀತ್, ರವಿ ಇದ್ದರು.

ನಿಧನ

ನಿಂಗಮ್ಮ



ಮೈಸೂರು, ಜ. 5–ಮೈಸೂರು ತಾಲೂಕು ಇಲವಾಲ ಹೋಬಳಿ ಬೊಮ್ಮೇನಹಳ್ಳಿ ಗ್ರಾಮದ ನಿವಾಸಿ ದಿವಂಗತ ಚಿಕ್ಕಹೊನ್ನೇಗೌಡ ಅವರ ಪತ್ನಿ, ಶತಾಯುಷಿ ನಿಂಗಮ್ಮ (101) ಗುರುವಾರ ನಿಧನರಾದರು.

ಮೃತರು ಜೆಡಿಎಸ್ ಮುಖಂಡ ಕೋಡಿಕುಮಾರ್ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಹಂಕಾರ, ನಾಚಿಕೆ ಮನುಷ್ಯನ ಪ್ರಗತಿಯ ಶತ್ರುಗಳು

ಖ್ಯಾತ ವಿಜ್ಞಾನಿ ಡಾ.ಎಸ್.ಶಿವಪ್ರಸಾದ್ ಅಭಿಮತ

● ಯುವ ಜನರ ಬಹು ದೊಡ್ಡ ಶತ್ರು ಕೀಳರಿಮೆ ಕೂಡ

● ಜ್ಞಾನಬುತ್ತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ



ಮೈಸೂರು,ಜ.5–ಮನುಷ್ಯನ ಬೆಳವಣಿಗೆಗೆ ಅಹಂಕಾರ ಮತ್ತು ನಾಚಿಕೆ ಸದಾ ಅಡ್ಡಿಯಾಗುತ್ತವೆ. ಅದನ್ನು ಮೀರಿದರೆ ನಿರೀಕ್ಷಿತ ಯಶಸ್ಸು ಪಡೆಯುವುದು ಸುಲಭ ಸಾಧ್ಯ ಎಂದು ಧಾರವಾಡ ಉನ್ನತ ಶಿಕ್ಷಣ ಅಕಾಡೆಮಿ ನಿರ್ದೇಶಕರು ಹಾಗೂ ಭಾರತ ರತ್ನ ಪ್ರಶಸ್ತಿ ಪುರಸ್ಕೃತರು, ಶ್ರೇಷ್ಠ ವಿಜ್ಞಾನಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಮತ್ತು ಡಾ. ಸಿ.ಎನ್.ಆರ್.ರಾವ್ ಅವರೊಂದಿಗೆ ಕೆಲಸ ಮಾಡಿದ ವಿಜ್ಞಾನಿ ಡಾ. ಎಸ್.ಶಿವಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ಅವರು ಬುಧವಾರ ನಗರದ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಆವರಣದಲ್ಲಿರುವ ಜ್ಞಾನಬುತ್ತಿ ಸಂಸ್ಥೆಗೆ ಭೇಟಿ ನೀಡಿ, ಪಿಸಿ ಮತ್ತು ಪಿಎಸ್‌ಐ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಪಡೆಯುತ್ತಿದ್ದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಯುವಜನರ ಬಹುದೊಡ್ಡ ಶತ್ರು ಕೀಳರಿಮೆ. ಇದನ್ನು ಕಿತ್ತೊಗೆದು ಜಗತ್ತಿನಲ್ಲಿ ನಾನು ಯಾರಿಗೂ ಕಡಿಮೆ ಇಲ್ಲ. ನಾನೇ ಬೆಸ್ಟ್ ಎಂದು ತಿಳಿದಾಗಲೇ ಸಾಧನೆಯ ಗುರಿ ಮುಟ್ಟಲು ಸಾಧ್ಯ.

ಬಹುತೇಕ ಯುವ ಜನರಿಗೆ ಬದುಕಿನಲ್ಲಿ ಸೆಟಲ್ ಆಗಬೇಕೆನ್ನುವ ಮನೋರೋಗವಿದೆ. ಯಾವುದಾದರೊಂದು ಕೆಲಸ ಸಿಕ್ಕ ತಕ್ಷಣ ಅಲ್ಪ ತೃಪ್ತಿ ಹೊಂದುತ್ತಾರೆ. ಅಲ್ಲಿಗೆ ಅವರ ಅಭಿವೃದ್ಧಿ ನಿಂತು ಹೋದಂತೆ. ಇದಕ್ಕೆ ಬದಲಾಗಿ ಸತ್ತ ದಿನದಂದು ಮಾತ್ರ ಸೆಟಲ್ ಆಗುತ್ತೇವೆಂದು ನಂಬಿ ಉತ್ಸಾಹ ಮತ್ತು ಕ್ರಿಯಾಶೀಲತೆಯಿಂದ ಹೊಸ–ಹೊಸ ಅವಕಾಶಗಳನ್ನು ಅರಸುತ್ತಾ ದುಡಿದರೆ ಹಲವು ಯಶಸ್ಸುಗಳ ಒಡೆಯರಾಗುವುದರ ಜೊತೆಗೆ ದೇಶದ ಅಭಿವೃದ್ಧಿಯೂ ಸಾಧ್ಯವಾಗುತ್ತದೆ ಎಂದರು.

ಇಂದು ಭಾರತದ ಯುವ ಜನರು ಜ್ಞಾನ ಮತ್ತು ಪ್ರೀತಿಯನ್ನು ಹಂಚುವ ಮಹತ್ತರ ಕೆಲಸ ಮಾಡಬೇಕಿದೆ. ಒಂದು ಪರೀಕ್ಷೆ ಫೇಲ್ ಆದರೇನಂತೆ, ಮತ್ತೊಂದು ಪರೀಕ್ಷೆ ನಿಮಗಾಗಿ ಕಾಯುತ್ತಿರುತ್ತದೆ. ಒಂದು ಸೋಲು ಮತ್ತೊಂದು ಗೆಲುವಿನ ಬೆಳಕಾಗಿರುತ್ತದೆ ಎಂದರು. ಯುವ ಜನರು ನಾನು ಯಾರು, ನನ್ನ ಇಷ್ಟ ಯಾವುದು, ನನಗೆ ಯಾವುದು ಬೇಕು ಎನ್ನುವ ಸ್ಪಷ್ಟ ಅರಿವಿನೊಡನೆ ಹೋದರೆ ಯಶಸ್ಸು ನಿಮಗೆ ಹತ್ತಿರವಾಗಲಿದೆ ಎಂದರು.

ಮನುಷ್ಯ ಹೊರನೋಟದಲ್ಲಿ ಸುಂದರವಾಗಿದ್ದರೆ ಏನೂ ಪ್ರಯೋಜನವಿಲ್ಲ; ಹೃದಯ ಶ್ರೀಮಂತಿಕೆಯಿಂದ ನಾವೆಲ್ಲ ದೊಡ್ಡ ವ್ಯಕ್ತಿಗಳಾಗಬೇಕು. ಉದಾಹರಣೆಗೆ ಮಹಾತ್ಮಗಾಂಧಿ, ಮದರ್ ತೆರೇಸಾ, ಅಬ್ದುಲ್ ಕಲಾಂ, ಸಾಲುಮರದ ತಿಮ್ಮಕ್ಕ ಅನೇಕರು ಬಾಹ್ಯ ಸೌಂದರ್ಯದ ಬದಲಾಗಿ ಅಂತರಂಗದ ಸೌಂದರ್ಯದಿಂದ ಬಹುದೊಡ್ಡದಾಗಿ ಬೆಳೆದರು ಎಂದು ತಿಳಿಸಿದರು.

ಜ್ಞಾನಬುತ್ತಿ ಸಂಸ್ಥೆಯ ಪರವಾಗಿ ಕಾರ್ಯದರ್ಶಿ ಹೆಚ್. ಬಾಲಕೃಷ್ಣ ಅವರು ಡಾ.ಎಸ್.ಶಿವಪ್ರಸಾದ್ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು. ಪ್ರೊ. ಕೃ.ಪ. ಗಣೇಶ್ ಅಭಿನಂದನಾ ನುಡಿ ಆಡಿದರು. ವೇದಿಕೆ ಮೇಲೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣ ಗೌಡ, ಇತಿಹಾಸ ಸಂಪನ್ಮೂಲ ವ್ಯಕ್ತಿ ಎಸ್. ಗಣೇಶ್, ಡಾ.ಜಯಶಂಕರ್, ಡಾ.ಈ.ಶಿವಪ್ರಸಾದ್, ಡಾ.ಅನಿಲ್‌ಕುಮಾರ್, ಡಾ. ಕವಿತಾ, ಡಾ.ರಮೇಶ್ ಉಪಸ್ಥಿತರಿದ್ದರು.

ಐಪಿಎಸ್ ಸ್ಥಾಪಕ ದಿನಾಚರಣೆ ನಾಳೆ

ಮೈಸೂರು,ಜ.5–ಮೈಸೂರಿನ ಜೆಎಸ್‌ಎಸ್ ಅಕಾಡೆಮಿ ಮತ್ತು ಸಂಶೋಧನಾ ಅಕಾಡೆಮಿ ವತಿಯಿಂದ ಆರೋಗ್ಯಕರ ಮನಸ್ಸು–ಸಂತಸದ ಜೀವನ ವಿಷಯ ಕುರಿತಾಗಿ ಐಪಿಎಸ್ ಸ್ಥಾಪಕ ದಿನಾಚರಣೆಯನ್ನು ಜ.7ರಂದು ಮಧ್ಯಾಹ್ನ 2 ಗಂಟೆಗೆ ಹೋಟೆಲ್ ಸಂದೇಶ್ ದಿ ಪ್ರಿನ್ಸ್‌ನಲ್ಲಿ ಆಯೋಜಿಸಲಾಗಿದೆ ಇಂಡಿಯನ್ ಸೈಕಿಯಾಟ್ರಿಕ್ ಸೊಸೈಟಿ ಅಧ್ಯಕ್ಷ ಡಾ.ಎನ್.ಎನ್.ರಾಜು ಅಧ್ಯಕ್ಷತೆ ವಹಿಸುವರು. ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಿನ್ಸಿಪಾಲ್ ಡಾ.ಬಸವನಗೌಡಪ್ಪ ಭಾಗವಹಿಸುವರು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಸಿ. ಸುಮಂಗಲ ಅವರ ಮಾರ್ಗದರ್ಶನದಲ್ಲಿ ಕೆ.ರಮಣಿ ನಾಯಕ್ ಅವರು ನಿರ್ವಹಣಾ ವಿಜ್ಞಾನ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಐಯ್ಯಪ್ಪ ಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಲಕ್ಷಾರ್ಚನೆ, ವಿಶೇಷ ಪೂಜೆ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಹೊಯ್ಸಳ ಕರ್ನಾಟಕ ಸಂಘ :** ಬಾದಾಮಿ ಬನಶಂಕರಿ ಅಮ್ಮನವರ ಪೂಜಾ ಮಹೋತ್ಸವ, ಮುಖ್ಯ ಅತಿಥಿಗಳು: ಯದುವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಬೆಳಗ್ಗೆ 6 ಗಂಟೆಗೆ ಗಣಪತಿ ಹೋಮ, ದುರ್ಗಾ ಹೋಮ, ನವಗ್ರಹ ಹೋಮ, ಆಯುಷ್ಯ ಹೋಮ, ಸುವಾಸಿನಿ ಮುತ್ತೈದೆಯರಿಂದ ಲಕ್ಷ ಕುಂಕುಮಾರ್ಚನೆ ಪೂಜೆ, ಮಧ್ಯಾಹ್ನ ಅನ್ನಸಂತರ್ಪಣೆ, ಸ್ಥಳ: ಹೊಯ್ಸಳ ಕರ್ನಾಟಕ ಸಂಘದ ಸಭಾಂಗಣ, ಎನ್.ಎಸ್. ರಸ್ತೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ.

■ **ಕರ್ನಾಟಕ ರಾಜ್ಯ ಅರ್ಚಕರು, ಆಗಮಿಕರು ಮತ್ತು ಜ್ಯೋತಿಷಿಗಳ ಸಂಸ್ಥೆ ಕಲ್ಪವೃಕ್ಷ ಸಾಂಸ್ಕೃತಿಕ ಪರಿಷತ್:** ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿ, ಅಧ್ಯಕ್ಷತೆ: ಡಾ.ಎಂ.ಜಿ.ಆರ್.ಅರಸ್, ಮುಖ್ಯ ಅತಿಥಿಗಳು: ಡಾ. ರಘುರಾಂ ವಾಜಪೇಯಿ, ಕೆ.ಎಂ.ನಂಜುಂಡಪ್ಪ, ಹೆಚ್.ಎಂ.ಟಿ.ಲಿಂಗರಾಜೇ ಅರಸ್, ಪ್ರವೀಣ್, ಓಂಪ್ರಕಾಶ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಸ್ಥಳ: ಶ್ರೀ ಪುಟ್ಟರಾಜ ಗವಾಯಿ ಕ್ರೀಡಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿವಿ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್:** ಸ್ಕಿಲ್ ಇಂಡಿಯಾ– ಸವಾಲುಗಳು ಮತ್ತು ಅವಕಾಶಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಕರ್ನಾಟಕ ಸ್ಕಿಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಡಿ.ಗೌಡ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ವಿ.ಆರ್.ಶೈಲಜಾ, ಗೌರವ ಅತಿಥಿಗಳು: ಸಿಐಐ, ಮೈಸೂರು ವಲಯ ಉಪಾಧ್ಯಕ್ಷ ಸ್ಯಾಂ ಚೆರಿಯನ್ ಕುಂಬುಕಟ್ಟು, ಅಧ್ಯಕ್ಷತೆ: ಬಿಮ್ಸ್ ಅಧ್ಯಕ್ಷ ಪ್ರೊ.ಡಿ.ಆನಂದ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು:** ಕಾಲೇಜು ವಾರ್ಷಿಕೋತ್ಸವ ಹಾಗೂ ಸಹಪಠ್ಯ ಚಟುವಟಿಕೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ ಶಾಸಕ ಎಸ್.ಎ.ರಾಮದಾಸ್, ಉದ್ಘಾಟನೆ ಮೇಯರ್ ಶಿವ ಕುಮಾರ್, ಮುಖ್ಯ ಅತಿಥಿಗಳು: ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ನಾಗಮಲ್ಲೇಶ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್:** ರಂಗಭೂಮಿ ಮತ್ತು ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರದ ಸಮಾರೋಪ, ಜಾನಪದ ಸಂಭ್ರಮ ಮತ್ತು ನಾಟಕೋತ್ಸವ, ಮುಖ್ಯ ಅತಿಥಿಗಳು: ಶಾಸಕ ಎಲ್.ನಾಗೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸನ್ಮಾನಿತರು: ಜನಪದ ತಜ್ಞ ಯು.ಎಸ್.ರಾಮಣ್ಣ, ಕಲಾವಿದರಾದ ಗೀತಾ ಮೋಂಟಡ್ಕ, ಡಾ.ಮೈಸೂರು ಗುರುರಾಜ್, ಕೃಷ್ಣ ಜನಮನ, ಉಪಸ್ಥಿತರು: ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿವಿ ಕೆರಿಯರ್ ಹಬ್, ಎಂಐಟಿ ಪ್ರಥಮ ದರ್ಜೆ ಕಾಲೇಜು:** ಯಶಸ್ವಿ ಸ್ಪರ್ಧಾ ಪಯಣ ಮತ್ತು ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮ, ಅಧ್ಯಕ್ಷತೆ: ಮಹಾರಾಜ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಎಸ್. ಮುರಳಿ, ಉದ್ಘಾಟನೆ: ನಗರ ಪಾಲಿಕೆ ಆಯುಕ್ತೆ ಶ್ರೀಮತಿ ಎಂ.ಜೆ. ರೂಪಾ, ಸ್ಥಳ: ಕಾಲೇಜು ಆವರಣ, ಮಾನಂದವಾಡಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಟಿಟಿಎಲ್ ಟ್ರಸ್ಟ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ :** ಸೈಬರ್ ಅಪರಾಧ ಜಾಗೃತಿ ಕಾರ್ಯಕ್ರಮ, ಅಧ್ಯಕ್ಷತೆ: ಟಿಟಿಎಲ್ ಟ್ರಸ್ಟ್ ನಿಯೋಜನಾ ಅಧಿಕಾರಿ ಡಾ.ಬಿ.ವಿ.ಪ್ರಶಾಂತ್, ಸಂಪನ್ಮೂಲ ವ್ಯಕ್ತಿಗಳು: ಪೊಲೀಸ್ ಉಪಾಧೀಕ್ಷಕ ಹೆಚ್.ಎಸ್.ರೇಣುಕಾರಾಧ್ಯ, ವಿಶೇಷ ಆಹ್ವಾನಿತರು: ಡಾ.ಜಿ.ವಿ. ರವಿಶಂಕರ್, ವಿಕ್ರಂ ಅಯ್ಯಂಗಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11.30ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಕ್ಯಾಲೆಂಡರ್ ಬಿಡುಗಡೆ: ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ, ವಿಶೇಷ ಆಹ್ವಾನಿತರು : ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ರಾಷ್ಟ್ರ ಹಾಗೂ ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತೆ ಎಸ್.ಕವಿತಾ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ಮಧ್ಯಾಹ್ನ 1ಕ್ಕೆ.

■ **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀಕೃಷ್ಣ ಟ್ರಸ್ಟ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ:** ಮಹಾಭಾರತದ ವಿರಾಟ ಪರ್ವ ಪ್ರವಚನ ಕಾರ್ಯಕ್ರಮದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಶ್ರೀ ಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಸುಬ್ರಮಣ್ಯ ತಂತ್ರಿ, ಉಪಾಧ್ಯಕ್ಷ ಪುಟ್ಟಣ್ಣ ಭಟ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ವಿಪ್ರ ಮುಖಂಡ ನಂ.ಶ್ರೀಕಂಠಕುಮಾರ್, ವಿಪ್ರ ಮಹಿಳಾ ಸಂಘದ ಅಧ್ಯಕ್ಷ ಡಾ.ಲಕ್ಷ್ಮಿ, ವಿಕ್ರಂ ಅಯ್ಯಂಗಾರ್, ಸ್ಥಳ: ಶ್ರೀ ಕೃಷ್ಣ ಸಭಾ ಭವನ, ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 5.45ಕ್ಕೆ.

■ **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಐಯುಸಿಇಇ ಫೌಂಡೇಷನ್:** ಇಂಜಿನಿಯರಿಂಗ್ ಶಿಕ್ಷಣದಲ್ಲಿ ಬದಲಾವಣೆಗಳು ಕುರಿತು ಸಮ್ಮೇಳನ, ಮುಖ್ಯ ಅತಿಥಿಗಳು: ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಬೆಳಗಾವಿ ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್, ಪಿ.ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಡಾ.ಕೃಷ್ಣ ವೇದುಲಾ, ಡಾ.ಬಿ.ಸದಾಶಿವೇಗೌಡ, ಸ್ಥಳ: ಶ್ರೀ ಹೆಚ್.ಕೆಂಪೇಗೌಡ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ವಿವಿಸಿಇ, ಬೆಳಗ್ಗೆ 6.45ಕ್ಕೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ.ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ ಆವರಣ, ಸಂಜೆ 6 ಗಂಟೆಗೆ.

■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಪ್ರಾತಃಸ್ಮರಣಂ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.


■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಬೆಳದಿಂಗಳ ಸಂಗೀತ–250, ವಿದ್ವಾನ್ ಕೃಷ್ಣಮೋಹನ್ ಮತ್ತು ವಿದ್ವಾನ್ ರಾಮಕುಮಾರ್ ಮೋಹನ್ ಅವರಿಂದ ಗಾಯನ, ವಿದ್ವಾನ್ ವಿಶ್ವೇಶ್ ಚಂದ್ರಶೇಖರ್–ವಯೋಲಿನ್, ವಿದ್ವಾನ್ ತ್ರಿಚೂರ್ ಆರ್. ಮೋಹನ್ –ಮೃದಂಗ, ವಿದ್ವಾನ್ ಜಿ. ಸುರೇಶ್–ಘಟ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಗಾನಭಾರತೀ:** ವಿದ್ವಾನ್ ಎಲ್.ವಿ.ಮುಕುಂದ ಅವರಿಂದ ಕೊಳಲು ವಾದನ, ವಿದುಷಿ ಪೃಥ್ವಿ ಭಾಸ್ಕರ್–ವಯೋಲಿನ್, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಂ.ಆರ್.ಮಂಜುನಾಥ್–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಮಹಾಜನ ಸಭಾ:** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲಾ ರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಆಂಡಾಳ್ ಮಂದಿರಂ:** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಆಂಡಾಳ್ ಮಂದಿರಂ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ 7.30 ರವರೆಗೆ.



ಇಂದಿನ ಪಂಚಾಂಗ

6.1.2023 ಶುಕ್ರವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ–ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಸದಾಶಿವ ಪಾಟೀಲ್, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 7.15 ಪ್ರಾಯೋಜಿತ ಕಾರ್ಯಕ್ರಮ “ಸಮಗ್ರ ಶಿಕ್ಷಣ ಸಂಚಲನ”, 9.30 ಗಾಂಧೀ ಸ್ಮೃತಿ, 10.00 ಆರ್. ರಂಗಸ್ವಾಮಿ ಮತ್ತು ಸಂಗಡಿಗರು–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಪೃಥ್ವಿ ಭಾರದ್ವಾಜ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಅವಧರಿಸು ಬಾ ಅಮರ ನಾರೇಯಣ–ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ–ಟಿ.ಎಸ್.ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ.ಎನ್.ರಘು, 4.00 ಮಹಿಳಾರಂಗ, 4.30ವೃತ್ತಿ ಮಾರ್ಗದರ್ಶನ–ಭಾಷಾಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಸುವರ್ಣಾದೇವಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ–ಮಿಶ್ರ ಕೃಷಿಯಲ್ಲಿನ ಅನುಭವ ಕುರಿತು ಗಿರೀಶ್ ಅವರೊಡನೆ ಸಂದರ್ಶನ. ಸಂದರ್ಶಕರು– ಎಸ್.ಸಿ.ಹೇಮಕುಮಾರ್, 8.00 ಸಂಧ್ಯಾರಾಗ, 9.15 ಜನಪದ ಸಂಗೀತ–ಮಹದೇವಮ್ಮ ಮತ್ತು ತಂಡ, 10.00 ವಾದ್ಯವೃಂದ, ನಿರ್ದೇಶನ – ತುಮಕೂರು ಬಿ. ರವಿಶಂಕರ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 6 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 260 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರು-ಬೆಂಗಳೂರು ದಶಪಥ ಹೆದ್ದಾರಿ

ಫೆಬ್ರವರಿ ಅಂತ್ಯದಲ್ಲಿ ಸಂಚಾರಕ್ಕೆ ಮುಕ್ತ

ವೈಮಾನಿಕ ಸಮೀಕ್ಷೆ ನಂತರ ರಾಮನಗರ ಬಳಿ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಘೋಷಣೆ

ಮೈಸೂರು,ಜ.5(ಆರ್‌ಕೆ)–ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿಯನ್ನು 2023ರ ಫೆಬ್ರವರಿ ಮಾಸಾಂತ್ಯಕ್ಕೆ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಕೇಂದ್ರ ಭೂ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಸಂಸದ ಪ್ರತಾಪ್‌ಸಿಂಹ ಅವರೊಂದಿಗೆ ಇಂದು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಅನ್ನು ಹೆಲಿಕಾಪ್ಟರ್‌ನಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದ ನಂತರ ರಾಮನಗರ ಜಿಲ್ಲೆ ಜೀಗೇನಹಳ್ಳಿ (ಕೆಂಪೇಗೌಡನದೊಡ್ಡಿ) ಬಳಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 117 ಕಿ.ಮೀ. ಉದ್ದದ ಈ ಹೆದ್ದಾರಿಯನ್ನು 8,408 ಕೋಟಿ ರೂ. ವೆಚ್ಚದಲ್ಲಿ ಎರಡು ಪ್ಯಾಕೇಜ್‌ಗಳಲ್ಲಿ ನಿರ್ಮಿಸಲಾಗಿದೆ. ಶೇ.90ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಉಳಿದ ಕೆಲಸವನ್ನು ತ್ವರಿತವಾಗಿ ಮುಗಿಸಿ ಫೆಬ್ರವರಿ ಅಂತ್ಯಕ್ಕೆ ಪ್ರಧಾನಮಂತ್ರಿಗಳಿಂದ ಉದ್ಘಾಟಿಸಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದರು. 6 ಪಥದ ಮುಖ್ಯರಸ್ತೆ ಹಾಗೂ ಎರಡೂ ಬದಿಯಲ್ಲಿ 4 ಸರ್ವಿಸ್ ರೋಡ್ ಹೊಂದಿರುವ ಹತ್ತು ಪಥದ ರಾಷ್ಟ್ರೀಯ ಹೆದ್ದಾರಿಗೆ 8,408 ಕೋಟಿ ರೂ. ವೆಚ್ಚ ಮಾಡಲಾಗಿದೆ. 117 ಕಿಮೀ ಪೈಕಿ 52 ಕಿಮೀ ಹಸಿರು ವಲಯದಿಂದ ಕೂಡಿದ್ದು, 5 ಕಡೆ ಬೈಪಾಸ್ ಇರುವುದರಿಂದ ನಗರಗಳಲ್ಲಿನ ವಾಹನ ದಟ್ಟಣೆ ಸಮಸ್ಯೆ ಪರಿಹಾರವಾದಂತಾಗಿದೆ ಎಂದು ಅವರು ತಿಳಿಸಿದರು.

ಈ ಯೋಜನೆಯಿಂದಾಗಿ ಮೈಸೂರಿನಿಂದ ಬೆಂಗಳೂರು ನಗರದ ಪ್ರಯಾಣ ಅವಧಿ ಗಣನೀಯವಾಗಿ ಕಡಿಮೆಯಾಗಲಿದ್ದು, ಪ್ರಯಾಸವಿಲ್ಲದೆ ಒಂದೂವರೆಯಿಂದ 2 ಗಂಟೆಯೊಳಗೆ ತಲುಪಬಹುದು. ಈ ಹೆದ್ದಾರಿಯಿಂದ ಮೈಸೂರು, ಶ್ರೀರಂಗಪಟ್ಟಣ, ಕೊಡಗು, ಊಟಿ ಮತ್ತು ಕೇರಳದ ಪ್ರವಾಸಿ ತಾಣಗಳಿಗೆ ತ್ವರಿತ ಸಂಪರ್ಕ ಸಾಧ್ಯವಾಗಲಿದೆ. ಅಲ್ಲದೆ ಬೆಂಗಳೂರು ನಗರದ ಒತ್ತಡ ಹಾಗೂ ಕೈಗಾರಿಕಾ ಚಟುವಟಿಕೆಗಳು ಸಾಂಸ್ಕೃತಿಕ ನಗರ ಮೈಸೂರಿಗೆ ಸ್ಥಳಾಂತರವಾಗಲು ಪೂರಕವಾಗಿದೆ ಎಂದು ಗಡ್ಕರಿ ತಿಳಿಸಿದರು. ▶ 9ನೇ ಪುಟಕ್ಕೆ




ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಗುರುವಾರ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ವೈಮಾನಿಕ ಸಮೀಕ್ಷೆ ನಡೆಸಿದರು. ಈ ವೇಳೆ ಸಂಸದ ಪ್ರತಾಪ್ ಸಿಂಹ ಸಚಿವರೊಂದಿಗಿದ್ದರು /ಚಿತ್ರ ಕೃಪೆ: ಕೇಂದ್ರ ಸಚಿವ ನಿತಿನ್ ಗಡ್ಕರಿ ಟ್ವಿಟರ್

ಹೆದ್ದಾರಿಗಳಿಗೆ ಯಾವುದೇ ಹೆಸರಿಡುವ ಪರಿಪಾಠವಿಲ್ಲ

ಮೈಸೂರು, ಜ.5(ಆರ್‌ಕೆ)– ದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಗಳಿಗೆ ಯಾವುದೇ ಹೆಸರಿಡುವ ಪರಿಪಾಠವಿಲ್ಲ ಎಂದು ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ರಾಮನಗರ ಜಿಲ್ಲೆ, ಜೀಗೇನಹಳ್ಳಿ ಬಳಿ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿಡಬೇಕೆಂದು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಹಾಗೂ ಕಾವೇರಿ ಎಕ್ಸ್‌ಪ್ರೆಸ್ ವೇ ಎಂದು ನಾಮಕರಣ ಮಾಡುವಂತೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಬರೆದಿರುವ ಪತ್ರ ತಮಗೆ ತಲುಪಿದೆ. ಆದರೆ ಈವರೆಗೆ ರಾಷ್ಟ್ರೀಯ ಹೆದ್ದಾರಿಗಳಿಗೆ ಹೆಸರಿಟ್ಟಿಲ್ಲ. ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ ಎಂದರು.

ಮೈಸೂರು–ಬೆಂಗಳೂರು ಹೆದ್ದಾರಿ ಕಾಮಗಾರಿ ಅವೈಜ್ಞಾನಿಕವಾಗಿದ್ದು, ಆ ಭಾಗದ ಗ್ರಾಮಗಳ ರೈತರ ಜಮೀನುಗಳಿಗೆ ಸಂಪರ್ಕ ಕಲ್ಪಿಸಲು ಎಂಟ್ರಿ ಮತ್ತು ಎಕ್ಸಿಟ್ ಪಾಯಿಂಟ್‌ಗಳಿಲ್ಲ. ಅಂಡರ್ ಬ್ರಿಡ್ಜ್, ಓವರ್ ಬ್ರಿಡ್ಜ್‌ಗಳು ಭಾರೀ ಅಂತರದಲ್ಲಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂಬ ಮಂಡ್ಯ ಸಂಸದೆ ಸುಮಲತಾ ದೂರಿಗೆ ಪ್ರತಿಕ್ರಿಯಿಸಿದ ಸಚಿವರು, ತಾಂತ್ರಿಕ ತಜ್ಞರ ಸಮಿತಿ ವಿನ್ಯಾಸದಂತೆ ರಸ್ತೆಯ ರೂಪುರೇಷೆ ನಿರ್ಧರಿಸಲಾಗಿದೆ. ಇಷ್ಟೊಂದು ಬೃಹತ್ ಯೋಜನೆ ಮಾಡುವಾಗ ತಾಂತ್ರಿಕ ವಿನ್ಯಾಸವನ್ನು ಪರಿಗಣಿಸಿ ▶ 9ನೇ ಪುಟಕ್ಕೆ





ಸಂಸದೆ ಸುಮಲತಾ ಗೈರು



ಮೈಸೂರು, ಜ.5(ಆರ್‌ಕೆ)–ಮೈಸೂರು–ಬೆಂಗಳೂರು ದಶಪಥ ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆ ಕಾಮಗಾರಿಯನ್ನು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಪರಿಶೀಲನೆ ವೇಳೆ ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಗೈರು ಹಾಜರಾಗಿದ್ದರು.

ಈ ಯೋಜನೆ ರಾಮನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆ ವ್ಯಾಪ್ತಿಗೆ ಬರಲಿದ್ದು, ಸಂಸದರಾದ ಡಿ.ಕೆ.ಸುರೇಶ್, ಪ್ರತಾಪ್‌ಸಿಂಹ ಅವರು ಸಚಿವರ ವೈಮಾನಿಕ ಸಮೀಕ್ಷೆ ಹಾಗೂ ಸುದ್ದಿಗೋಷ್ಠಿ ವೇಳೆ ಉಪಸ್ಥಿತರಿದ್ದರಲ್ಲದೆ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ, ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣ, ರಾಜ್ಯ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್, ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಸಹ ಪಾಲ್ಗೊಂಡಿದ್ದರು. ಆದರೆ ದಶಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಗುಣಮಟ್ಟ ಸರಿಯಿಲ್ಲ, ಸೌಲಭ್ಯಗಳ ಕೊರತೆ ಇದೆ, ರೈತರಿಗೆ ಸಂಪರ್ಕ ಕಲ್ಪಿಸಿಲ್ಲ ಎಂಬಿತ್ಯಾದಿ ಆರೋಪ ಮಾಡಿ, ಆಗಿಂದಾಗ್ಗೆ ಸದ್ದು ಮಾಡುತ್ತಿದ್ದ ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಮಾತ್ರ ಈ ವೇಳೆ ಕಾಣಿಸಿಕೊಳ್ಳಲಿಲ್ಲ. ಜೊತೆಗೆ ಈ ಹೆದ್ದಾರಿ ವಿಷಯದಲ್ಲಿ ಪ್ರತಾಪ್‌ಸಿಂಹ ಮತ್ತು ಸುಮಲತಾ ನಡುವೆ ವಾಕ್ಸಮರವೂ ನಡೆದಿತ್ತು. ಇಂದು ನಿತಿನ್ ಗಡ್ಕರಿ ಅವರ ಕಾರ್ಯಕ್ರಮಕ್ಕೆ ಬಂದು ಸಚಿವರಿಗೆ ದೂರು ಸಲ್ಲಿಸುವರು ಎಂದು ನಿರೀಕ್ಷಿಸಲಾಗಿತ್ತಾದರೂ, ಅವರು ಆಗಮಿಸಲೇ ಇಲ್ಲ.


ಹೆದ್ದಾರಿಯಲ್ಲಿ ಹೆಲಿಕಾಪ್ಟರ್ ಲ್ಯಾಂಡಿಂಗ್ ರಾಜ್ಯದ ಹೆಗ್ಗಳಿಕೆ

ಮೈಸೂರು, ಜ.5(ಆರ್‌ಕೆ)– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯ ವೈಮಾನಿಕ ಸಮೀಕ್ಷೆ ನಡೆಸಿದ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿದ್ದ ಹೆಲಿಕಾಪ್ಟರ್ ರಾಷ್ಟ್ರೀಯ ಹೆದ್ದಾರಿ ಮಧ್ಯೆ ಇಂದು ಲ್ಯಾಂಡಿಂಗ್ ಆಯಿತು. ಇದರೊಂದಿಗೆ ಹೆಲಿಕಾಪ್ಟರ್ ಲ್ಯಾಂಡ್ ಆದ ರಾಜ್ಯದ ಮೊದಲ ಹೆದ್ದಾರಿ ಎಂಬ ಹೆಗ್ಗಳಿಕೆಗೆ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ದಾಖಲೆ ಬರೆಯಿತು. ಮಾತ್ರವಲ್ಲ, ಇದೊಂದು ಪ್ರಥಮ ಯಶಸ್ವಿ ಪ್ರಯೋಗವೂ ಆಗಿದೆ. ಮೈಸೂರು–ಬೆಂಗಳೂರು ದಶಪಥ ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆ ಪರಿಶೀಲನೆಗಾಗಿ ಆಗಮಿಸಿದ್ದ ಸಚಿವರು, ಸಂಸದ ಪ್ರತಾಪ್‌ಸಿಂಹರೊಡನೆ ಮೊದಲು ಹೆಲಿಕಾಪ್ಟರ್‌ನಲ್ಲಿ ಹೆದ್ದಾರಿ ವೈಮಾನಿಕ ▶ 9ನೇ ಪುಟಕ್ಕೆ



ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿದ್ದ ಹೆಲಿಕಾಪ್ಟರ್, ರಾಮನಗರ ಬಳಿ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲೇ ವ್ಯವಸ್ಥೆ ಮಾಡಿದ್ದ ತಾತ್ಕಾಲಿಕ ಹೆಲಿಪ್ಯಾಡ್‌ನಲ್ಲಿ ಯಶಸ್ವಿಯಾಗಿ ಭೂಸ್ಪರ್ಶ ಮಾಡಿತು. ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

ಲೋಪದೋಷ ಸರಿಪಡಿಸಿ ಸೇವೆಗೆ ಸಮರ್ಪಣೆ



ಬೆಂಗಳೂರು, ಜ.5(ಕೆಎಂಶಿ)– ಬೆಂಗಳೂರು–ಮೈಸೂರು ದಶಪಥ ರಸ್ತೆಯಲ್ಲಿ ಲೋಪದೋಷಗಳು ಕಂಡು ಬಂದಿದ್ದು, ಅವುಗಳನ್ನು ಸರಿಪಡಿಸಿದ ನಂತರವೇ ರಾಷ್ಟ್ರಕ್ಕೆ ಲೋಕಾರ್ಪಣೆ ಮಾಡಲಾಗುವುದೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಜೊತೆ ಹುಬ್ಬಳ್ಳಿ–ಚೆನ್ನೈ, ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿ ಪರಿಶೀಲನೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಸ್ತೆ ಕಾಮಗಾರಿಗಳ ಲೋಪಗಳ ಬಗ್ಗೆ ಒಂದು ಸುತ್ತಿನ ಮಾತುಕತೆ ಮಾಡಿದ್ದೇವೆ. ಮತ್ತೆ ಸಭೆ ಸೇರಿ ರಸ್ತೆ ದುರಸ್ತಿ ಹಾಗೂ ಈ ಎರಡೂ ನಗರಗಳ ನಡುವಿನ ಪ್ರಮುಖ ಪಟ್ಟಣಗಳಿಗೆ ಆಗಮನ ಮತ್ತು ನಿರ್ಗಮನ ಸಂಪರ್ಕ ಕಲ್ಪಿಸುವ ಬಗ್ಗೆಯು ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು. ಗಣರಾಜ್ಯೋತ್ಸವ ದಿನದಂದು ರಸ್ತೆ ಉದ್ಘಾಟನೆ ಮಾಡಬೇಕೆಂಬ ಅಭಿಲಾಷೆ ಕೇಂದ್ರ ಸಚಿವರಿಗಿದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಾಗದು. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಿ, ರಾಷ್ಟ್ರಕ್ಕೆ ರಸ್ತೆಯನ್ನು ಲೋಕಾರ್ಪಣೆ ಮಾಡಲು ಕೇಂದ್ರ ಭೂ ಸಾರಿಗೆ ಇಲಾಖೆ ಕ್ರಮ ಕೈಗೊಳ್ಳುತ್ತದೆ ಎಂದರು.

ಸ್ಯಾಂಟ್ರೋ ರವಿ ಜೊತೆ ಬಿಜೆಪಿ ನಾಯಕರು ಸಂಪರ್ಕದಲ್ಲಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿ, ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರು ಸ್ಯಾಂಟ್ರೋ ರವಿ ಬಗ್ಗೆ ಹೇಳಿರುವುದು. ಅವರು ಯಾರು ಎಂದೂ ನನಗೆ ಗೊತ್ತಿಲ್ಲ ಎಂದರು.

ರಾಜ್ಯದಲ್ಲಿದ್ದಾರೆ 5,05,48,553 ಅರ್ಹ ಮತದಾರರು

- 221 ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿ ಪರಿಷ್ಕರಣೆ ಅಂತಿಮ
- 5,80,531 ಹೆಚ್ಚುವರಿ ಮತದಾರರು
- ಉಳಿದ ಮೂರು ಕ್ಷೇತ್ರದ್ದು ಜ.15ಕ್ಕೆ ಪೂರ್ಣ

ಬೆಂಗಳೂರು, ಜ.5 (ಕೆಎಂಶಿ)– ಮುಂಬರುವ ವಿಧಾನಸಭೆ ಚುನಾವಣೆಗೆ ರಾಜ್ಯ ಚುನಾವಣಾ ಆಯೋಗವು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿದ್ದು, ಈ ಬಾರಿ ಪುರುಷರು, ಮಹಿಳೆಯರು ಹಾಗೂ ಇತರರು ಸೇರಿದಂತೆ ಒಟ್ಟು 5,05,48,553 ಮಂದಿ ಮತ ಚಲಾಯಿಸುವ ಹಕ್ಕು ಹೊಂದಿದ್ದಾರೆ.

ಇದರಲ್ಲಿ ಪುರುಷರು 2,54,49,775, ಮಹಿಳೆಯರು 2,50,94,326, ಇತರರು 4,502 ಸೇರಿದಂತೆ ಒಟ್ಟು 5,05,48,553 ಮಂದಿ ಮತದಾನದ ಹಕ್ಕು ಹೊಂದಿದ್ದಾರೆ ಎಂದು ರಾಜ್ಯ ಚುನಾವಣಾ ಮುಖ್ಯಾಧಿಕಾರಿ ಮನೋಜ್‌ಕುಮಾರ್ ಮೀನಾ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು 221 ವಿಧಾನಸಭಾ ಕ್ಷೇತ್ರಗಳ ಅಂತಿಮ ಮತದಾರರ ಪರಿಷ್ಕೃತ ಪಟ್ಟಿ ಸಿದ್ಧವಾಗಿದ್ದು, ಉಳಿದಿರುವ ಮೂರು ವಿಧಾನಸಭಾ ಕ್ಷೇತ್ರಗಳ ಪಟ್ಟಿ ಜ.15ರ ನಂತರ ಪ್ರಾದೇಶಿಕ ಆಯುಕ್ತರ ವರದಿ ಬಂದ ನಂತರ ಪ್ರಕಟಿಸುವುದಾಗಿ ಹೇಳಿದರು. ಮಹದೇವಪುರ, ಶಿವಾಜಿನಗರ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಹೆಸರನ್ನು ಪಟ್ಟಿಯಿಂದ ಕೈ ಬಿಡಲಾಗಿದೆ ಎಂಬ ಆರೋಪ ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಆಯುಕ್ತರಿಂದ ತನಿಖೆ ನಡೆಸಿ ▶ 6ನೇ ಪುಟಕ್ಕೆ

ಮೈಸೂರು ಜಿಲ್ಲೆಯ ಮತದಾರರ ಅಂತಿಮ ಪಟ್ಟಿ ಪ್ರಕಟ

ಅರ್ಹ ಮತದಾರ ಸಂಖ್ಯೆ 25,59,855

30,650 ಹೊಸ ಸೇರ್ಪಡೆ, 22,625 ರದ್ದು

ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳಲು ಅರ್ಜಿ ಸಲ್ಲಿಕೆಗೆ ಅವಕಾಶ



ಮೈಸೂರು, ಜ.5– ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ಇಂದು(ಜ.5) ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಂತಿಮ ಮತದಾರರ ಪಟ್ಟಿ ಪ್ರಕಟ ಸಂಬಂಧ ಹಮ್ಮಿಕೊಂಡಿದ್ದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ರಾಜ್ಯ ಇವರ ಅಧಿಕೃತ ಜಾಲತಾಣ https://ceo.karnataka.gov.in ದಲ್ಲಿ ಲಭ್ಯವಿದ್ದು, ಸಾರ್ವಜನಿಕರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾದ ಬಗ್ಗೆ ಪರಿಶೀಲಿಸಿಕೊಳ್ಳಬಹುದಾಗಿದೆ. ಅಲ್ಲದೆ ಸರಿಯಾದ ಹೆಸರನ್ನು ನಮೂದುಗಳೊಂದಿಗೆ ನೋಂದಾಯಿಸಿದ ▶ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಅಮ್ಮ : ಯಾಕೋ ಪುಟ್ಟ... ಪಕ್ಕದ್ಮನೆ ಆಂಟಿ ಒಂದು ಮುತ್ತು ಕೊಡು ಅಂದ್ರೆ ಕೊಡಲಿಲ್ಲವಂತೆ...?

ಮಗ : ಡ್ಯಾಡಿ ಆ ಆಂಟಿಗೆ ಮುತ್ತು ಕೊಟ್ಟಾಗ್ಲೆಲ್ಲಾ 500, 1000 ರೂ. ಇಸ್ಕೊತಿರ್ತಾಳೆ! ನನ್ನತ್ರ ಎಲ್ಲೈತೇ ದುಡ್ಡು !

ಮೈಸೂರು ಮಿತ್ರ

ಶುಕ್ರವಾರ, 6 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........


ಅದೃಷ್ಟ ನಾಳೆ ದೊಡ್ಡ ಲಾಭವನ್ನು ನಿನ್ನ ಪಾಲಿಗೆ ತಂದು ಕೊಡಬಹುದು. ಇಂದು ಹೋದದ್ದು ನಾಳೆ ಬಂದೀತು –ಪೆರವಾಂಟಿಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೊಡುವವನ ಕೈ ಅನುಗಾಲವೂ ಮೇಲೆಯೇ

ನಿಮ್ಮ ಪತ್ರಗಳು

ಮೈಸೂರು–ಬೆಂಗಳೂರು ಹೆದ್ದಾರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರೇ ಸೂಕ್ತ

ಮಾನ್ಯರೆ.



ಮೈಸೂರು ಸಂಸ್ಥಾನದ ದೊರೆಗಳ ಪೈಕಿ ಅಗ್ರಗಣ್ಯ ಸಾಲಿನಲ್ಲಿ ನಿಲ್ಲುವ ನಾಡಿನ ಅಭಿವೃದ್ಧಿಯ ಹರಿಕಾರ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್. ಕೆಲವು ರಾಜಕಾರಣಿಗಳು ಅಧಿಕಾರ ಸಿಕ್ಕಿದ ಕೂಡಲೇ ಮೂರು ತಲೆಮಾರಿಗೆ ಆಗುವಷ್ಟು ಆಸ್ತಿ ಸಂಪಾದನೆ ಮಾಡುವವರು ಇರುವಂತಹ ದಿನಗಳಲ್ಲಿ ಹಾಗೂ ಶಾಸಕರ ಅಥವಾ ಸಚಿವರ ಅನುದಾನ ಯೋಜನೆಯಲ್ಲಿ ಕಟ್ಟಿಸಿರುವ ರಸ್ತೆ ಬದಿಯ ಬಸ್ ನಿಲ್ದಾಣಗಳ ಮೇಲೆ ಖರ್ಚು ಮಾಡಿದ ಹಣದ ಮೊತ್ತದೊಂದಿಗೆ ರಾಜಕಾರಣಿಗಳ ಹೆಸರುಗಳನ್ನು ಕಣ್ಣುಗಳಿಗೆ ರಾಚುವಂತೆ ಬರೆಸಿಕೊಳ್ಳುವ ಇಂದಿನ ದಿನಗಳಲ್ಲಿ ವಿಶ್ವ ಮಟ್ಟದಲ್ಲಿ ನಾಡನ್ನು ಕೊಂಡೊಯ್ದ ದೊರೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್. ಇವರ ಆಡಳಿತ ಅವಧಿಯಲ್ಲಿ ಆದಂತಹ ಜನಪರ ಕೆಲಸಗಳು ಹಿಂದಿನ ತಲೆಮಾರಿನಿಂದ ಇಂದಿಗೂ, ಮುಂದಿನ ತಲೆಮಾರಿಗೂ ಅಚ್ಚಳಿಯದೆ ಇರುವಂತಹದ್ದು.

ಏಷ್ಯಾ ಖಂಡದಲ್ಲೇ ಮೊದಲ ಜಲವಿದ್ಯುತ್ ಕೇಂದ್ರ, ಕಬ್ಬಿಣದ ಕಾರ್ಖಾನೆ, ಗಂಧದ ಎಣ್ಣೆ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಮಂಡ್ಯ ಜಿಲ್ಲೆ ರಚನೆ, ವಿಧವೆಯರ ಮರು ವಿವಾಹ, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ, ಶಾಲಾ ಪ್ರವೇಶಕ್ಕೆ ಜಾತಿ ಪರಿಗಣನೆಯ ನಿಷೇಧ, ಸ್ತ್ರೀಯರಿಗೆ ಮತದಾನ ಹಕ್ಕು, ಗ್ರಾಮ ಪಂಚಾಯಿತಿಗಳ ಕಾಯ್ದೆ ಜಾರಿ, ಬೆಂಗಳೂರಿನ ಮಹಾರಾಣಿ ಕಾಲೇಜು, ಮೈಸೂರು ಸ್ಟೇಟ್ ಬ್ಯಾಂಕ್, ಮೈಸೂರು ರಾಜ್ಯ ರೈಲ್ವೇ, ಬೆಂಗಳೂರು ಟೌನ್‌ಹಾಲ್, ಮೈಸೂರು ಮೆಡಿಕಲ್ ಕಾಲೇಜು, ವಾಣಿ ವಿಲಾಸ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ, ಮೈಸೂರು ಸಕ್ಕರೆ ಕಾರ್ಖಾನೆ, ಮೊಟ್ಟ ಮೊದಲ ಬಾರಿಗೆ ದಾರಿದೀಪ ಅಳವಡಿಕೆ, ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆ, ಮೈಸೂರು ವಿಶ್ವವಿದ್ಯಾನಿಲಯ ಆರಂಭ, ದೇವದಾಸಿ ಪದ್ಧತಿ ನಿಷೇಧ, ವೇಶ್ಯಾವೃತ್ತಿ ತಡೆಗಟ್ಟುವ ಕಾಯ್ದೆ, ಮೈಸೂರಿನ ಕ್ಷಯರೋಗ ಆಸ್ಪತ್ರೆ, ಇತರೆ ಸಾವಿರಾರು ಜನಪರ ಕಾಳಜಿ ಕಾರ್ಯಕ್ರಮ ಮಾಡಿದ ನಾಡಿನ ನಿರ್ಮಾತೃಗಳಾದ ರಾಜಋಷಿ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ಮೈಸೂರು–ಬೆಂಗಳೂರು ಹೆದ್ದಾರಿಗೆ ಸೂಚಿಸಿರುವುದು ಸೂಕ್ತ ಹಾಗೂ ಸರ್ಕಾರ ಇದನ್ನು ಪರಿಗಣಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರನ್ನು ನಾಮಕರಣ ಮಾಡಲಿ.

– ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

'ನಮ್ಮ ಕ್ಲಿನಿಕ್' ವಿಜಯನಗರ 4ನೇ ಹಂತದಲ್ಲಿ ತೆರೆಯಲಿ

ಮಾನ್ಯರೆ,

'ನಮ್ಮ ಕ್ಲಿನಿಕ್' ಬಿಜೆಪಿ ಸರ್ಕಾರದ ಮಹತ್ವಾಕಾಂಕ್ಷಿ ಹಾಗೂ ಜನೋಪಯೋಗಿ ಯೋಜನೆ. ಮೈಸೂರು ನಗರದಲ್ಲಿಯೇ ದೊಡ್ಡ ಬಡಾವಣೆಯಾದ ವಿಜಯನಗರ 4ನೇ ಹಂತದಲ್ಲಿ ಇಂತಹ ನಮ್ಮ ಕ್ಲಿನಿಕ್ ತೆರೆದರೆ ಈ ಭಾಗದ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಈ ಬಡಾವಣೆಯಲ್ಲಿ ಸರ್ಕಾರದ ಯಾವುದೇ ಆರೋಗ್ಯ ಕೇಂದ್ರಗಳು ಇಲ್ಲದ ಕಾರಣ 'ನಮ್ಮ ಕ್ಲಿನಿಕ್' ಆದರೂ ತೆರೆಯಲಿ ಎಂಬುದು ಈ ಭಾಗದ ಜನರ ಆಶಯ.

–ಬಿ.ಜಿ. ರಂಗೇಗೌಡ, ಮೈಸೂರು.

ದಿನಸಿ ವಸ್ತುಗಳು, ಅಡುಗೆ ಸಿಲಿಂಡರ್ ಕೈಗೆಟಕುವ ದರದಲ್ಲಿ ದೊರೆಯಲಿ

ಮಾನ್ಯರೆ

ಅಗತ್ಯ ದಿನಸಿ ವಸ್ತುಗಳ ಬೆಲೆ ಹಾಗೂ ಅಡುಗೆ ಗ್ಯಾಸ್ ಸಿಲಿಂಡರ್ ಬೆಲೆ ಕೇಂದ್ರ ಸರ್ಕಾರದ ಹೊಣೆಗೇಡಿ, ಬೇಜವಾಬ್ದಾರಿತನದಿಂದ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿರುವುದು ಖಂಡನೀಯ. ಈ ಬಗ್ಗೆ ಚಕಾರ ಎತ್ತದೇ ಲೋಕಸಭಾ ಸದಸ್ಯರು ಸದನದಲ್ಲಿ ಕಾಲಹರಣ ಮಾಡುತ್ತಿರುವುದು ವಿಷಾದನೀಯ. ಲೋಕಸಭಾ ಸದಸ್ಯರಿಗೆ ಮಾನವೀಯತೆ ಇಲ್ಲವೇ? ನಿರ್ಮಲಾ ಸೀತಾರಾಮನ್‌ಗೆ ನಾಗರಿಕರ ಬಗ್ಗೆ ಕಾಳಜಿ ಇಲ್ಲ. ಅಡುಗೆ ಸಿಲಿಂಡರ್ ಬೆಲೆ ದಿನ ದಿನಕ್ಕೂ ಏರಿಸಿ ಬಡಜನರ ಪಾಲಿಗೆ ನರಕ ತೋರಿಸುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟವರು ತುರ್ತು ಕ್ರಮ ಕೈಗೊಂಡು ದಿನಸಿ ವಸ್ತುಗಳು ಹಾಗೂ ಅಡುಗೆ ಸಿಲಿಂಡರ್ ಅನ್ನು ಬಡಜನರಿಗೆ ಕೈಗೆಟಕುವ ದರದಲ್ಲಿ ನೀಡಬೇಕೆಂದು ಮನವಿ.

– ನೊಂದ ಅಸಂಖ್ಯಾತ ನಾಗರಿಕರು, ಮೈಸೂರು.

ನಂದಿನಿ–ಅಮುಲ್ ವಿಲೀನ ಬೇಡವೇ ಬೇಡ

ಮಾನ್ಯರೆ,

ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಕೆಎಂಎಫ್ ಅನ್ನು ಅಮುಲ್ ಜೊತೆಗೆ ವಿಲೀನಗೊಳಿಸುವ ಹೇಳಿಕೆ ತುಂಬಾ ಅಪಾಯಕಾರಿ ಮತ್ತು ಆಘಾತಕಾರಿ. ನಂದಿನಿ ಕನ್ನಡಿಗರ ಹೆಮ್ಮೆ. ಇದನ್ನು ಕಟ್ಟಿ ಬೆಳೆಸಲು ಕನ್ನಡಿಗರ ಪರಿಶ್ರಮ ಮಹತ್ತರವಾದದ್ದು, 1975 ರಿಂದಲೂ ಅಭಿವೃದ್ಧಿ ಹೊಂದುತ್ತಾ ವಾರ್ಷಿಕ 1.5 ಲಕ್ಷ ಕೋಟಿ ವಹಿವಾಟು ನಡೆಸುತ್ತಿರುವ ನಂದಿನಿ ಬೆಳವಣಿಗೆ ತುಂಬಾ ಗಹನವಾದದ್ದು. ಅಮುಲ್ ಸ್ಥಾಪಿಸಿ ಉನ್ನತ ಮಟ್ಟಕ್ಕೆ ತಲುಪಲು ಕಾರಣರಾದ ಡಾ.ಕುರಿಯನ್ ಅವರನ್ನು ಅಮುಲ್ ಸಂಸ್ಥೆಯಿಂದಲೇ ಹೊರಹಾಕಲಾಯಿತು. ಅಮುಲ್ ಮೊದಲಿನಷ್ಟು ಸುಸ್ಥಿತಿಯಲ್ಲಿ ಇಲ್ಲದ ಕಾರಣ ನಂದಿನಿಯನ್ನು ವಿಲೀನ ಮಾಡುವ ಹೇಳಿಕೆ ತುಂಬಾ ಹಾಸ್ಯಾಸ್ಪದವಾದದ್ದು. ಅಮುಲ್‌ಗೆ, ನಂದಿನಿ ಪ್ರತಿಸ್ಪರ್ಧಿಯಾಗಿ ಬೆಳೆದು ಉತ್ತಮವಾದ ಸ್ಥಾನದಲ್ಲಿದೆ. ಗುಜರಾತ್‌ನಲ್ಲಿ ಪಶುಗಳ ಆಹಾರ ಮತ್ತು ಮೇವುಗಳ ಬೆಲೆ ಗಗನಕ್ಕೇರಿದ್ದು ಹೈನುಗಾರಿಕೆ ಲಾಭದಾಯಕವಾಗದ ಕಾರಣ ಅಲ್ಲಿನ ರೈತರು ಪರ್ಯಾಯ ವ್ಯವಹಾರದಲ್ಲಿ ತೊಡಗಿ ಹಾಲು ಉತ್ಪಾದನೆ ಕಡಿಮೆಯಾಗಿ, ಉತ್ತರ ಭಾರತದಲ್ಲಿ ಬೇಡಿಕೆ ಇರುವಷ್ಟು ಬೆಣ್ಣೆ ಮತ್ತು ತುಪ್ಪವನ್ನು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ. ಇದನ್ನು ಗಮನಿಸಿದ ಕೇಂದ್ರ ಸರ್ಕಾರ ವಿಲೀನ ಮಾಡುವ ಹೇಳಿಕೆ ನೀಡುತ್ತಿದೆ. ಈ ವಿಲೀನ ಪ್ರಕ್ರಿಯೆ ಕಾರ್ಯಾರಂಭ ಮಾಡಿದರೆ ಕರ್ನಾಟಕದ ಜನತೆ ಅದರ ವಿರುದ್ಧ ಉಗ್ರ ಹೋರಾಟ ಮಾಡಿ ನಮ್ಮ ಹೆಮ್ಮೆಯ ನಂದಿನಿಯನ್ನು ಉಳಿಸಿಕೊಂಡು ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವುದು ಸೂಕ್ತ.

–ಬೆಸಗರಹಳ್ಳಿ ರವಿಪ್ರಸಾದ್, ಕೆ.ಸಿ.ನಗರ, ಮೈಸೂರು.

ಇಂದಿನಿಂದ ಹಾವೇರಿಯಲ್ಲಿ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

● ಏಲಕ್ಕಿ ನಾಡಿನಲ್ಲಿ ಮೊಳಗಲಿದೆ ಕನ್ನಡದ ಕಹಳೆ ● ನಗರದೆಲ್ಲೆಡೆ ರಾರಾಜಿಸುತ್ತಿವೆ ಕನ್ನಡ ಬಾವುಟ; ಅಧ್ಯಕ್ಷರ ಮೆರವಣಿಗೆಗೆ ಸಜ್ಜಾಗಿವೆ ಸಾರೋಟುಗಳು ● ಅತಿಥಿಗಳ ಸತ್ಕಾರಕ್ಕೆ ಬಾಯಲ್ಲಿ ನೀರೂರಿಸುವ ಭಕ್ಷ್ಯಗಳು ಸಿದ್ಧವಾಗುತ್ತಿವೆ







ಹಾವೇರಿ,ಜ.5–86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಏಲಕ್ಕಿ ನಾಡು ಹಾವೇರಿ ನಗರ ಸಂಪೂರ್ಣ ಸಜ್ಜಾಗಿದೆ. ನಾಳೆ (ಜ.6) ಯಿಂದ ಜ.8ರವರೆಗೆ ಮೂರು ದಿನ ನಡೆಯಲಿರುವ ಕನ್ನಡ ಜಾತ್ರೆಗೆ ಈಗಾಗಲೇ ಸಾವಿರಾರು ಕನ್ನಡಾಭಿಮಾನಿಗಳು ಹಾವೇರಿಗೆ ಬಂದಿಳಿದಿದ್ದಾರೆ.

ಹಾವೇರಿ ನಗರದಾದ್ಯಂತ ಕನ್ನಡದ ಬಾವುಟಗಳು ರಾರಾಜಿಸುತ್ತಿವೆ. ಪ್ರಮುಖ ವೃತ್ತಗಳು, ರಸ್ತೆಗಳು ವಿದ್ಯುದ್ದೀಪಾಲಂಕಾರದಿಂದ ಕಂಗೊಳಿಸುತ್ತಿವೆ. ಹಾವೇರಿಯ ವೃತ್ತ, ಡಿವೈಡರ್, ಪ್ರವೇಶ ದ್ವಾರ ಹಾಗೂ ಬಸ್ ನಿಲ್ದಾಣದ ಎದುರು ಇರುವ ಸ್ಥಳಗಳನ್ನು ಗುಲಾಬಿ, ಸಾಲ್ವಿಯಾ, ಗೋಲ್ಡನ್ ರಾಡ್, ಜರ್ಬೆರಾ, ಆರ್ಕಿಡ್, ಅಂತೋರಿಯಂ, ಬರ್ಡ್ ಆಫ್ ಪ್ಯಾರಡೈಸ್, ಗಾರ್ಡಿಯೋಲಸ್, ಕಾರ್ನೇಷನ್, ಲಿಲ್ಲಿ ಹೂಗಳಿಂದ ತೋಟಗಾರಿಕೆ ಇಲಾಖೆ ಅಲಂಕಾರಗೊಳಿಸಿದೆ. ನಗರದಾದ್ಯಂತ ಒಂದು ಸಾವಿರ ಕನ್ನಡ ಧ್ವಜಗಳನ್ನು ವಿವಿಧೆಡೆ ಅಳವಡಿಸಲಾಗಿದ್ದು, ನಗರದ ಪ್ರಮುಖ ಪ್ರವೇಶ ದ್ವಾರಗಳನ್ನು ನಿರ್ಮಿಸಲಾಗಿದೆ. ಈ ದ್ವಾರಗಳಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳನ್ನು ಹಾಕಲಾಗಿದೆ.

ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಮೈಸೂರು ಅರಮನೆ ದರ್ಬಾರ್ ಹಾಲ್ ಮಾದರಿಯ ಭವ್ಯ ರಥವನ್ನು ಸಿದ್ಧಪಡಿಸಲಾಗಿದೆ. ಮೆರವಣಿಗೆಗಾಗಿ 15 ಸಾವಿರ ಕನ್ನಡ ಧ್ವಜ, 10 ಸಾವಿರ ಶಲ್ಯ ಸಿದ್ಧವಾಗಿದ್ದು, ಸ್ವಯಂ ಸೇವಕರಿಗೆ ಬ್ಯಾಡ್ಜ್ ಮತ್ತು ಐಡಿ ಕಾರ್ಡ್‌ಗಳನ್ನು ನೀಡಲಾಗುತ್ತದೆ. ನಾಳಿನ ಮೆರವಣಿಗೆಯಲ್ಲಿ 25 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಮೆರವಣಿಗೆ ಸಮಿತಿ ಗೌರವಾಧ್ಯಕ್ಷರೂ ಆದ ಮಾಜಿ ಸಚಿವ ಬಸವರಾಜ ಶಿವಣ್ಣನವರ್ ತಿಳಿಸಿದ್ದಾರೆ.

31 ಜಿಲ್ಲೆಗಳ ಕಸಾಪ ಅಧ್ಯಕ್ಷರನ್ನು ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಕರೆತರಲು 12 ಸಾರೋಟುಗಳು ಸಜ್ಜಾಗಿವೆ. ಒಂದೊಂದು ಸಾರೋಟಿನಲ್ಲಿ ಮೂವರು ಜಿಲ್ಲಾಧ್ಯಕ್ಷರು ಆಸೀನರಾಗಲಿದ್ದಾರೆ. ಚಂಡೆ, ಮದ್ದಳೆ, ನಂದಿ ಧ್ವಜ, ಪೂಜಾ ಕುಣಿತ, ಕಂಸಾಳೆ, ಪುರವಂತಿಕೆ, ಜಗ್ಗಲಿಕೆ, ಡೊಳ್ಳು, ಕರಡಿ ಮಜಲು, ಲಂಬಾಣಿ ನೃತ್ಯ, ಮಹಿಳಾ ವೀರಗಾಸೆ, ಕೋಲಾಟ ಸೇರಿದಂತೆ 100ಕ್ಕೂ ಹೆಚ್ಚು ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವ ಹಿಸಲಿವೆ. ನುಡಿ ಜಾತ್ರೆ ನಡೆಯುವ ವೇದಿಕೆ ಸ್ಥಳದಲ್ಲಿ ಬಾಡದ ಕನಕ ಅರಮನೆ ಮಾದರಿಯ ಕೋಟೆ ಶೈಲಿಯಲ್ಲಿ ಸಮ್ಮೇಳನದ ಪ್ರಧಾನ ವೇದಿಕೆ ಹಾಗೂ ಮುಖ್ಯ ದ್ವಾರವನ್ನು ನಿರ್ಮಿಸಿರುವುದು ವಿಶೇಷವಾಗಿದೆ.

ಸಮ್ಮೇಳನ ನಡೆಯಲಿರುವ 3 ದಿನವೂ ನಿತ್ಯ 1.50 ಲಕ್ಷ ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಅತೀ ಗಣ್ಯರು, ಗಣ್ಯರು ಹಾಗೂ ಸಾಮಾನ್ಯ ವರ್ಗದವರಿಗೆ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಕಲ್ಪಿಸಲಾಗಿದ್ದು, ಮೂರೂ ದಿನವೂ ನಿಗದಿತ ಅವಧಿಯಲ್ಲಿ ಸಾವಯವ ಬೆಲ್ಲದ ಕಾಫಿ, ಟೀ ಪೂರೈಸಲಾಗುತ್ತದೆ. ಸಮ್ಮೇಳನ ನಡೆಯಲಿರುವ ಹಾವೇರಿಯ ಹೊರ ವಲಯದ ಅಜ್ಜಯ್ಯ ದೇವಸ್ಥಾನದ ಎದುರಿನ 128 ಎಕರೆ ವಿಶಾಲವಾದ ಜಾಗದಲ್ಲಿ 35 ಎಕರೆಯಲ್ಲಿ ಕಿಚನ್ ಮತ್ತು ಡೈನಿಂಗ್ ಹಾಲ್ ವ್ಯವಸ್ಥೆ ಮಾಡಲಾಗಿದೆ. 250 ಕೌಂಟರ್‌ಗಳನ್ನು ತೆರೆಯಲಾಗಿದ್ದು, ಪ್ರತೀ ಕೌಂಟರ್‌ಗೆ ಉಸ್ತುವಾರಿಯಾಗಿ ಓರ್ವ ಅಧಿಕಾರಿ ಯನ್ನು ನಿಗದಿಪಡಿಸಲಾಗಿದೆ. ಜೊತೆಗೆ 20 ಸ್ವಯಂ ಸೇವಕರನ್ನು ನಿಯೋಜಿಸಲಾಗುತ್ತದೆ. ಮಹಿಳೆಯರು, ಅಂಗವಿಕಲರು, 70 ವರ್ಷ ಮೇಲ್ಪಟ್ಟ ವೃದ್ಧರು ಹಾಗೂ ಸಮ್ಮೇಳನದ ಸ್ವಯಂ ಸೇವಕರಿಗಾಗಿ ಪ್ರತ್ಯೇಕ ಊಟದ ಕೌಂಟರ್ ವ್ಯವಸ್ಥೆ ಮಾಡಲಾಗಿದೆ.

ಸಮ್ಮೇಳನ ಜಾಗದಲ್ಲಿ 23 ಕಡೆ ನೀರಿನ ಪಾಯಿಂಟ್‌ಗಳನ್ನು ಮಾಡಲಾಗಿದ್ದು, ಕೈತೊಳೆಯಲೆಂದೇ 878 ನಲ್ಲಿ ಹಾಗೂ ಕುಡಿಯುವ ನೀರಿಗಾಗಿ 414 ನಲ್ಲಿಗಳನ್ನು ಅಳವಡಿಸಲಾಗಿದೆ. ದೇವಿ ಹೊಸೂರು ಮತ್ತು ಅಗಡಿಯ ಬಹು ಗ್ರಾಮ ಕುಡಿಯುವ ನೀರು ಯೋಜನೆಯಿಂದ ಶುದ್ಧೀಕರಿಸಿದ ನೀರನ್ನು ಪೂರೈಸುವ ವ್ಯವಸ್ಥೆ ಮಾಡಲಾಗಿದೆ.

ಊಟದ ಮೆನು: ಮೊದಲ ದಿನ ಉಪಹಾರಕ್ಕೆ ಉಪ್ಪಿಟ್ಟು, ಕೇಸರಿಬಾತ್, ಎರಡನೇ ದಿನ ವೆಜಿಟೇಬಲ್ ಬಾತ್, ರವೆ ಉಂಡೆ, ಮೂರನೇ ದಿನ ವಾಂಗಿಬಾತ್, ಮೈಸೂರ್ ಪಾಕ್ ಸಿದ್ಧಪಡಿಸಲಾಗುತ್ತದೆ. ಮಧ್ಯಾಹ್ನದ ಊಟಕ್ಕೆ ಜೋಳದ ರೊಟ್ಟಿ, ಚಪಾತಿ, ಪಲ್ಯ, ಶೇಂಗಾ ಚಟ್ನಿ, ಅನ್ನ–ಸಾರು, ಉಪ್ಪಿನಕಾಯಿ, ಮೊಸರು ಕೊಡಲಾಗುತ್ತದೆ. ರಾತ್ರಿ ಊಟಕ್ಕೆ ನಿತ್ಯ ಒಂದೊಂದು ಬಗೆಯ ಪಾಯಸ, ಜೊತೆಗೆ ಪುಳಿಯೋಗರೆ, ಬಿಸಿಬೇಳೆ ಬಾತ್, ಚಿತ್ರಾನ್ನ, ಅನ್ನ–ಸಾಂಬಾರ್ ನೀಡಲಾಗುತ್ತದೆ.

ಜಿ.ಡಿ.ಹರೀಶ್‌ಗೌಡರ ಕೈಬಲಪಡಿಸುವ ನಿರ್ಧಾರದ ಪ್ರಯತ್ನ ಫಲಶೃತಿ

ಜೆಡಿಎಸ್ ಬೆಂಬಲಿತ ಶಿವಮ್ಮ ಚಿಕ್ಕ ಬೀಚನಹಳ್ಳಿ ಗ್ರಾಪಂ ಅಧ್ಯಕ್ಷೆ



ಹುಣಸೂರು, ಜ.5–ಹುಣಸೂರು ತಾಲೂಕಿನ ಚಿಕ್ಕ ಬೀಚನಹಳ್ಳಿ ಗ್ರಾಪಂನ 13 ಸದಸ್ಯರ ಪೈಕಿ 8 ಮಂದಿ ಕಾಂಗ್ರೆಸ್ ಬೆಂಬಲಿಗರು, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡರ ನೇತೃತ್ವದಲ್ಲಿ ಜೆಡಿಎಸ್ ಸೇರಿದ ಪರಿಣಾಮ ಈ ಗ್ರಾಪಂನಲ್ಲಿ ಇದೇ ಮೊದಲ ಬಾರಿಗೆ ಜೆಡಿಎಸ್ ಬೆಂಬಲಿತ ಅಧ್ಯಕ್ಷೆಯಾಗಿ ಶಿವಮ್ಮ ಬಸವರಾಜು ಅವಿರೋಧವಾಗಿ ಆಯ್ಕೆಯಾದರು.


ಬಿಳಿಕೆರೆ ಭಾಗದ ಮುಖಂಡ ಗೌರಿಶಂಕರ್ (ಮಧು ಬಿಳಿಕೆರೆ) ನೇತೃತ್ವದಲ್ಲಿ ಕಾಂಗ್ರೆಸ್ ಬೆಂಬಲಿತ ಗ್ರಾಪಂ ಸದಸ್ಯರಾದ ಶಿವಮ್ಮ ಬಸವರಾಜು, ದೀಪಾ ಗೋವಿಂದೇಗೌಡ, ಲಕ್ಷ್ಮೀ ಶಿವಕುಮಾರ್, ಸಿದ್ದಮ್ಮ, ಮಂಜು, ನಟರಾಜ್, ರತ್ನಮ್ಮ, ಸಣ್ಣಮ್ಮ ಅವರುಗಳು ಜಿ.ಡಿ.ಹರೀಶ್‌ಗೌಡ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಳ್ಳುವ ಮೂಲಕ ಈ ಗ್ರಾಮ ಪಂಚಾಯ್ತಿ ಆಡಳಿತ ಇದೇ ಪ್ರಥಮ ಬಾರಿಗೆ ಜೆಡಿಎಸ್ ಬೆಂಬಲಿಗರ ಪಾಲಾಗಲು ಕಾರಣಕರ್ತರಾದರು.

ಈ ವೇಳೆ ಮಾತನಾಡಿದ ಜಿ.ಡಿ.ಹರೀಶ್‌ಗೌಡ ಜೆಡಿಎಸ್‌ನ ತತ್ವ ಸಿದ್ಧಾಂತ ಒಪ್ಪಿ ಕಾಂಗ್ರೆಸ್ ಬೆಂಬಲಿತ ಸದಸ್ಯರು ಪಕ್ಷಕ್ಕೆ ಸೇರ್ಪಡೆಗೊಂಡ ಪರಿಣಾಮ ಬಹಳ ವರ್ಷಗಳಿಂದ ಕಾಂಗ್ರೆಸ್ ಭದ್ರಕೋಟೆಯಾಗಿದ್ದ ಚಿಕ್ಕ ಬೀಚನಹಳ್ಳಿ ಗ್ರಾಪಂನಲ್ಲಿ ಜೆಡಿಎಸ್ ಬೆಂಬಲಿತರ ಆಡಳಿತ ಬಂದಿರುವುದು ಸಂತಸ ತಂದಿದೆ ಎಂದರು.

ಬಿಳಿಕೆರೆ ಗೌರಿಶಂಕರ್ ಮಾತನಾಡಿ, ಕಳೆದ 15 ವರ್ಷಗಳಿಂದ ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ. ಹೀಗಾಗಿ ಜೆಡಿಎಸ್ ಅನ್ನು ತಳ ಮಟ್ಟದಿಂದ ಸಂಘಟನೆ ಮಾಡಲಾಗುತ್ತಿದ್ದು, ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಗೆಲ್ಲುವುದು ಶತಸಿದ್ಧ ಎಂದರು. ಈ ವೇಳೆ ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ಬಿಳಿಕೆರೆ ಗ್ರಾಪಂ ಅಧ್ಯಕ್ಷ ಶಿವಶಂಕರ್, ಮನುಗನಹಳ್ಳಿ ಗ್ರಾಪಂ ಅಧ್ಯಕ್ಷ ಚಂದ್ರು, ಪಕ್ಷದ ಮುಖಂಡರಾದ ರಂಜಿತಾ ಚಿಕ್ಕಮಾದು, ಧಣಿ ಕುಮಾರ್, ರಾಮಕೃಷ್ಣ, ಶಿವಕುಮಾರ್, ಕಾಳರ್ವಿ ಗೌಡ, ಶಶಿಗೌಡ, ವೀರೇಗೌಡ, ಬಸವರಾಜ್, ಗೋವಿಂದೇಗೌಡ, ಸ್ವಾಮಿನಾಯಕ, ರಾಜೇಗೌಡ, ಮಹೇಶ್, ಮನು, ಗಾಗೇನಹಳ್ಳಿ ರಾಜೇಶ್, ಯೋಗೇಶ್, ದಿಲೀಪ್, ಚಂದ್ರು, ಮಂಜುನಾಥ್ ಇನ್ನಿತರರಿದ್ದರು.

ಗ್ರಾಪಂನ ಅಧ್ಯಕ್ಷೆಯಾಗಿ ಶಿವಮ್ಮ ಬಸವರಾಜು ಅವಿರೋಧ ಆಯ್ಕೆ ಘೋಷಣೆಯಾಗುತ್ತಿದ್ದಂತೆಯೇ ಗ್ರಾಮಸ್ಥರು ಪಟಾಕಿ ಸಿಡಿಸಿ ಜಿ.ಡಿ.ಹರೀಶ್‌ಗೌಡರಿಗೆ ಜೈಕಾರ ಕೂಗಿ ಸಂಭ್ರಮಿಸಿದರು.

ಮುಡಾ ಉದ್ಯಾನದಲ್ಲಿದ್ದ ಅಕ್ರಮ ನಿರ್ಮಾಣ ನೆಲಸಮ



ಮೈಸೂರು,ಜ.5(ಎಸ್‌ಬಿಡಿ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ವ್ಯಾಪ್ತಿಯ ಉದ್ಯಾನಗಳಲ್ಲಿದ್ದ ಅಕ್ರಮ ನಿರ್ಮಾಣಗಳನ್ನು ಗುರುವಾರ ತೆರವುಗೊಳಿಸಲಾಗಿದೆ.

ಬೋಗಾದಿಯ ಎಸ್‌ಬಿಎಂ ಬಡಾವಣೆ, ದಟ್ಟಗಳ್ಳಿ ಉದ್ಯಾನಗಳಲ್ಲಿದ್ದ ಒಟ್ಟು ಮೂರು ನಿರ್ಮಾಣಗಳನ್ನು ನೆಲಸಮಗೊಳಿಸಲಾಗಿದೆ. ನಿಯಮಾನುಸಾರ ಉದ್ಯಾನದಲ್ಲಿ ಯಾವುದೇ ನಿರ್ಮಾಣ ಮಾಡುವಂತಿಲ್ಲ. ಹಾಗಾಗಿ 3 ನಿರ್ಮಾಣಗಳನ್ನು ಕೆಡವಲಾಗಿದ್ದು, ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಮುಡಾ ಆಯುಕ್ತ ದಿನೇಶ್ ಕುಮಾರ್ ತಿಳಿಸಿದ್ದಾರೆ.

ಎಸ್‌ಬಿಎಂ ಬಡಾವಣೆಯಲ್ಲಿ ಸ್ಥಳೀಯ ನಾಗರಿಕ ವೇದಿಕೆ ವತಿಯಿಂದ ಕಟ್ಟಡ ನಿರ್ಮಿಸಿ, ಅದನ್ನು ಬಳಕೆ ಮಾಡಿಕೊಳ್ಳುತ್ತಿತ್ತು. ಬೋಗಾದಿ ಹಾಗೂ ದಟ್ಟಗಳ್ಳಿ ಉದ್ಯಾನದಲ್ಲೂ ಅಕ್ರಮ ಕಟ್ಟಡಗಳನ್ನು ಜೆಸಿಬಿಯಿಂದ ನೆಲಸಮಗೊಳಿಸಲಾಗಿದೆ. ಉದ್ಯಾನದಲ್ಲಿ ಯಾವ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳೂ ಯಾವುದೇ ರೀತಿಯ ನಿರ್ಮಾಣ ಮಾಡುವಂತಿಲ್ಲ ಎಂದು ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಹೇಳಿದ್ದಾರೆ.

ನಿವಾಸಿಗಳ ಆಕ್ರೋಶ: ಮುಡಾ ಅಧಿಕಾರಿಗಳ ಕ್ರಮವನ್ನು ಎಸ್‌ಬಿಎಂ ಬಡಾವಣೆ ನಿವಾಸಿಗಳ ಹಿತರಕ್ಷಣಾ ಸಂಘ ಖಂಡಿಸಿದೆ. ಬಡಾವಣೆ ವಿನ್ಯಾಸ ನಕ್ಷೆಗೆ 1998ರಲ್ಲಿ ಮುಡಾ ಅನುಮೋದನೆ ನೀಡಿದ್ದು, ಬಡಾವಣೆ ಅಭಿವೃದ್ಧಿಪಡಿಸಿದ ಎಸ್‌ಬಿಎಂ ಹೌಸಿಂಗ್ ಸೊಸೈಟಿಯವರು ಇಲ್ಲಿ ಯಾವುದೇ ಸೌಲಭ್ಯ ಕಲ್ಪಿಸಿಲ್ಲ. ಮುಡಾಗೆ ಮನವಿ ಸಲ್ಲಿಸಿದರೂ ನಮ್ಮ ಕಷ್ಟಕ್ಕೆ ಸ್ಪಂದಿಸಿಲ್ಲ. ಪರಿಣಾಮ 450 ನಿವಾಸಿಗಳಿಗಳು ನಿತ್ಯ ತೊಂದರೆ ಅನುಭವಿಸುತ್ತಿದ್ದೇವೆ. ಹಾಗಾಗಿ ನಾವೇ ಕ್ಷೇಮಾಭಿವೃದ್ಧಿ ಸಂಘದ ಮೂಲಕ ಬಡಾವಣೆ ನಿರ್ವಹಣೆ ಮಾಡಿಕೊಳ್ಳುತ್ತಿದ್ದೇವೆ. ಸಂಘದ ಕಾರ್ಯಸ್ಥಳಕ್ಕಾಗಿ 12 ವರ್ಷಗಳ ಹಿಂದೆ ದೇಣಿಗೆ ಎತ್ತಿ ಬಡಾವಣೆ ಗಡಿರೇಖೆಯ ಜಾಗದಲ್ಲಿ ಪುಟ್ಟ ಕಟ್ಟಡ ನಿರ್ಮಿಸಿಕೊಳ್ಳಲಾಗಿತ್ತು. ಅದರಲ್ಲಿ ಸಾರ್ವಜನಿಕ ದಾಖಲೆಗಳಿದ್ದವು. ಆದರೆ ಇಂದು ಬೆಳಗ್ಗೆ ಯಾವ ಸೂಚನೆ ನೀಡದೆ ಏಕಾಏಕಿ ಕಟ್ಟಡ ನೆಲಸಮಗೊಳಿಸಿದ್ದು, ದಾಖಲೆಗಳೂ ಮಣ್ಣು ಪಾಲಾಗಿವೆ ಎಂದು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ರಂಗಾಯಣದಲ್ಲಿ 'ಸಾಂಬಶಿವ ಪ್ರಹಸನ' ನಾಟಕದಲ್ಲಿ ಡಿಕೆಶಿಗೆ ಅವಹೇಳನ ಕ್ಷಮೆಯಾಚನೆಗೆ ಒಕ್ಕಲಿಗರ ಆಗ್ರಹ; ತಪ್ಪಿದರೆ ರಂಗಾಯಣಕ್ಕೆ ಮುತ್ತಿಗೆ ಎಚ್ಚರಿಕೆ

ಮೈಸೂರು, ಜ.5– ರಂಗಾಯಣದಲ್ಲಿ ಪ್ರದರ್ಶನವಾದ 'ಸಾಂಬಶಿವ ಪ್ರಹಸನ' ನಾಟಕದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಅವಹೇಳನ ಮಾಡಿರುವ ಸಂಬಂಧ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹಾಗೂ ನಾಟಕದ ನಿರ್ದೇಶಕ ಬೇಷರತ್ ಕ್ಷಮೆ ಕೇಳದಿದ್ದರೆ ರಂಗಾಯಣಕ್ಕೆ ಮುತ್ತಿಗೆ ಹಾಕುವುದಾಗಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ ಎಚ್ಚರಿಕೆ ನೀಡಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ ಮಾತನಾಡಿ, ಕಳೆದ ಶನಿವಾರ ರಂಗಾಯಣದಲ್ಲಿ ಪ್ರದರ್ಶನವಾದ 'ಸಾಂಬಶಿವ ಪ್ರಹಸನ' ನಾಟಕದಲ್ಲಿ ಪಾತ್ರವೊಂದರ ಮೂಲಕ ಡಿ.ಕೆ.ಶಿವಕುಮಾರ್ ಅವರನ್ನು ಅವಹೇಳನ ಮಾಡಿರುವುದು ಖಂಡನೀಯ. ಹೀಗೆ ಯಾರನ್ನೂ ಟೀಕೆ ಮಾಡಬಾರದು. ಕಲೆಯನ್ನು ಈ ರೀತಿ ದುರ್ಬಳಕೆ ಮಾಡಿಕೊಳ್ಳಬಾರದು. ಈ ಬಗ್ಗೆ ರಂಗಾಯಣ ನಿರ್ದೇಶಕರು ಕ್ಷಮೆ ಯಾಚಿಸದಿದ್ದರೆ ಸಂಸ್ಥೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದರು. ಸಂಘದ ನಿರ್ದೇಶಕ ಪಿ.ಪ್ರಶಾಂತ್ ಗೌಡ ಮಾತನಾಡಿ, ಘಟನೆಗೆ ಸಂಬಂಧಿಸಿದವರ ವಿರುದ್ಧ ಕ್ರಮ ವಹಿಸುವಂತೆ ಪೊಲೀಸರಿಗೆ ದೂರು ನೀಡಲಾಗಿದೆ. ಅಲ್ಲದೆ ನಾಟಕ ರಚನೆಕಾರರಾದ ಡಾ.ಚಂದ್ರಶೇಖರ ಕಂಬಾರರೂ ಅಸಮಾಧಾನ ವ್ಯಕ್ತಪಡಿಸಿ, ಪೊಲೀಸರಿಗೆ ದೂರು ನೀಡಿದ್ದಾರೆ. ಮೂಲ ರಚನೆಯನ್ನು ಉದ್ದೇಶಪೂರ್ವಕವಾಗಿಯೇ ತಿರುಚಿ ನಾಟಕ ಪ್ರದರ್ಶಿಸಲಾಗಿದೆ. ರಂಗಾಯಣವನ್ನು ರಣಾಂಗಣವಾಗಿ ಪರಿವರ್ತಿಸುವ ಯತ್ನ ನಡೆದಿದೆ. ಆದರೆ ದೂರು ನೀಡಿದ್ದರೂ ಪೊಲೀಸರು ಮಾತ್ರ ಯಾವುದೇ ಕ್ರಮ ಜರುಗಿಸಿಲ್ಲ ಎಂದರು.

ಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಇ.ಚೇತನ್, ಸಹ ಕಾರ್ಯದರ್ಶಿ ಜಯರಾಮ್, ನಿರ್ದೇಶಕರಾದ ಪ್ರಕಾಶ್‌ಗೌಡ, ಕೆ.ಪಿ.ನಾಗಣ್ಣ, ಗುರುರಾಜ್, ಬಿ.ಇ.ಗಿರೀಶ್‌ಗೌಡ ಮತ್ತಿತರರಿದ್ದರು.

ಕೃಷಿ ಕಾಯ್ದೆಗಳ ಹಿಂಪಡೆಯುವಂತೆ ಆಗ್ರಹಿಸಿ ಸಾಗಿರುವ ಸಮಾಜ ಪರಿವರ್ತನಾ ಯಾತ್ರೆ ಜ.8ಕ್ಕೆ ಜಿಲ್ಲೆಗೆ ಪ್ರವೇಶ

ಮಡಿಕೇರಿ ಮೂಲಕ ಆಗಮಿಸುತ್ತಿರುವ ಯಾತ್ರೆ ಹಿನ್ನೆಲೆಯಲ್ಲಿ ಜ.9ಕ್ಕೆ ಸಮಾವೇಶ

ಮೈಸೂರು,ಜ.5(ಎಂಟಿವೈ)–ತಿದ್ದುಪಡಿ ಮಾಡಿರುವ ಕೃಷಿ ಸಂಬಂಧಿತ ಮೂರು ಕಾಯ್ದೆ ಹಿಂಪಡೆಯುವಂತೆ ಆಗ್ರಹಿಸಿ ಕೂಡಲ ಸಂಗಮದಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದವರೆಗೆ ನಡೆಯಲಿರುವ ಸಮಾಜ ಪರಿವರ್ತನಾ ಯಾತ್ರೆ ಮಡಿಕೇರಿ ಮಾರ್ಗವಾಗಿ ಜ.8ರಂದು ಮೈಸೂರು ಪ್ರವೇಶಿಸಲಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಗುರುವಾರ ಜಿಲ್ಲೆಯ ರೈತ ಮುಖಂಡರೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಾಂದೋಲನಗಳ ಮಹಾಮೈತ್ರಿ, ಸಿಟಿಜನ್ ಫಾರ್ ಡೆಮಾಕ್ರಸಿ, ಜನತಂತ್ರ ಪ್ರಯೋಗ ಶಾಲೆ ಸಹಯೋಗದಲ್ಲಿ ಯಾತ್ರೆ ನಡೆಯುತ್ತಿದೆ. ರಾಜ್ಯದ 4 ಭಾಗಗಳಿಂದ ಯಾತ್ರೆ ನಡೆಯುತ್ತಿದೆ. ಜ.5ರಂದು ಮಂಗಳೂರಲ್ಲಿ ಆರಂಭವಾಗಿರುವ ಯಾತ್ರೆ ಜ.7ರಂದು ಮಡಿಕೇರಿ ಪ್ರವೇಶಿಸಲಿದೆ. ಜ.8ರಂದು ಪಿರಿಯಾಪಟ್ಟಣ, ಹುಣಸೂರು ಮಾರ್ಗವಾಗಿ ಮೈಸೂರು ತಲುಪಲಿದೆ. ಜ.9ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಬಹಿರಂಗ ಸಭೆ ನಡೆಯಲಿದೆ. ಸಾಹಿತಿ ದೇವನೂರ ಮಹಾದೇವ, ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಎಸ್.ಆರ್.ಹಿರೇಮಠ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಜ.11ರಂದು ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ನಡೆಯಲಿದೆ ಎಂದರು.

ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗಣತಂತ್ರ ತತ್ವ ಸಿದ್ಧಾಂತಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿವೆ. ಈ ಹಿಂದೆ ಕೇಂದ್ರ ಸರ್ಕಾರ ಕೃಷಿ ಸಂಬಂಧಿತ ಕಾಯ್ದೆಗಳಿಗೆ ತಿದ್ದುಪಡಿ ತಂದು ರೈತರ ಮೇಲೆ ದೌರ್ಜನ್ಯ ನಡೆಸುತ್ತಿದೆ. ಸುದೀರ್ಘ ಹೋರಾಟದ ಬಳಿಕ ಕೇಂದ್ರ ಸರ್ಕಾರ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆದಿದೆ. ಆದರೆ ಕರ್ನಾಟಕ ಸರ್ಕಾರ ಮೂರು ಕರಾಳ ಕೃಷಿ ಕಾಯಿದೆಗಳು ಹಿಂಪಡೆಯುವುದಕ್ಕೆ ಮೀನಾಮೇಷ ಎಣಿಸುತ್ತಿದೆ. ಈ ಹಿನ್ನೆಲೆಯಲ್ಲಿ ತಿದ್ದುಪಡಿ ಮಾಡಿರುವ ಕಾಯ್ದೆಗಳನ್ನು ಹಿಂಪಡೆಯಬೇಕು. ಉದ್ಯೋಗ ಹಕ್ಕು, ಸಂವಿಧಾನದ ರಕ್ಷಣೆ ಮತ್ತು ಸೌಹಾರ್ದ ಸಮಾಜ ನಿರ್ಮಾಣ, ವರಮಾನ–ಬಂಡವಾಳಮುಖಿ ಅಭಿವೃದ್ಧಿಗೆ ಪ್ರತಿಯಾಗಿ ಜನಮುಖಿ, ರೈತಮುಖಿ, ಮಹಿಳಾಮುಖಿ ಅಭಿವೃದ್ಧಿಗಾಗಿ ಆಗ್ರಹಿಸಿ ಸತ್ಯಾಗ್ರಹ ನಡೆಸಲಾಗುತ್ತಿದೆ ಎಂದರು.

ಮುಖಂಡ ಪ್ರಸನ್ನ ಎನ್.ಗೌಡ ಮಾತನಾಡಿ, ರೈತರು, ಕಾರ್ಮಿಕರು, ದಲಿತರ ಮಾರಕವಾಗುವಂತಹ ಕಾಯಿದೆಯನ್ನು ರೂಪಿಸುತ್ತಿರುವ ಭ್ರಷ್ಟ ಕೇಂದ್ರ ಮತ್ತು ರಾಜ್ಯದ ಡಬಲ್ ಇಂಜಿನ್ ಸರ್ಕಾರಗಳನ್ನು ಕಿತ್ತೊಗೆಯಲು ಸತ್ಯಾಗ್ರಹ ಯಾತ್ರೆ ಹಮ್ಮಿಕೊಂಡಿದ್ದೇವೆ. ಎರಡು ಕೃಷಿ ಕಾಯಿದೆ ವಾಪಸ್ ಪಡೆದಿಲ್ಲ. ಕೃಷಿ ಉತ್ಪನ್ನಗಳಿಗೆ ರೈತರು ಅರ್ಧ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ವೈಜ್ಞಾನಿಕ ಬೆಲೆ ನಿಗದಿಗಾಗಿ ಸ್ವಾಮಿನಾಥನ್ ವರದಿ ಜಾರಿಗೊಳಿಸುವಂತೆ ಒತ್ತಾಯಿಸಲಿದ್ದೇವೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ವಕೀಲ ಎನ್.ಪುನೀತ್, ಆನಂದೂರು ಪ್ರಭಾಕರ್, ಮಹದೇವ ನಾಯಕ, ಸಿಂಗೇರಿಗೌಡ, ಸಿರಿಮಳ್ಳಿ ಸಿದ್ದಪ್ಪ, ಚಂದ್ರ, ಮಂಡಕಳ್ಳಿ ಮಹೇಶ್, ಮರಂಕಯ್ಯ, ಮಹಾಲಿಂಗು, ಗೋವಿಂದರಾಜು, ಬಸಪ್ಪ ರಾಘವೇಂದ್ರ ಉಪಸ್ಥಿತರಿದ್ದರು.

ಇಂದು ಕ್ಯಾಲೆಂಡರ್ ಬಿಡುಗಡೆ

ಮೈಸೂರು,ಜ.5–ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಜ.6(ಶುಕ್ರವಾರ) ಮಧ್ಯಾಹ್ನ 1 ಗಂಟೆಗೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕ್ಯಾಲೆಂಡರ್ ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದು, ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ ಅಧ್ಯಕ್ಷತೆ ವಹಿಸಲಿದ್ದಾರೆ. ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದು, ರಾಷ್ಟ್ರ ಹಾಗೂ ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತೆ ಎಸ್.ಕವಿತಾ ಅವರನ್ನು ಅಭಿನಂದಿಸಲಾಗುವುದು.


ಕಣ್ಣಿನ ಪೊರೆ ತಪಾಸಣೆ ಶಿಬಿರ

ಮೈಸೂರು,ಜ.5–ಮೈಸೂರಿನ ಜೆಪಿನಗರ ಎ ಬ್ಲಾಕ್‌ನಲ್ಲಿರುವ ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯಲ್ಲಿ ಜ.7ರವರೆಗೆ ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಬೆಳಗ್ಗೆ 10ರಿಂದ ಸಂಜೆ 4ರವರೆಗೆ ತಪಾಸಣೆ ನಡೆಯಲಿದ್ದು, ರಿಯಾಯಿತಿ ದರದಲ್ಲಿ ಶಸ್ತ್ರಚಿಕಿತ್ಸೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 7406284552 ಅಥವಾ 0821–4056837 ಅನ್ನು ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಯಾವ ರಾಜಕೀಯ ನಾಯಕರಿಗೂ 'ಸಾಂಬಶಿವ ಪ್ರಹಸನ' ನಾಟಕದಲ್ಲಿನ ಪಾತ್ರಗಳು ಅನ್ವಯಿಸಲ್ಲ

● ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಸ್ಪಷ್ಟನೆ ● ಮೇಲಾಗಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹೆಸರನ್ನೇ ನಾಟಕದಲ್ಲಿ ಪ್ರಸ್ತಾಪಿಸಿಲ್ಲ


ಅಡ್ಡಂಡ ಸಿ.ಕಾರ್ಯಪ್ಪ

ಮೈಸೂರು,ಜ.5(ಎಂಟಿವೈ)– ಮೈಸೂರಿನ ರಂಗಾಯಣದಲ್ಲಿ ಪ್ರದರ್ಶನಗೊಂಡ 'ಸಾಂಬಶಿವ ಪ್ರಹಸನ' ನಾಟಕದಲ್ಲಿ ಯಾವುದೇ ರಾಜಕೀಯ ನಾಯಕರನ್ನು ಅಪಮಾನಿಸಿಲ್ಲ. ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಹೆಸರನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಸ್ಪಷ್ಟಪಡಿಸಿದ್ದಾರೆ.

ಟಿಪ್ಪು ನಿಜಕನಸುಗಳು ನಾಟಕ ಪ್ರದರ್ಶನದ ಹಿನ್ನೆಲೆಯಲ್ಲಿ ಮಂಗಳೂರಿಗೆ ನಾಟಕ ತಂಡದೊಂದಿಗೆ ತೆರಳಿರುವ ಅಡ್ಡಂಡ ಕಾರ್ಯಪ್ಪ ಮೊಬೈಲ್ ಮೂಲಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಸಾಂಬಶಿವ ಪ್ರಹಸನ ನಾಟಕದಲ್ಲಿ ಯಾವುದೇ ರಾಜಕಾರಣಿ ಇಲ್ಲವೇ ನಾಯಕರನ್ನು ಅಪಮಾನಿಸಿಲ್ಲ. ನನ್ನ ವಿರುದ್ಧ ಪಿತೂರಿ ನಡೆಸುತ್ತಿರುವವರು ಈ ವಿವಾದ ಸೃಷ್ಟಿಸಿದ್ದಾರೆ. 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಕ್ಕಾಗಿ ನಾನು ಶಿವಮೊಗ್ಗ ಹಾಗೂ ಮಂಗಳೂರು ಯಾತ್ರೆ ಕೈಗೊಂಡಿದ್ದೇನೆ. ನಾನು ಇಲ್ಲದ ವೇಳೆ ನಾಟಕದಲ್ಲಿ ನಮ್ಮ ನಾಯಕರಿಗೆ ಅಪಮಾನ ಮಾಡಲಾಗಿದೆ ಎಂದು ವಿವಾದ ಸೃಷ್ಟಿ ಮಾಡಿದ್ದಾರೆ ಎಂದರು.

ಸಾಹಿತಿ ಡಾ.ಚಂದ್ರಶೇಖರ್ ಕಂಬಾರರ 'ಸಾಂಬಶಿವ ಪ್ರಹಸನ' ನಾಟಕ ಪುಸ್ತಕದಲ್ಲಿ ರಂಗ ಪ್ರಯೋಗದ ಮೂಲಕ ನಾಟಕ ಪ್ರದರ್ಶನಕ್ಕೆ ಅನುಮತಿ ಪಡೆಯಬೇಕು, ಪ್ರದರ್ಶನಕ್ಕಾಗಿ ಶುಲ್ಕ ನೀಡಬೇಕು ಎಂದು ನಮೂದಿಸಿಲ್ಲ. ಕೆಲವು ಸಾಹಿತಿಗಳು ತಮ್ಮ ಪುಸ್ತಕದಲ್ಲಿ, ನಾಟಕ ಪ್ರದರ್ಶನಕ್ಕೆ ಅನುಮತಿ ಪಡೆಯಬೇಕು, ಹಣ ನೀಡಬೇಕು ಎಂದು ಬರೆದಿರುತ್ತಾರೆ. ಆದರೆ, ಈ ನಾಟಕ ನಿರ್ದೇಶಕರು ಆಯ್ಕೆ ಮಾಡಿಕೊಂಡಿರುವ ಪುಸ್ತಕದಲ್ಲಿ ಎಲ್ಲಿಯೂ ಅನುಮತಿ ಪಡೆಯುವ ಬಗ್ಗೆ ಪ್ರಸ್ತಾಪವಾಗಿಲ್ಲ. ಹಾಗಾಗಿ ನಾಟಕ ಪ್ರದರ್ಶನಕ್ಕೆ ರಂಗಾಯಣ ಅನುಮತಿ ನೀಡಿದೆ. ನಾಟಕದ ಮೂಲ ವಸ್ತು ವಿಷಯ ತಿರುಚಿಲ್ಲ. ಕೆಲವು ಹಾಸ್ಯ ಸನ್ನಿವೇಶ ಸೇರಿಸಲಾಗಿದೆ. ಅದರಲ್ಲಿ ಯಾವುದೇ ವ್ಯಕ್ತಿಯ ಹೆಸರನ್ನು ನೇರವಾಗಿ ಉಲ್ಲೇಖಿಸಿಲ್ಲ. ಇದು ರಾಜನ ಆಳ್ವಿಕೆಯ ಕಥೆ ಇರುವ ನಾಟಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಮಾಜಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಹಲವು ನಾಯಕರನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಸ್ಯಭರಿತವಾಗಿ ವಿವಿಧ ಉಡುಪಿನಲ್ಲಿ ಟೀಕಿಸುವುದನ್ನು ನಾವು ಕಾಣುತ್ತೇವೆ. ಅದ್ಯಾವುದಕ್ಕೂ ಸೃಷ್ಟಿಯಾಗದ ವಿವಾದ ಈ ನಾಟಕಕ್ಕೆ ಏಕೆ? ಎಂದು ಪ್ರಶ್ನಿಸಿದರಲ್ಲದೆ, ಡಿ.31ಕ್ಕೆ ರಂಗಾಯಣದ ನಿರ್ದೇಶಕ ಸ್ಥಾನ ಅಲಂಕರಿಸಿ ಮೂರು ವರ್ಷವಾಗಿದೆ. ನನ್ನ ಅವಧಿ ಮುಗಿಯುತ್ತಿದೆ ಎಂದು ಭಾವಿಸಿ, ಕೆಲವರು ಸಂಚು ಮಾಡುತ್ತಿದ್ದಾರೆ. ಆದರೆ, ಸರ್ಕಾರ ನನ್ನ ಸೇವೆ ಮುಂದುವರೆಸಿದೆ. ಈಗಲೂ ನಾನು ರಂಗಾಯಣದ ನಿರ್ದೇಶಕನಾಗಿಯೇ ಇದ್ದೇನೆ. ಈ ಹಿಂದೆ ನನ್ನ ವಿರುದ್ಧ ನಡೆಸಿದ ಸಂಚಿಗೆ ನಾನು ಹೆದರಿಲ್ಲ ಎಂದು ಸ್ಪಷ್ಟಪಡಿಸಿದರು.

ಇಂದಿನಿಂದ 3 ದಿನ ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ

● ಲಲಿತ ಮಹಲ್ ಹೋಟೆಲ್‌ನಲ್ಲಿ ವ್ಯವಸ್ಥೆ ● ಆಯ್ದ ಪ್ರದೇಶಗಳಲ್ಲಿ ಪದಾಧಿಕಾರಿಗಳ ಚರ್ಚೆ




ಮೈಸೂರು,ಜ.5(ಎಸ್‌ಬಿಡಿ)–ಮೈಸೂರಿನಲ್ಲಿ ನಾಳೆ(ಡಿ.6)ಯಿಂದ 3 ದಿನ ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಯಲಿದೆ ಎಂದು ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.


ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲಲಿತ ಮಹಲ್ ಹೋಟೆಲ್ ಸಭಾಂಗಣದಲ್ಲಿ ಮೂರು ದಿನಗಳ ಕಾಲ ನಡೆಯಲಿರುವ ಕಾರ್ಯಕಾರಿಣಿ ಸಭೆಯಲ್ಲಿ ಪಕ್ಷದ ಅನೇಕ ನಾಯಕರು ಭಾಗವಹಿಸಲಿದ್ದಾರೆ. ವಿವಿಧ ರಾಜ್ಯಗಳಿಂದ ಆಗಮಿಸುವ ಎಸ್ಸಿ ಮೋರ್ಚಾದ ಪದಾಧಿಕಾರಿಗಳು ನಾಳೆ(ಜ.6) ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಜಿಲ್ಲೆಯ ಆಯ್ದ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿನ ನಿವಾಸಿಗಳೊಂದಿಗೆ ಚರ್ಚಿಸಲಿದ್ದಾರೆ. ಸಂಜೆ 6ಕ್ಕೆ ಕಾರ್ಯಕಾರಿಣಿ ಪ್ರದರ್ಶಿನಿ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು ಸಭೆ ನಡೆಸಲಿದ್ದಾರೆ ಎಂದು ಹೇಳಿದರು.

ಸಿಎಂ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜ.7ರಂದು ಬೆಳಗ್ಗೆ 10.30ಕ್ಕೆ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿಯನ್ನು ವಿದ್ಯುಕ್ತವಾಗಿ ಉದ್ಘಾಟಿಸಲಿದ್ದಾರೆ. ಎಸ್ಸಿ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಸಂಸದ ವಿ.ಶ್ರೀನಿವಾಸ್ ಪ್ರಸಾದ್, ಸಚಿವರಾದ ಗೋವಿಂದ ಕಾರಜೋಳ, ಪ್ರಭು ಚೌಹಾಣ್, ಶಾಸಕರಾದ ಎಸ್.ಅಂಗಾರ, ಎನ್.ಮಹೇಶ್, ಹರ್ಷವರ್ಧನ್ ಮತ್ತಿತರರು ಭಾಗವಹಿಸಲಿದ್ದಾರೆ. ಜ.8ರಂದು ಮಧ್ಯಾಹ್ನ 1 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಭಾಗವಹಿಸಿ, ಸಲಹೆ ನೀಡಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಜಿಲ್ಲಾ ಸಹ ವಕ್ತಾರ ಡಾ.ವಸಂತ್ ಕುಮಾರ್, ಜಿಲ್ಲಾ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಉಪಸ್ಥಿತರಿದ್ದರು.









ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಬಯಸುವುದೇನೆಂದರೆ, ನನ್ನ ಕಕ್ಷಿದಾರರು ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದಲ್ಲಿನ ಸರ್ವೆ ನಂ.121/7 (ಹಳೇ ಸರ್ವೆ ನಂ.121/2) ರಲ್ಲಿನ 0 ಎಕರೆ 10.08 ಗುಂಟೆ (ಈ ಕೆಳಗೆ ಐಟಂ ನಂ.1 ರಲ್ಲಿ ನಮೂದಿಸಿರುವ ಸ್ವತ್ತು) ಹಾಗೂ ಸರ್ವೆ ನಂ.122/8 (ಹಳೇ ಸರ್ವೆ ನಂ.122/1) ರಲ್ಲಿನ 0 ಎಕರೆ 32 ಗುಂಟೆ ಜಮೀನನ್ನು, (ಈ ಕೆಳಗೆ ಐಟಂ ನಂ.2 ರಲ್ಲಿ ನಮೂದಿಸಿರುವ ಸ್ವತ್ತು) ಇದರ ಪ್ರಸ್ತುತ ಮಾಲೀಕರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದಲ್ಲಿ ವಾಸವಾಗಿರುವ ರಾಜೇಶ್, ಬಿನ್ ಶಿವೇಗೌಡ ರವರಿಂದ ಖರೀದಿಸಲು ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರಿಗಾದರು, ಯಾವುದೇ ತರಹದ ಹಕ್ಕು-ಬಾಧ್ಯತೆಗಳು ಇದ್ದ ಪಕ್ಷದಲ್ಲಿ, ಸದರಿ ವ್ಯಕ್ತಿಗಳು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ನಿಮ್ಮ ಹಕ್ಕು-ಬಾಧ್ಯತೆಗಳನ್ನು ಈ ಸಾರ್ವಜನಿಕ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗಾಗಿ ತಿಳಿಸತಕ್ಕದು. ತಪ್ಪಿದಲ್ಲಿ ಯಾವುದೇ ಹಕ್ಕು-ಬಾಧ್ಯತೆಗಳು ಇರುವುದಿಲ್ಲವೆಂದು ಭಾವಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತುಗಳ ವಿವರ

ಐಟಂ ನಂ.1 : ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.121/7 (ಹಳೇ ಸರ್ವೆ ನಂ.121/2) ರಲ್ಲಿನ 0 ಎಕರೆ 10.08 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: **ಪೂರ್ವಕ್ಕೆ:** ಸಿದ್ದೇಗೌಡ ರವರ ಜಮೀನು, **ಪಶ್ಚಿಮಕ್ಕೆ :** ಬೊಮ್ಮಯ್ಯನ ಜಮೀನು, **ಉತ್ತರಕ್ಕೆ:** ಸರ್ವೆ ನಂ. 122/1 ರ ಜಮೀನು, **ದಕ್ಷಿಣಕ್ಕೆ :** ಕೆಂಚೇಗೌಡ ರವರ ಜಮೀನು,

ಐಟಂ ನಂ.2 : ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.122/8 (ಹಳೇ ಸರ್ವೆ ನಂ.122/1) ರಲ್ಲಿನ 0 ಎಕರೆ 32 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ : **ಪೂರ್ವಕ್ಕೆ :** ಸಿದ್ದೇಗೌಡ ರವರ ಜಮೀನು, **ಪಶ್ಚಿಮಕ್ಕೆ:** ಕಾಲುವೆ, **ಉತ್ತರಕ್ಕೆ:** ಸಪ್ಪೇಗೌಡ ರವರ ಜಮೀನು, **ದಕ್ಷಿಣಕ್ಕೆ:** ಬೊಮ್ಮಯ್ಯನವರ ಜಮೀನು.

ಕೆ.ಎಸ್ ಮಹದೇವ ಪ್ರಸಾದ್ ವಕೀಲರು,
ನಂ. 1028, ಸಿ.ಹೆಚ್.20/ಡಿ, ರೂಮ್ ನಂ.2 ಮತ್ತು 3, 1ನೇ ಮಹಡಿ, ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಮೈಸೂರು–570005,
ಮೊ: 9164277766

ಕಛೇರಿ : 08229-222226
Fax : 08229-222226
Helpline : 08229-223377
E-mail:tmc_gundlupet@yahoo.com
Website:www.gundlupettown.gov.in

ಪುರಸಭಾ ಕಾರ್ಯಾಲಯ, ಗುಂಡ್ಲುಪೇಟೆ

ಚಾಮರಾಜನಗರ ಜಿಲ್ಲೆ–571111

ಸಂಖ್ಯೆ: ಪುಗು/ಕಿಅ/ಪಿಆರ್/18/ಪುರಸಭೆ ಅನುದಾನ(2022–23)ಅನುದಾನ/2022–23 ದಿನಾಂಕ: 04.1.2023

ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ)


ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಡಬ್ಲ್ಯೂ–1 (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್) ಷರತ್ತುಗಳಿಗೆ ಒಳಪಟ್ಟಂತೆ ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್ಮೆಂಟ್ ಮೂಲಕ ಆನ್‌ಲೈನ್‌ನಲ್ಲಿ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ; 18.1.2023 ಸಂಜೆ 4.00 ವರೆಗೆ, ಟೆಂಡರ್‌ನ್ನು ತೆರೆಯುವ ದಿನಾಂಕ; 20.1.2023.

01. ಗುಂಡ್ಲುಪೇಟೆ ಪಟ್ಟಣ ವ್ಯಾಪ್ತಿಯ ನೆಹರು ಸರ್ಕಲ್ ಬಳಿಯಿರುವ ಬಯಲುರಂಗಮಂದಿರದ ವೇದಿಕೆ ಎತ್ತರಿಸುವ ಕಾಮಗಾರಿ ಮತ್ತು ಫಾಲ್ಸ್ ಸೀಲಿಂಗ್ ಕಾಮಗಾರಿ. ರೂ. 11.15 ಲಕ್ಷ. ಇಂಡೆಂಟ್: 144530.

ಮೇಲಿನ ಕಾಮಗಾರಿಗಳಿಗೆ ಕಾಲಾವಧಿ(ಮಳೆಗಾಲ ಸೇರಿ);– 05 ತಿಂಗಳು. ಮೇಲಿನ ಎಲ್ಲಾ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರ ದರ್ಜೆ:– 3ನೇ ದರ್ಜೆ ಮೇಲ್ಪಟ್ಟು. ಕಾಮಗಾರಿಗಳ ವಿವರಗಳನ್ನು www.eproc.karnataka.gov.in ಮತ್ತು ಇತರೆ ಷರತ್ತುಗಳ ಬಗ್ಗೆ ಸಂಬಂಧಪಟ್ಟ ತಾಂತ್ರಿಕ ಶಾಖೆಯಲ್ಲಿ ತಿಳಿದುಕೊಳ್ಳಬಹುದು.

ಸಹಿ/– **ಪಿ.ಗಿರೀಶ್**
ಅಧ್ಯಕ್ಷರು, ಪುರಸಭೆ, ಗುಂಡ್ಲುಪೇಟೆ

ಸಹಿ/– **ಆರ್.ಹೇಮಂತರಾಜು.**
ಮುಖ್ಯಾಧಿಕಾರಿ, ಪುರಸಭೆ, ಗುಂಡ್ಲುಪೇಟೆ.





ಭಾವಪೂರ್ಣ ಶ್ರದ್ಧಾಂಜಲಿ



1944–2022

ಶ್ರೀಮತಿ ಎಸ್.ವಿ. ಲಕ್ಷ್ಮಮ್ಮ ಸಂಜೀವಯ್ಯ ರವರು

ನಿವೃತ್ತ ಮಹಿಳಾ ಅರೋಗ್ಯ ಸಂದರ್ಶನಾಧಿಕಾರಿ (LHV)

ದಿವಂಗತ ಶ್ರೀ ಫಾರೆಸ್ಟ್ ಎಂ. ಸಂಜೀವಯ್ಯ ರವರ ಧರ್ಮಪತ್ನಿ

ಆತ್ಮೀಯರೇ...,

ನಮ್ಮ ತಾಯಿ ಬಡವರ ಕಣ್ಮಣಿ, ಜನಾನುರಾಗಿ **ಶ್ರೀಮತಿ ಎಸ್.ವಿ. ಲಕ್ಷ್ಮಮ್ಮಸಂಜೀವಯ್ಯ** ಇವರು ದಿನಾಂಕ: 27–12–2022 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ನೋವಿನ ಸಮಯದಲ್ಲಿ ನಮ್ಮ ಕುಟುಂಬಕ್ಕೆ ಧೈರ್ಯತುಂಬಿ, ಅಂತಿಮ ದರ್ಶನ ಮಾಡಿದ ಹಾಗೂ ಅನಿವಾರ್ಯ ಕಾರಣಗಳಿಂದ ಬರಲಾಗದೆ ಶಾಂತಿ ಸಂದೇಶ ಕಳುಹಿಸಿದ, ಮಾಹಿತಿ ಸಿಗದೇ ತದನಂತರ ಅವರ ಆತ್ಮಕ್ಕೆ ಸದ್ಗತಿ ಕೋರಿದ ಎಲ್ಲರಿಗೂ ಅನಂತಾನಂತ ಧನ್ಯವಾದಗಳು. ಭೂಶಾಂತಿ ಕಾರ್ಯಗಳನ್ನು **ದಿನಾಂಕ: 06-01-2023 ನೇ ಶುಕ್ರವಾರ, ಮಧ್ಯಾಹ್ನ 12:30 ಕ್ಕೆ ಮತ್ತು ದಿನಾಂಕ: 07-01-2023 ನೇ ಶನಿವಾರ ಮಧ್ಯಾಹ್ನ 1:00 ಕ್ಕೆ, ಭೋಜನ ಸ್ವಗ್ರಾಮ ಯಳಂದೂರು ತಾಲ್ಲೂಕು ಮದ್ದೂರು ಗ್ರಾಮದಲ್ಲಿ ಏರ್ಪಡಿಸಲಾಗಿದೆ.** ಖುದ್ದು ಭೇಟಿ ಮಾಡಿ ಆಹ್ವಾನಿಸಲು ಸಾಧ್ಯವಾಗದ ಕಾರಣ ಇದನ್ನೇ ಆಹ್ವಾನವೆಂದು ಭಾವಿಸಿ ತಾವು ದಯಮಾಡಿ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು

ಎಸ್. ಬಾಲರಾಜ್ ಮಾಜಿ ಶಾಸಕರು, ಕೊಳ್ಳೇಗಾಲ
ಡಾ. ಎಂ. ರುದ್ರಯ್ಯ ವಿಶ್ರಾಂತ ಪ್ರಾಂಶುಪಾಲರು
ಎಸ್. ಸುರೇಶ್ ನಿವೃತ್ತ ಪತ್ರಾಂಕಿತ ವ್ಯವಸ್ಥಾಪಕರು, ರೇಷ್ಮೆಇಲಾಖೆ
ಎಸ್. ಅನ್ನಪೂರ್ಣ, ಕೆ. ರಾಮಯ್ಯ ನಿವೃತ್ತ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು

ಪುರಸಭಾ ಕಾರ್ಯಾಲಯ, ತಿ.ನರಸೀಪುರ ಮೈಸೂರು ಜಿಲ್ಲೆ.

Email: tpnarasipura@ymail.comitstaff_ulb_tnarasipura@yahoo.com Phone: 08227-261232
Website: www.tnarasipuratown.gov.in Fax : 08227-261232
ನಂ/ಪುಸ:ತಿನಪುರ/ಕಿಅ/ಬೀ.ದೀ.ದು/01/2022–23 ದಿನಾಂಕ: 03.01.2023

"ಕೊಟೇಷನ್ ಪ್ರಕಟಣೆ"

ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಲಿಂಕ್ ರಸ್ತೆ, ವಿದ್ಯೋದಯ ರಸ್ತೆ ಹಾಗೂ ನಂಜನಗೂಡು ರಸ್ತೆಯಲ್ಲಿ ಕೆಟ್ಟು ಹೋಗಿರುವ ಬೀದಿ ದೀಪಗಳನ್ನು ಒಂದು ಬಾರಿಗೆ ದುರಸ್ಥಿ ಪಡಿಸಲು ಆಸಕ್ತಿಯುಳ್ಳ ಗುತ್ತಿಗೆದಾರರಿಂದ ದರಗಳನ್ನು ಆಹ್ವಾನಿಸಲಾಗಿದ್ದು ತಮ್ಮ ದರಗಳನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ 11:01:2023 ರ ಸಂಜೆ 4.30 ಗಂಟೆಯೊಳಗೆ ಕಚೇರಿಗೆ ಸಲ್ಲಿಸಲು ತಿಳಿಸಿದೆ.

ಸಹಿ/– ಅಧ್ಯಕ್ಷರು	ಸಹಿ/– ಉಪಾಧ್ಯಕ್ಷರು	ಸಹಿ/– ಸ್ಥಾಯಿಸಮಿತಿ ಅಧ್ಯಕ್ಷರು	ಸಹಿ/– ಮುಖ್ಯಾಧಿಕಾರಿಗಳು
ಪುರಸಭೆ ತಿ.ನರಸೀಪುರ	ಪುರಸಭೆ, ತಿ.ನರಸೀಪುರ	ಪುರಸಭೆ, ತಿ.ನರಸೀಪುರ	ಪುರಸಭೆ, ತಿ.ನರಸೀಪುರ

DIPR/DDMYS/MCA/848/2022-23

ಮೈಸೂರು ಮಿತ್ರ ಶುಕ್ರವಾರ 6 ಜನವರಿ 2023

ಮತದಾರರ ಅಂತಿಮ ಪಟ್ಟಿ ಪ್ರಕಟ

ಮತದಾರರು ಪಟ್ಟಿಯಲ್ಲಿ ಹೆಸರು ಖಾತ್ರಿ ಪಡಿಸಿಕೊಳ್ಳಿ: ಜಿಲ್ಲಾಧಿಕಾರಿ

- ಮಂಡ್ಯ ಜಿಲ್ಲೆಯಲ್ಲಿ 14,86,025 ಮತದಾರರು
- 1798 ಮತಗಟ್ಟೆ: ಆಕ್ಷೇಪಣೆಗೆ ಅವಕಾಶ

ಮಂಡ್ಯ, ಜ.5– ಜಿಲ್ಲೆಯ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಪೂರ್ಣಗೊಂಡಿದ್ದು, ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ. ಮತದಾರರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಖಾತ್ರಿ ಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಹೆಚ್.ಎನ್.ಗೋಪಾಲಕೃಷ್ಣ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಗುರುವಾರ ರಾಜಕೀಯ ಪಕ್ಷಗಳ ಮುಖಂಡರ ಸಭೆ ನಡೆಸಿ ಮಾತನಾಡಿದ ಅವರು, ಕರಡು ಮತದಾರರ ಪಟ್ಟಿಯನ್ನು ನ.9ರಂದು ಪ್ರಕಟಿಸಲಾಗಿತ್ತು. ಆ ವೇಳೆ ಜಿಲ್ಲೆಯಲ್ಲಿ 7,35,082 ಪುರುಷರು, 7,42,747 ಮಹಿಳೆಯರು, 122 ಮಂದಿ ತೃತೀಯ ಲಿಂಗಿಗಳು ಸೇರಿದಂತೆ ಒಟ್ಟು 14,77,951 ಮತದಾರರಿದ್ದರು ಎಂದರು.

ಜಿಲ್ಲೆಯಲ್ಲಿ 14,86,025 ಮತದಾರರು: ವಿಶೇಷ ಪರಿಷ್ಕರಣೆಯಲ್ಲಿ ನಮೂನೆ–6, 7 ಮತ್ತು 8 ಅನ್ನು ಸ್ವೀಕರಿಸಿ, ಮನೆ ಮನೆ ಸಮೀಕ್ಷೆ ನಡೆಸಿ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 1798 ಮತಗಟ್ಟೆಗಳಿದ್ದು, 7,37,850 ಪುರುಷರು, 7,48,051 ಮಹಿಳೆಯರು, 124 ತೃತೀಯ ಲಿಂಗಿಗಳು ಸೇರಿದಂತೆ ಒಟ್ಟು 14,86,025 ಮತದಾರರಿದ್ದಾರೆ. 631 ಪುರುಷರು, 23 ಮಹಿಳೆಯರು ಸೇರಿದಂತೆ ಒಟ್ಟು 654 ಸೇವಾ ಮತದಾರರಿದ್ದಾರೆ ಎಂದು ಮಾಹಿತಿ ನೀಡಿದರು.



ಹೆಸರು ಸೇರ್ಪಡೆಗೆ ವಿಶೇಷ ಅಭಿಯಾನ

ಜಿಲ್ಲೆಯ ಅರ್ಹ ಮತದಾರರು ಮತದಾನದಿಂದ ವಂಚಿತವಾಗಬಾರದು. ಹೀಗಾಗಿ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ವಿಶೇಷ ಅಭಿಯಾನ ನಡೆಸಲಾಗುವುದು. ಕಾಲೇಜು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿ ನಮೂನೆ–6 ರಲ್ಲಿ ಅರ್ಜಿ ಸ್ವೀಕರಿಸಲಾಗುವುದು ಎಂದು ಜಿಲ್ಲಾಧಿಕಾರಿ ಗೋಪಾಲಕೃಷ್ಣ ತಿಳಿಸಿದರು.

ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು 17 ವರ್ಷ ತುಂಬಿದವರಿಂದ ನಮೂನೆ–6 ರಲ್ಲಿ 1177 ಅರ್ಜಿ ಸ್ವೀಕರಿಸಲಾಗಿದೆ. 2023ರಲ್ಲಿ 18 ವರ್ಷ ತುಂಬಲಿದ್ದು, ಮತದಾರರ ಪಟ್ಟಿ ಪರಿಷ್ಕರಣೆ ನಡೆಯುವ ಏಪ್ರಿಲ್‌ನಲ್ಲಿ 447, ಜುಲೈನಲ್ಲಿ 429, ಅಕ್ಟೋಬರ್‌ನಲ್ಲಿ 301 ಮಂದಿಯನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲಾಗುವುದು ಎಂದರು.

ಬೂತ್ ಲೆವಲ್ ಏಜೆಂಟ್‌ಗಳ ನೇಮಕ ಮಾಡಿ: ರಾಜಕೀಯ ಪಕ್ಷಗಳು ತಮ್ಮ ಪಕ್ಷದಿಂದ ಬೂತ್ ಲೆವಲ್ ಏಜೆಂಟ್‌ಗಳನ್ನು ನೇಮಕ ಮಾಡಿ ವಿವರ ಸಲ್ಲಿಸಬೇಕು. ಇದರಿಂದ ಬೂತ್ ಲೆವಲ್‌ನಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು. ಮತದಾರರ ಪಟ್ಟಿಯಿಂದ ಯಾವುದೇ ಹೆಸರನ್ನು ಸ್ವಯಂ ಪ್ರೇರಿತವಾಗಿ ಕೈಬಿಟ್ಟಿಲ್ಲ. ಮರಣ ಹೊಂದಿದವರು ಹಾಗೂ ಮತದಾರರೇ ಖುದ್ದು ಬೇರೆ ಸ್ಥಳಗಳಿಗೆ ಸ್ಥಳಾಂತರವಾಗಿ ಅರ್ಜಿ ಸಲ್ಲಿಸಿದ್ದಾರೆ. ಅವುಗಳನ್ನು ಪರಿಶೀಲಿಸಿ ಕೈ ಬಿಡಲಾಗಿದೆ ಎಂದರು.

ಜಿಪಂ, ತಾಪಂ ಸದಸ್ಯರ ಸಂಖ್ಯೆ ಪ್ರಕಟ: ಜಿಪಂ ಹಾಗೂ ತಾಪಂ ಸದಸ್ಯರ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯಿಸಿ ಜ.2ರಂದು ಕರ್ನಾಟಕ ಪಂಚಾಯತ್ ರಾಜ್ ಸೀಮಾ ಆಯೋಗ ಜಿಲ್ಲೆಯ ವಿಶೇಷ ರಾಜ್ಯಪತ್ರ ಪ್ರಕಟಿಸಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಪಂ ಸದಸ್ಯರ ಸಂಖ್ಯೆ: ನಾಗಮಂಗಲ–4, ಶ್ರೀರಂಗಪಟ್ಟಣ, ಪಾಂಡವಪುರ–5, ಕೆ.ಆರ್.ಪೇಟೆ–6, ಮಳವಳ್ಳಿ, ಮದ್ದೂರು, ತಲಾ 7, ಮಂಡ್ಯದಲ್ಲಿ 8 ಸೇರಿದಂತೆ ಒಟ್ಟು 41 ಸದಸ್ಯರ ಸಂಖ್ಯೆ ಇದೆ.

ತಾಪಂ ಸದಸ್ಯರ ಸಂಖ್ಯೆ: ನಾಗಮಂಗಲ 16, ಶ್ರೀರಂಗಪಟ್ಟಣ, ಪಾಂಡವಪುರ 17, ಕೆ.ಆರ್.ಪೇಟೆ 20, ಮಳವಳ್ಳಿ 22, ಮದ್ದೂರು 23, ಮಂಡ್ಯ 24 ಒಟ್ಟು 137 ಸದಸ್ಯರ ಸಂಖ್ಯೆ ಇದೆ.

ರಾಜ್ಯಪತ್ರವನ್ನು ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿಗಳ ಹಾಗೂ ತಾಲೂಕು ಕಚೇರಿಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಚುನಾವಣಾ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಜ.16ರ ಸಂಜೆ 5 ರೊಳಗೆ http://rdpr.Karnataka.gov.in/rdc/public/ ವೆಬ್‌ಸೈಟ್ ಮೂಲಕ ತಮ್ಮ ಆಕ್ಷೇಪಣೆ ಸಲ್ಲಿಸಬಹುದಾಗಿರುತ್ತದೆ ಎಂದರು.

ಸಭೆಯಲ್ಲಿ ಎಡಿಸಿ ಡಾ.ಹೆಚ್.ಎಲ್.ನಾಗರಾಜ್, ಜಿಲ್ಲಾಧಿಕಾರಿ ಕಚೇರಿ ಸಹಾಯಕ ಸ್ವಾಮಿಗೌಡ, ಚುನಾವಣಾ ತಹಸೀಲ್ದಾರ್ ದೀಪಕ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲಾ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿ ಮಂಜುನಾಥ್, ಟಿ.ಡಿ.ಬಸವರಾಜು, ಎಂ.ಬಿ.ರಂಗಸ್ವಾಮಿ, ದಿನೇಶ್ ಉಪಸ್ಥಿತರಿದ್ದರು.

ಎಳೆಯರ ನಡೆ ಇಂದೇ ತಿದ್ದೋಣ ಪುಸ್ತಕ ಲೋಕಾರ್ಪಣೆ



ಪಾಂಡವಪುರ, ಜ.5– ರಾಷ್ಟ್ರ ಕವಿಯಾಗಿ ಕರುನಾಡು ಹಾಗೂ ಕನ್ನಡದ ಮಹತ್ವ ಸಾರಿದ ಕುವೆಂಪು ಅವರ ವಿಚಾರಧಾರೆಯನ್ನು ಮಕ್ಕಳಿಗೆ ತಿಳಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎ.ಲೋಕೇಶ್ ತಿಳಿಸಿದರು.

ಪಟ್ಟಣದ ಕನ್ನಡ ಸಾಹಿತ್ಯ ಭವನದಲ್ಲಿ ಕಸಾಪ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಂಯುಕ್ತಾಶ್ರಯದಲ್ಲಿ ನಡೆದ ಕುವೆಂಪು ಜಯಂತಿ ಹಾಗೂ ಸಾಹಿತಿ ಡಾ.ಮಣಿಕರ್ಣಿಕಾರವರ "ಎಳೆಯರ ನಡೆ ಇಂದೇ ತಿದ್ದೋಣ" ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಲೋಕದಲ್ಲಿ ವಿಶ್ವಮಾನವ ಕುವೆಂಪು ಅವರ ಹೆಸರು ಅಗ್ರಸ್ಥಾನದಲ್ಲಿ ನಿಲ್ಲುತ್ತದೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬ ಮಾತಿನಂತೆ ಕುವೆಂಪು ಎಲ್ಲಾ ರೀತಿಯ ಸಾಹಿತ್ಯ ಪ್ರಕಾರಗಳಲ್ಲೂ ಕೊಡುಗೆ ನೀಡಿದ್ದಾರೆ. ಬೌದ್ಧಿಕ, ಮಾನಸಿಕ ಮತ್ತು ದೈಹಿಕ ಬೆಳವಣಿಗೆಯ ಶಿಕ್ಷಣ ಇಂದಿನ ಮಕ್ಕಳಿಗೆ ಬೇಕಾಗಿದೆ ಎಂದರು.

ಡಾ.ಮಣಿಕರ್ಣಿಕಾ ಅವರು ಇಳಿ ವಯಸ್ಸಿನಲ್ಲೂ ಮಕ್ಕಳಿಗೆ ಅನಿವಾರ್ಯತೆ ಎಂದು ವಿಚಾರ ಹಾಗೂ ಮಕ್ಕಳು ಏನನ್ನು ಕಲಿಯಬೇಕು ಎಂಬ ವಿಚಾರವಾಗಿ ಬರೆದಿರುವ 'ಎಳೆಯರ ನಡೆ ಇಂದೇ ತಿದ್ದೋಣ' ಪುಸ್ತಕ ತುಂಬಾ ಅಚ್ಚುಕಟ್ಟಾಗಿ ಮೂಡಿಬಂದಿದೆ. ಒಬ್ಬ ತಾಯಿ ಮಗುವಿಗೆ ಸಣ್ಣ ವಿಚಾರಗಳನ್ನು ಅರ್ಥೈಸುವ ರೀತಿ ಸಾಹಿತ್ಯ ಬರೆಸಿದ್ದಾರೆ. ಮಕ್ಕಳ ಜೊತೆಗೆ ಪಾಲಕರು ಪುಸ್ತಕ ಕೊಂಡು ಓದುವಂತೆ ಮನವಿ ಮಾಡಿದರು.

ಮೈಸೂರು ಬಿಜಿಎಸ್ ಬಿಎಡ್ ಕಾಲೇಜಿನ ಪ್ರಾಧ್ಯಾಪಕ ಎಚ್.ಡಿ.ಬೆಟ್ಟಸ್ವಾಮಿ ಮಾತನಾಡಿದರು. ಈ ವೇಳೆ ತಾಲೂಕು ಕಸಾಪ ಅಧ್ಯಕ್ಷ ಪ್ರಕಾಶ್, ಕಾರ್ಯದರ್ಶಿ ಪ.ಮ.ನಂಜುಂಡಸ್ವಾಮಿ, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಮಲ್ಲಿಕಾರ್ಜುನಗೌಡ, ಸಾಹಿತಿ ಚಂದ್ರಶೇಖರಯ್ಯ, ಪ್ರಥಮ ದರ್ಜೆ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಶಂಕರ್, ಕನ್ನಡ ಪ್ರಾಧ್ಯಾಪಕಿ ಸರಸ್ವತಿ ಇತರರಿದ್ದರು.

ಕೈಲಾದ ಸೇವೆ ಮಾಡಲು ಶಾಲೆಗಳಿಗೆ ಭೇಟಿ

ಭಾರತೀ ಎಜುಕೇಶನ್ ಟ್ರಸ್ಟ್ ಸಿಇಓ ಆಶಯ್ ಮಧು ಮಾದೇಗೌಡ



ಭಾರತೀನಗರ, ಜ.5– ಯಾವುದೇ ರಾಜಕೀಯ ಉದ್ದೇಶ ಇಟ್ಟುಕೊಂಡು ಶಾಲೆಗಳಿಗೆ ಭೇಟಿ ನೀಡುತ್ತಿಲ್ಲ. ನನ್ನ ಕೈಲಾದ ಸೇವೆ ಮಾಡಲು ಮುಂದಾಗಿದ್ದೇನೆ ಎಂದು ಭಾರತೀ ಎಜುಕೇಷನ್ ಟ್ರಸ್ಟ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆಶಯ್ ಮಧು ಮಾದೇಗೌಡ ತಿಳಿಸಿದರು.

ಇಲ್ಲಿಗೆ ಸಮೀಪದ ಮೆಣಸಗೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರು ಮತ್ತು ಎಸ್‌ಡಿಎಂಸಿ ವತಿಯಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ನಮ್ಮ ತಂದೆ ಮಧು ಜಿ.ಮಾದೇಗೌಡರು ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಿದ್ದ ವೇಳೆ ನಾನು ಮದ್ದೂರು ಕ್ಷೇತ್ರದ ಎಲ್ಲಾ ಶಾಲೆಗಳಿಗೂ ಭೇಟಿ ನೀಡಿದ ಸಂದರ್ಭ ಕೆಲವು ಶಾಲೆಗಳು ಮೂಲ ಸೌಕರ್ಯ ಕಲ್ಪಿಸುವಂತೆ ಮನವಿ ಸಲ್ಲಿಸಿದ್ದವು. ಅದರಂತೆ ಈ ಶಾಲೆ ಎಸ್‌ಡಿಎಂಸಿ ಅಧ್ಯಕ್ಷರು ಮಕ್ಕಳ ಅಕ್ಷರ ದಾಸೋಹದ ಬಿಸಿಯೂಟಕ್ಕೆ ಕುಕ್ಕರ್ ಕೊಡುಗೆ ನೀಡುವಂತೆ ಕೋರಿಕೊಂಡಿದ್ದರು. ಅದನ್ನು ವಿತರಿಸಲು ಬಂದಿದ್ದೇನೆ. ಶಾಲೆಗಳ ಅಭಿವೃದ್ಧಿಯಲ್ಲಿ ಶಾಲಾಭಿವೃದ್ಧಿ ಸಮಿತಿ ಮತ್ತು ಶಿಕ್ಷಕರ ಪಾತ್ರ ಮುಖ್ಯ. ಶಾಲೆಗಳ ಬಗ್ಗೆ ಎಲ್ಲಿವರೆಗೆ ಕಾಳಜಿ ಇರುತ್ತದೋ ಅಲ್ಲಿವರೆಗೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕುತ್ತದೆ ಎಂದರು.

ಶಾಲೆ ಮುಖ್ಯಶಿಕ್ಷಕಿ ಲತಾ ಮಾತನಾಡಿದರು. ಈ ವೇಳೆ ಶಾಲೆಗೆ ಮೂಲ ಸೌಕರ್ಯ ಕಲ್ಪಿಸುವಂತೆ ಆಶಯ್ ಮಧು ಅವರಿಗೆ ಮನವಿ ಸಲ್ಲಿಸಿದರು. ನಂತರ ಶಾಲೆಯ ಎಲ್ಲಾ ಕೊಠಡಿಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಇದೇ ವೇಳೆ ತಾಪಂ ಮಾಜಿ ಸದಸ್ಯ ಬಿ.ಗಿರೀಶ್, ಪಿಎಸಿಎಸ್ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಆರ್.ಸಿದ್ದಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಡಿ.ಸೋಮು, ಉಪಾಧ್ಯಕ್ಷೆ ಯಶೋಧಮ್ಮ, ಸದಸ್ಯರಾದ ಡಿ.ಮಾದು, ಡಿ.ಬಿ.ಬಸವರಾಜು, ಮಂಗಳ, ಸೋಮ, ನೇತ್ರಾವತಿ, ದೇವರಾಜು, ಜಯಲಕ್ಷ್ಮಿ, ಮರಿಲಿಂಗಶೆಟ್ಟಿ, ಶಿಕ್ಷಕಿ ವೆಂಕಟಲಕ್ಷ್ಮಿ ಸೇರಿದಂತೆ ಹಲವರಿದ್ದರು.

ಕಾಂಗ್ರೆಸ್‌ಗೆ ಅಧಿಕಾರ ತಪ್ಪಿಸಲು ಬಿಜೆಪಿ, ಜೆಡಿಎಸ್ ಹುನ್ನಾರ

ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಆರೋಪ



ಮಂಡ್ಯ, ಜ.5– ಜೆಡಿಎಸ್ ಬಗ್ಗೆ ಅತಿಯಾದ ಪ್ರೀತಿ ತೋರುತ್ತಿದ್ದ ಬಿಜೆಪಿ ಇದೀಗ ಮಂಡ್ಯದಲ್ಲಿ ನಡೆದ ಅಮಿತ್ ಶಾ ಕಾರ್ಯಕ್ರಮದಲ್ಲಿ ಜೆಡಿಎಸ್ ಅನ್ನು ಟೀಕಿಸಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತಿದ್ದು, ರಾಜ್ಯದಲ್ಲಿ ವ್ಯಾಪಕವಾಗಿ ಎದ್ದಿರುವ ಕಾಂಗ್ರೆಸ್ ಅಲೆಯಿಂದ ಎರಡೂ ಪಕ್ಷಗಳು ಕಂಗೆಟ್ಟಿವೆ. ಈ ನಿಟ್ಟಿನಲ್ಲಿ ಕಾಂಗ್ರೆಸ್‌ಗೆ ಅಧಿಕಾರ ತಪ್ಪಿಸಲು ಬಿಜೆಪಿ, ಜೆಡಿಎಸ್ ಪರಸ್ಪರ ಟೀಕಿಸುವ ಮೂಲಕ ಹುನ್ನಾರ ನಡೆಸಿವೆ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭೆಯಲ್ಲಿ ಕಾಯ್ದೆ, ವಿಧೇಯಕಗಳನ್ನು ಜಾರಿ ಮಾಡಲು, ಸಭಾಧ್ಯಕ್ಷರನ್ನು ಕೆಳಗಿಳಿಸಲು ಬಿಜೆಪಿ ಸರ್ಕಾರಕ್ಕೆ ಜೆಡಿಎಸ್ ಬೆಂಬಲ ನೀಡಿದೆ. ಮಂಡ್ಯಕ್ಕೆ ಬಂದರೂ ಇಲ್ಲಿ ಹೆಚ್ಚಿನ ಶಾಸಕರಿದ್ದ ಜೆಡಿಎಸ್ ಟೀಕಿಸದೆ ಕಾಂಗ್ರೆಸ್ ಅನ್ನು ಟೀಕಿಸಿ ಹೋಗುತ್ತಿದ್ದರು. ಆದರೆ ಇದೀಗ ಬಿಜೆಪಿ, ಜೆಡಿಎಸ್‌ನಲ್ಲಿ ವಿರೋಧಿ ಹೇಳಿಕೆಗಳನ್ನು ನೋಡಿದರೆ ಇದರ ಹಿಂದೆ ದೊಡ್ಡ ಷಡ್ಯಂತ್ರವೇ ಇದೆ ಎಂದರು.

ಚುನಾವಣೆ ವೇಳೆ ಹೊಂದಾಣಿಕೆಯಿಂದ ಹೋದರೆ ಇಬ್ಬರಿಗೂ ನಷ್ಟವಾಗಲಿದ್ದು, ಇದು ಕಾಂಗ್ರೆಸ್‌ಗೆ ದೊಡ್ಡ ಲಾಭವಾಗಬಹುದು ಎಂಬ ಕಾರಣಕ್ಕೆ ಮತದಾರರ ಕಣ್ಣಿಗೆ ಮಣ್ಣೆರಚುವ ಸಲುವಾಗಿ ಬಿಜೆಪಿ, ಜೆಡಿಎಸ್ ಕಡು ವಿರೋಧಿಗಳಂತೆ ನಾಟಕವಾಡುತ್ತಿದ್ದು, ಚುನಾವಣೆ ಹೊಸ್ತಿಲಲ್ಲಿ ಇವರ ಒಳ ಒಪ್ಪಂದ ಹೊಂದಾಣಿಕೆ ಸಹಜ ಎಂದು ಟೀಕಿಸಿದರು.

ಅಮಿತ್ ಶಾ ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಧೂಳೀಪಟ ಮಾಡಿ ಎಂದಿದ್ದಾರೆ. ಹಿಮಾಚಲ ಪ್ರದೇಶದಲ್ಲಿ 2 ಬಾರಿ ಆಳ್ವಿಕೆ ನಡೆಸಿದ ಬಿಜೆಪಿಯನ್ನು ಜನ ಹೇಗೆ ಧೂಳೀಪಟ ಮಾಡಿದರು ಎಂಬುದು ಗೊತ್ತಾಗಿದೆ. ಕರ್ನಾಟಕದಲ್ಲೂ ಹಿಮಾಚಲ ಪ್ರದೇಶದಲ್ಲಿ ಬಿಜೆಪಿಗಾದ ಗತಿಯೇ ಆಗಲಿದೆ. ದೇಶದ ಎಷ್ಟು ರಾಜ್ಯದಲ್ಲಿ ಬಿಜೆಪಿ ಯಾರ ಬೆಂಬಲವೂ ಇಲ್ಲದೇ ಅಧಿಕಾರ ಹಿಡಿದಿದೆ ಎಂಬುದನ್ನು ಹೇಳಲಿ ಎಂದರು.

ಬಿಜೆಪಿಗೆ ದೇಶದಲ್ಲಿ ಪ್ರತಿಪಕ್ಷವೇ ಇರಬಾರದು. ತಾವೊಬ್ಬರೇ ಎಲ್ಲಾ ಅಧಿಕಾರ ಪಡೆಯಬೇಕೆಂಬ ದುರಾಸೆ ಇದೆ. ಸಂವಿಧಾನದಲ್ಲಿ ಆಡಳಿತ ಹಾಗೂ ಪ್ರತಿಪಕ್ಷ ಇರಬೇಕೆಂಬ ಮಾತಿದೆ. ಆದರೆ ಸಂವಿಧಾನಕ್ಕೆ ಬಿಜೆಪಿ ಗೌರವ ಕೊಡುತ್ತಿಲ್ಲ. ಬಿಜೆಪಿ ಹಿರಿಯ ನಾಯಕ ನಿತಿನ್ ಗಡ್ಕರಿ, ದೇಶದಲ್ಲಿ ಪ್ರತಿಪಕ್ಷವಾಗಿ ಕಾಂಗ್ರೆಸ್ ಇರಬೇಕು ಎಂದಿದ್ದಾರೆ. ಆದರೆ ಬಿಜೆಪಿಯ ಎಲ್ಲಾ ನಾಯಕರಿಗೆ ಆ ಮನಸ್ಥಿತಿ ಇಲ್ಲ ಎಂದು ಲೇವಡಿ ಮಾಡಿದರು.

ಅಮಿತ್ ಶಾ ರಾಜ್ಯದ ಬಗ್ಗೆ ಎಚ್ಚರಿಕೆಯಿಂದ ಮಾತನಾಡಬೇಕು. ಗುಜರಾತ್‌ನ ಅಮುಲ್ ಅನ್ನು ನಂದಿನಿ ಜೊತೆಗೆ ವಿಲೀನ ಮಾಡುವ ಬಗ್ಗೆ ಮಾತನಾಡುತ್ತಾರೆ. ಗುಜರಾತ್‌ನಲ್ಲಿ ಅಮುಲ್‌ಗೆ ಮಾರುಕಟ್ಟೆ ಕುಸಿದಿದೆ. ನಮ್ಮ ನಂದಿನಿ ಉತ್ಪನ್ನಗಳಿಗೆ ವ್ಯಾಪಕ ಬೇಡಿಕೆ ಇದೆ. ಅಮುಲ್ ಅನ್ನು ಲಾಭ ಮಾಡಲು ಅಮಿತ್ ಶಾ ಹೆಣೆದಿರುವ ಹುನ್ನಾರವಿದು. ಇದಕ್ಕೆ ನಾವು ಅವಕಾಶ ಕೊಡುವುದಿಲ್ಲ ಎಂದರು. ಜ.20ರೊಳಗೆ ಕಾಂಗ್ರೆಸ್‌ನ ಮೊದಲ ಪಟ್ಟಿ ಬಿಡುಗಡೆಯಾಗಲಿದೆ. ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಬಗ್ಗೆ ನಾನು ಮಾತನಾಡಲ್ಲ. ಜೆಡಿಎಸ್‌ನದ್ದು ಹೈಕಮಾಂಡ್ ಪಕ್ಷವಲ್ಲ. ಬೀದಿ, ಬಸ್ ನಿಲ್ದಾಣ ಎಲ್ಲೆಂದರಲ್ಲಿ ಟಿಕೆಟ್ ಘೋಷಿಸಬಹುದು. ಆದರೆ ಕಾಂಗ್ರೆಸ್‌ನಲ್ಲಿ ಆ ಸಂಸ್ಕೃತಿ ಇಲ್ಲ ಎಂದರು.

ಜ.8ರಂದು ಚಿತ್ರದುರ್ಗದಲ್ಲಿ ನಡೆಯುವ ಐಕ್ಯತಾ ಸಮಾವೇಶ ಯಶಸ್ವಿಗೊಳಿಸಬೇಕು. ಈ ನಿಟ್ಟಿನಲ್ಲಿ ಎಲ್ಲಾ ರೀತಿಯ ಸಿದ್ಧತೆ ನಡೆಯುತ್ತಿದೆ. ದಲಿತ ಸಮುದಾಯಗಳಿಗೆ ಶಕ್ತಿ ತುಂಬುವ ಸಲುವಾಗಿ ಈ ಸಮಾವೇಶ ಹಮ್ಮಿಕೊಂಡಿದ್ದು, ಮಂಡ್ಯದಿಂದ 150 ಬಸ್‌ಗಳಲ್ಲಿ ಐಕ್ಯತಾ ಸಮಾವೇಶಕ್ಕೆ ತೆರಳುತ್ತಿದ್ದೇವೆ. ಈವರೆಗೆ ಕಾಂಗ್ರೆಸ್ ನಡೆಸಿರುವ ಡಿ.ಕೆ.ಶಿವಕುಮಾರ್ ನೇತೃತ್ವದ ಮೇಕೆದಾಟು ಪಾದಯಾತ್ರೆ, ಸಿದ್ದರಾಮಯ್ಯನವರ ಸಿದ್ದರಾಮೋತ್ಸವ ಹಾಗೂ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ಯಾತ್ರೆ ರಾಜ್ಯದಲ್ಲಿ ಯಶಸ್ವಿಯಾಗಿ ನಡೆದಿದ್ದು, ಐಕ್ಯತಾ ಸಮಾವೇಶ ಸಹ ಯಶಸ್ವಿಗೊಳ್ಳಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾಂಗ್ರೆಸ್ ಮುಖಂಡರಾದ ಸಿದ್ದಾರೂಢ ಸತೀಶ್‌ಗೌಡ, ಡಾ.ಕೃಷ್ಣ, ಗಣಿಗ ರವಿಕುಮಾರ್, ಕಂಠಿ ಸುರೇಶ್, ವಿಜಯಲಕ್ಷ್ಮಿ ರಘುನಂದನ್ ಉಪಸ್ಥಿತರಿದ್ದರು.

ಮೂರನೇ ಪುಟದಿಂದ

30,650 ಹೊಸ ಸೇರ್ಪಡೆ, 22,625 ರದ್ದು

ಬಗ್ಗೆ ಖಚಿತಪಡಿಸಿಕೊಳ್ಳಬಹುದು ಎಂದು ತಿಳಿಸಿದರು. ಮೈಸೂರು ಜಿಲ್ಲೆಯಲ್ಲಿ ಕರಡು ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಿದ್ದು, ಅಂತಿಮ ಮತದಾರರ ಪಟ್ಟಿಯಲ್ಲಿ 12,72,155 ಪುರುಷ ಮತದಾರರು, 12,87,502 ಮಹಿಳಾ ಮತದಾರರು ಹಾಗೂ 198 ತೃತೀಯ ಲಿಂಗ ಮತದಾರರು ಸೇರಿದಂತೆ ಒಟ್ಟು 25,59,855 ಮತದಾರರು ಇದ್ದಾರೆ. ಇವರಲ್ಲಿ 30,650 ಯುವ ಮತದಾರರು ಸೇರ್ಪಡೆಯಾಗಿದ್ದಾರೆ. ವಿವಿಧ ಕಾರಣಗಳಿಂದ 22,625 ಪ್ರಕರಣಗಳನ್ನು ಕೈಬಿಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 2,905 ಮತಗಟ್ಟೆಗಳಿದ್ದು, ವಿವಿಧ ರಾಜಕೀಯ ಪಕ್ಷಗಳು ಪ್ರತಿ ಮತಗಟ್ಟೆಗೆ ರಾಜಕೀಯ ಏಜೆಂಟ್‌ಗಳನ್ನು ನೇಮಿಸಬೇಕು ಎಂದು ಮಾಹಿತಿ ನೀಡಿದರು. ಪ್ರಸಕ್ತ 2023ರ ವಾರ್ಷಿಕ ಮತದಾರರ ಪಟ್ಟಿಯ ಪರಿಷ್ಕರಣೆ ಸಂದರ್ಭದಲ್ಲಿ ಜನವರಿ 01ರ ಅರ್ಹತಾ ದಿನಾಂಕದ ಜೊತೆಗೆ, 01ನೇ ಏಪ್ರಿಲ್, 01ನೇ ಜುಲೈ ಮತ್ತು 01ನೇ ಅಕ್ಟೋಬರ್‌ಗೆ 18 ವರ್ಷ ತುಂಬುವ ಯುವ ಮತದಾರರು ಮತದಾರರ ಪಟ್ಟಿಗೆ ಹೆಸರು ಸೇರಿಸಲು ಮುಂಗಡ ಅರ್ಜಿ ಸಲ್ಲಿಸಲು ಅವಕಾಶವಿದೆ. ಇದರಿಂದ 18 ವರ್ಷಗಳನ್ನು ಪೂರೈಸಿದ ಯುವಕರು ನೋಂದಣಿಗಾಗಿ ಮುಂದಿನ ವರ್ಷದ ವಿಶೇಷ ಪರಿಷ್ಕರಣೆವರೆಗೆ ಕಾಯುವುದನ್ನು ತಪ್ಪಿಸಲಾಗಿದೆ. ಮತ್ತು ಮಧ್ಯಂತರ ಅವಧಿಯಲ್ಲಿ ನಡೆಯುವ ಚುನಾವಣೆಗಳಲ್ಲಿ ಮತ ಚಲಾವಣೆಗೆ ಅವಕಾಶ ದೊರೆಯಲಿದೆ ಎಂದರು.

ಈ ಮೊದಲು ಒಂದು ವಿಧಾನಸಭಾ ಕ್ಷೇತ್ರದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸ್ಥಳಾಂತರಕ್ಕಾಗಿ ಚಾಲ್ತಿಯಲ್ಲಿದ್ದ ಅರ್ಜಿ ನಮೂನೆ–8ಎ ಅನ್ನು ರದ್ದುಪಡಿಸಲಾಗಿದೆ. ನಮೂನೆ–8ಎ ರಲ್ಲಿದ್ದ ಸೌಲಭ್ಯವನ್ನು ಪರಿಷ್ಕರಿಸಿದ ನಮೂನೆ–8ರಲ್ಲಿ ಒದಗಿಸಲಾಗಿದೆ. 2022ರ ಸೆಪ್ಟೆಂಬರ್ 1ರ ನಂತರದಲ್ಲಿ ಸೇರ್ಪಡೆ ಅಥವಾ ತಿದ್ದುಪಡಿ ಮಾಡುವ ಮತದಾರರ ಗುರುತಿನ ಚೀಟಿಯನ್ನು ಸ್ಪೀಡ್ ಪೋಸ್ಟ್ ಮುಖಾಂತರ ಮತದಾರರಿಗೆ ವಿತರಣೆ ಮಾಡಲಾಗುವುದು. ಮತದಾರರ ಪಟ್ಟಿಯ ಪರಿಷ್ಕರಣೆಯ ಸಲುವಾಗಿ 1950 ಮತದಾರರ ಸಹಾಯವಾಣಿಯನ್ನು ಪ್ರಾರಂಭಿಸಲಾಗುತ್ತಿದ್ದು, ಸಾರ್ವಜನಿಕರು ಹಾಗೂ ರಾಜಕೀಯ ಪಕ್ಷಗಳವರು ಈ ಸಹಾಯವಾಣಿಯ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಮತದಾರರ ಪಟ್ಟಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಪಿರಿಯಾಪಟ್ಟಣ ತಾಲೂಕು ಕಚೇರಿ ದೂ.ಸಂ.08223–274175, ಕೆ.ಆರ್.ನಗರ ತಾಲೂಕು ಕಚೇರಿ ದೂ.ಸಂ. 08223–262371,262234, ಹುಣಸೂರು ತಾಲೂಕು ಕಚೇರಿ ದೂ.ಸಂ.08222–252040, ಹೆಚ್.ಡಿ.ಕೋಟೆ ತಾಲೂಕು ಕಚೇರಿ ದೂ.ಸಂ.08228–255600, ನಂಜನಗೂಡು ತಾಲೂಕು ಕಚೇರಿ ದೂಸಂ. 08221–223108, ಮೈಸೂರು ತಾಲೂಕು ಕಚೇರಿ ದೂ.ಸಂ.0821–2414811, 2414812, ಮೈಸೂರು ಮಹಾನಗರ ಪಾಲಿಕೆ ದೂ.ಸಂ.0821–2418800, ಟಿ.ನರಸೀಪುರ ತಾಲೂಕು ಕಚೇರಿ ದೂ.ಸಂ.–08227–260210 ಸಂಪರ್ಕಿಸಬಹುದು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಬಿ.ಎಸ್.ಮಂಜುನಾಥ್, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಶಿವಪ್ರಸಾದ್ ಎಂ. ಹಿರಿಯ ಕಾರ್ಯದರ್ಶಿ ಉತ್ತನಹಳ್ಳಿ ಶಿವಣ್ಣ, ಬಿ.ಜೆ.ಪಿ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ, ವನಿಷ್‌ಕುಮಾರ್ ಎಸ್, ಕಾರ್ಯದರ್ಶಿ ಪಾಪಣ್ಣ ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯಲ್ಲಿ 30650 ಯುವ ಮತದಾರರ ನೋಂದಣಿ

ಮೈಸೂರು, ಜ.5(ಎಸ್‌ಬಿಡಿ)– ಮೈಸೂರು ಜಿಲ್ಲೆಯ ಅಂತಿಮ ಮತದಾರರ ಪಟ್ಟಿ ಪ್ರಕಟವಾಗಿದ್ದು, 30,650 ಯುವ ಮತದಾರರು ನೋಂದಣಿಯಾಗಿದ್ದಾರೆ.

ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ 2312 ಯುವಕರು, 1763 ಯುವತಿಯರು ಸೇರಿ ಒಟ್ಟು 4075, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 2054 ಯುವಕರು, 1720 ಯುವತಿಯರು, ಒಬ್ಬರು ತೃತೀಯ ಲಿಂಗಿ ಸೇರಿ ಒಟ್ಟು 3775, ಕೆ.ಆರ್.ನಗರ ಕ್ಷೇತ್ರದಲ್ಲಿ 1529 ಯುವಕರು, 1504 ಯುವತಿಯರು, ಇಬ್ಬರು ತೃತೀಯ ಲಿಂಗಿ ಸೇರಿ ಒಟ್ಟು ಒಟ್ಟು 3321, ನರಸಿಂಹರಾಜ ಕ್ಷೇತ್ರದಲ್ಲಿ 1622 ಯುವಕರು, 1597 ಯುವತಿಯರು ಸೇರಿ ಒಟ್ಟು 3219, ಹೆಚ್.ಡಿ.ಕೋಟೆಯಲ್ಲಿ 1754 ಯುವಕರು, 1394 ಯುವತಿಯರು ಹಾಗೂ ಓರ್ವ ತೃತೀಯ ಲಿಂಗಿ ಸೇರಿ ಒಟ್ಟು 3149, ಪಿರಿಯಾಪಟ್ಟಣ ಕ್ಷೇತ್ರದಲ್ಲಿ 1529 ಯುವಕರು, 1286 ಯುವತಿಯರು ಹಾಗೂ ಓರ್ವ ತೃತೀಯ ಲಿಂಗಿ ಸೇರಿ ಒಟ್ಟು 2816, ವರುಣಾ ಕ್ಷೇತ್ರದಲ್ಲಿ 1373 ಯುವಕರು, 1111 ಯುವತಿಯರು ಸೇರಿ ಒಟ್ಟು 2484, ತಿ.ನರಸೀಪುರದಲ್ಲಿ 1130 ಯುವಕರು, 994 ಯುವತಿಯರು ಸೇರಿ ಒಟ್ಟು 2124, ಚಾಮರಾಜ ಕ್ಷೇತ್ರದಲ್ಲಿ 976 ಯುವಕರು, 1009 ಯುವತಿಯರು ಹಾಗೂ ಓರ್ವ ತೃತೀಯ ಲಿಂಗಿ ಸೇರಿ ಒಟ್ಟು 1986, ನಂಜನಗೂಡಲ್ಲಿ 984 ಯುವಕರು, 936 ಯುವತಿಯರು ಸೇರಿ ಒಟ್ಟು 1920 ಹಾಗೂ ಕೃಷ್ಣರಾಜ ಕ್ಷೇತ್ರದಲ್ಲಿ 879 ಯುವಕರು, 902 ಯುವತಿಯರು ಸೇರಿ ಒಟ್ಟು 1781 ಯುವ ಮತದಾರರು ಮೊದಲ ಬಾರಿ ಮತದಾನಕ್ಕೆ ಸಜ್ಜಾಗಿದ್ದಾರೆ.

ಶೇ.1.27ರಷ್ಟು ಹೆಚ್ಚಳ: ಕರಡು ಮತದಾರರ ಪಟ್ಟಿಗಿಂತ ಪರಿಷ್ಕರಣೆ ನಂತರ ಇಂದು ಪ್ರಕಟಗೊಂಡ ಅಂತಿಮ ಮತದಾರರ ಪಟ್ಟಿಯಲ್ಲಿ ಪಟ್ಟು ಮತದಾರರ ಸಂಖ್ಯೆ ಶೇ.1.27ರಷ್ಟು ಹೆಚ್ಚಾಗಿದೆ. ನರಸಿಂಹರಾಜ ಕ್ಷೇತ್ರದಲ್ಲಿ 6250, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 5730, ವರುಣಾದಲ್ಲಿ 3473, ಚಾಮರಾಜ ಕ್ಷೇತ್ರದಲ್ಲಿ 3095, ನಂಜನಗೂಡು ಕ್ಷೇತ್ರದಲ್ಲಿ 3014, ಕೃಷ್ಣರಾಜ 2848, ಕೆ.ಆರ್.ನಗರ ಕ್ಷೇತ್ರದಲ್ಲಿ 2627, ಹುಣಸೂರಿನಲ್ಲಿ 2623, ಪಿರಿಯಾಪಟ್ಟಣದಲ್ಲಿ 1455, ತಿ.ನರಸೀಪುರದಲ್ಲಿ 493 ಹಾಗೂ ಹೆಚ್.ಡಿ.ಕೋಟೆಯಲ್ಲಿ 435 ಸೇರಿ ಜಿಲ್ಲೆಯಲ್ಲಿ ಒಟ್ಟು 32,043 ಮತದಾರರ ಸಂಖ್ಯೆ ಹೆಚ್ಚಾಗಿದೆ.

ಅರ್ಹ ಮತದಾರರು

ಒಂದು ವೇಳೆ ದುರುದ್ದೇಶಪೂರ್ವಕವಾಗಿ ಹೆಸರುಗಳನ್ನು ಕೈ ಬಿಟ್ಟಿದ್ದರೆ ಸೇರ್ಪಡೆ ಮಾಡಬೇಕೆಂದು ಸೂಚಿಸಲಾಗಿದೆ. ವರದಿ ಬಂದ ನಂತರ ಈ ಮೂರು ಕ್ಷೇತ್ರಗಳ ಪಟ್ಟಿಯನ್ನು ಪ್ರಕಟಿಸುವುದಾಗಿ ವಿವರಿಸಿದರು. ಇಂದು ಜಿಲ್ಲಾಧಿಕಾರಿಗಳು, ಸಹಾಯಕ ಚುನಾವಣಾಕಾರಿಗಳು, ಚುನಾವಣಾ ನೋಂದವಣೆ ಅಧಿಕಾರಿಗಳ ಜತೆ ಸಭೆ ನಡೆಸಿ ಮತದಾರರ ಪಟ್ಟಿ ಪ್ರಕಟಿಸಲು ಸೂಚನೆ ನೀಡಲಾಗಿದೆ.

ಒಂದು ವೇಳೆ ಯಾವುದೇ ಒಬ್ಬ ವ್ಯಕ್ತಿಯ ಹೆಸರು ಬಿಟ್ಟು ಹೋಗಿದ್ದರೆ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಸೇರ್ಪಡೆ ಮಾಡಿಕೊಳ್ಳಬಹುದು. ನಿಜವಾದ ಮತದಾರರು ಮತದಾನದ ಹಕ್ಕು ಕಳೆದುಕೊಳ್ಳಬಾರದು ಎಂದು ಮನೋಜ್ ಕುಮಾರ್ ಮೀನಾ ಮನವಿ ಮಾಡಿದ್ದಾರೆ. 221 ಕ್ಷೇತ್ರಗಳ ಪೈಕಿ ಹೆಚ್ಚುವರಿಯಾಗಿ 5,80,531 ಪುರುಷರ ಮತಗಳನ್ನು ಸೇರ್ಪಡೆ ಮಾಡಲಾಯಿತು. ಇದರಲ್ಲಿ 3,07,174 ಹೆಸರುಗಳನ್ನು ತೆಗೆದು(ಡಿಲೀಟ್) ಹಾಕಲಾಗಿದೆ. ಮಹಿಳಾ ಮತದಾರರಲ್ಲಿ 6,50,667 ಹೆಸರುಗಳು ಸೇರ್ಪಡೆಯಾಗಿದ್ದವು, 3,11,748 ಮತಗಳನ್ನು ತೆಗೆದು ಹಾಕಲಾಗಿದೆ ಎಂದರು. 342 ತೃತೀಯ ಲಿಂಗಿ ಮತಗಳು ಸೇರ್ಪಡೆಯಾಗಿದ್ದವು. 43 ಹೆಸರುಗಳನ್ನು ಕೈ ಬಿಡಲಾಗಿದೆ. ಒಟ್ಟು ಹೊಸದಾಗಿ 26,38,990 ಮತಗಳು ಸೇರ್ಪಡೆಯಾಗಿವೆ ಎಂದು ಅವರು ವಿವರಿಸಿದರು. 2,62,854 ಮತದಾರರು ಮೃತಪಟ್ಟಿದ್ದರೆ, 3,27,488 ಮತದಾರರನ್ನು ವರ್ಗಾವಣೆ ಮಾಡಲಾಗಿದೆ. 24,137 ಪುನರಾವರ್ತಿತರಾಗಿದ್ದರು.

2023ರ ಚುನಾವಣೆಯಲ್ಲಿ 3,88,064 ಪುರುಷರು, 3,13,040 ಮಹಿಳೆಯರು, 139 ತೃತೀಯ ಲಿಂಗಿಗಳು ಸೇರಿದಂತೆ ಒಟ್ಟು 7,01,243 ಯುವ ಮತದಾರರು ಸೇರ್ಪಡೆಯಾಗಿದ್ದಾರೆ. 2011ರಲ್ಲಿ ಲಿಂಗಾನುಪಾತ 973 ಇದ್ದರೆ, ಈ ಬಾರಿ 988ಕ್ಕೆ ಏರಿಕೆಯಾಗಿದೆ. ಲೈಂಗಿಕ ಕಾರ್ಯಕರ್ತೆಯರು 1,00,834, ಬುಡಕಟ್ಟು ವಾಸಿಗಳು 30,517, ವಿಶೇಷಚೇತನರು 5,09,553 ಹಾಗೂ ತೃತೀಯ ಲಿಂಗಿಗಳು 41,317 ಸೇರಿದ್ದಾರೆ.

ಸ್ವದೇಶಿ ದರ್ಶನ ಯೋಜನೆಯಡಿ ಮೈಸೂರು ನಗರ ಪ್ರವಾಸೋದ್ಯಮ ಅಭಿವೃದ್ಧಿ

ಕೇಂದ್ರದ ಅನುದಾನದಡಿ ಮೈಸೂರು ಅಲ್ಲದೆ ಹಂಪಿ ಪ್ರವಾಸಿ ಕೇಂದ್ರಕ್ಕೂ ಹೊಸರೂಪ



ಬೆಂಗಳೂರು, ಜ.5(ಕೆಎಂಶಿ)– ಸ್ವದೇಶಿ ದರ್ಶನ ಯೋಜನೆಯಡಿ ಮೈಸೂರು ನಗರವನ್ನು ಸಮಗ್ರ ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಕಾರ್ಯಕ್ರಮ ರೂಪಿಸಿದೆ.

ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಮಂತ್ರಾಲಯ ರಾಜ್ಯದ ಮೈಸೂರು ಹಾಗೂ ವಿಜಯನಗರ ಜಿಲ್ಲೆಯ ಹಂಪಿಯನ್ನು ಪ್ರವಾಸೋದ್ಯಮ ಸರ್ಕ್ಯೂಟ್ ಕೇಂದ್ರವಾಗಿ ಪರಿಗಣಿಸಿದೆ. ಸ್ವದೇಶಿ ದರ್ಶನ–2.0 ಯೋಜನೆಯಡಿ ಕೇಂದ್ರ ಸರ್ಕಾರ ರಾಷ್ಟ್ರದ ಕೆಲವು ಪ್ರವಾಸೋದ್ಯಮ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು 2014–15ನಲ್ಲಿ ಕೈಗೆತ್ತಿಕೊಂಡಿದೆ. ರಾಜ್ಯ ವಿಧಾನಸಭಾ ಚುನಾವಣೆ ಎದುರಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ರಾಜ್ಯದ ಮೈಸೂರು ಮತ್ತು ಹಂಪಿಯನ್ನು ತನ್ನ ವೆಚ್ಚದಲ್ಲೇ ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ಇಂದು ಆದೇಶ ಮಾಡಿದೆ.

ರಾಷ್ಟ್ರದ 19 ರಾಜ್ಯಗಳ 36 ಪ್ರವಾಸೋದ್ಯಮ ಕೇಂದ್ರಗಳನ್ನು ಗುರುತಿಸಿ, ಅಭಿವೃದ್ಧಿಪಡಿಸಲಾಗುತ್ತಿದೆ. ಇದರಡಿ ಸ್ಥಳೀಯ ನಿರುದ್ಯೋಗ ಸಮಸ್ಯೆ, ಸ್ಥಳೀಯ ಉತ್ಪನ್ನಗಳ ವ್ಯಾಪಾರ ವಹಿವಾಟಿಗೆ ಉತ್ತೇಜನ ಹಾಗೂ ಗುರುತಿಸಲ್ಪಟ್ಟಿರುವ ಪ್ರವಾಸಿ ಕೇಂದ್ರಗಳನ್ನು ನೂರಾರು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಮೈಸೂರು ಸಂಸ್ಥಾನಕ್ಕೆ ಸೇರಿದ ಅರಮನೆಗಳು ಮತ್ತು ಸುತ್ತಲಿನ ಪರಿಸರ, ಚಾಮುಂಡೇಶ್ವರಿ ದೇವಾಲಯ ಸೇರಿದಂತೆ ನಗರದ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಪೂಜಾ ಕೇಂದ್ರಗಳ ಅಭಿವೃದ್ಧಿ. ಕೇವಲ ಮೈಸೂರು ನಗರವಷ್ಟೇ ಅಲ್ಲದೇ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಕೃಷ್ಣರಾಜ ಸಾಗರ ಅಣೆಕಟ್ಟು, ನಂಜನಗೂಡು, ತಲಕಾಡು ಸೇರಿದಂತೆ ಪ್ರಮುಖ ಪ್ರವಾಸಿ ಕೇಂದ್ರಗಳು ಅಭಿವೃದ್ಧಿಯಾಗಲಿವೆ. ಇದರ ಜೊತೆಗೆ ಹಾಸನ, ಕೊಡಗು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯ ಪ್ರವಾಸ ಕೇಂದ್ರಗಳನ್ನು ಮೈಸೂರು ಸರ್ಕ್ಯೂಟ್ ಅಡಿ ತಂದು ಅಭಿವೃದ್ಧಿಪಡಿಸಲಾಗುತ್ತದೆ. ಸ್ಮಾರ್ಟ್ ಸಿಟಿ ಯೋಜನೆಯಿಂದ ವಂಚಿತಗೊಂಡಿದ್ದ ಮೈಸೂರಿಗೆ ಇದೀಗ ಕೇಂದ್ರ ಪ್ರವಾಸೋದ್ಯಮ ಇಲಾಖೆ ಸಮಗ್ರ ಅಭಿವೃದ್ಧಿಗೆ ಕೈಗೆತ್ತಿಕೊಳ್ಳುತ್ತಿದೆ. ಇದರಿಂದ ಕೇಂದ್ರದ ಈ ನಿರ್ಧಾರದಿಂದ ಸಾಂಸ್ಕೃತಿಕ ನಗರಿ, ಅದರ ಸುತ್ತಮುತ್ತಲಿನ ಅಭಿವೃದ್ಧಿ ಮತ್ತು ಮೂಲ ಸೌಕರ್ಯ ಕಲ್ಪಿಸಲು ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡಲಿದೆ. ಕೇಂದ್ರದ ಈ ನಿರ್ಧಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟ್ವೀಟ್ ಮೂಲಕ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ದಲಿತ ಯುವತಿಗೆ ವಂಚನೆ: ಸ್ಯಾಂಟ್ರೋ ರವಿ ವಿರುದ್ಧ ಕ್ರಮಕ್ಕೆ ಮಾಜಿ ಮೇಯರ್ ಪುರುಷೋತ್ತಮ್ ಆಗ್ರಹ



ಮೈಸೂರು, ಜ.5– ದಲಿತ ಯುವತಿಯನ್ನು ವಂಚಿಸಿ, ವೇಶ್ಯಾವಾಟಿಕೆಗೆ ತಳ್ಳಲು ಯತ್ನಿಸಿದ ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿಯನ್ನು ಕೂಡಲೇ ಬಂಧಿಸಿ, ಕಠಿಣ ಶಿಕ್ಷೆ ವಿಧಿಸಬೇಕೆಂದು ಮಾಜಿ ಮೇಯರ್ ಪುರುಷೋತ್ತಮ್ ಒತ್ತಾಯಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸ್ಯಾಂಟ್ರೋ ರವಿಯ ಈ ದುಷ್ಕೃತ್ಯ ಇತ್ತೀಚೆಗೆ ಚರ್ಚೆಗೆ ಬಂದಿದೆ. ಆದರೆ ಆತ ವಿದ್ಯಾರ್ಥಿಯಾಗಿದ್ದ ದಿನಗಳಿಂದಲೂ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿದ್ದ. ಅಸಹಾಯಕ, ಶೋಷಿತ, ದುರ್ಬಲ ಹೆಣ್ಣು ಮಕ್ಕಳನ್ನು ನಂಬಿಸಿ ವಂಚಿಸಿದ್ದಾನೆ. ಅವರ ಮೇಲೆ ದೌರ್ಜನ್ಯ ಎಸಗಿದ್ದಾನೆ. ವಿವಿಧ ಪ್ರಕರಣಗಳಲ್ಲಿ ಜೈಲಿಗೆ ಹೋಗಿ ಬಂದಿರುವ ಆತನ ವಿರುದ್ಧ 4 ದಿನಗಳ ಹಿಂದೆ ಮೈಸೂರಲ್ಲಿ ಮತ್ತೊಂದು ಪ್ರಕರಣ ದಾಖಲಾಗಿದೆ. ಆದರೆ ಆತನನ್ನು ಇನ್ನೂ ಬಂಧಿಸಿಲ್ಲವೇಕೆ ಎಂದು ಪ್ರಶ್ನಿಸಿದರು.

ಗೃಹಸಚಿವರು ಸೇರಿದಂತೆ ಹಲವು ಸಚಿವರು, ಐಎಎಸ್, ಐಪಿಎಸ್ ಅಧಿಕಾರಿಗಳ ಹೆಸರನ್ನು ಸ್ಯಾಂಟ್ರೋ ರವಿ ಇತರೊಂದಿಗೆ ಸಂಭಾಷಣೆ ನಡೆಸುವಾಗ ಹೇಳಿದ್ದಾನೆ ಎನ್ನುವುದು ಆತಂಕಕಾರಿ ಸಂಗತಿ. ಹಾಗಾದರೆ ರಾಜಕೀಯ ನಾಯಕರು ಹಾಗೂ ಅಧಿಕಾರಿಗಳ ಸ್ಯಾಂಟ್ರೋ ರವಿ ಚಟುವಟಿಕೆಗಳಿಗೆ ಬೆಂಬಲ ನೀಡಿದ್ದಾರಾ ಎಂಬ ಅನುಮಾನ ಮೂಡುತ್ತದೆ. ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಎಸಗಿರುವ ಆತ ಕ್ಷಮೆಗೆ ಅರ್ಹನಲ್ಲ. ಪೊಲೀಸರು ಕೂಡಲೇ ಆತನನ್ನು ಬಂಧಿಸಿ, ಜಾಮೀನು ಸಿಗದಂತೆ ನೋಡಿಕೊಳ್ಳಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಅಶೋಕಪುರಂನ ಡಿ.ಮಹಾತ್ಮ ಇದ್ದರು.

ವಿಧಾನಸೌಧದಲ್ಲಿ ಮಂಡ್ಯದ ಇಂಜಿನಿಯರ್ ಬಳಿ ಇದ್ದ 10.50 ಲಕ್ಷ ನಗದು ವಶ

- ಪಶ್ಚಿಮ ದ್ವಾರದಲ್ಲಿ ತಪಾಸಣೆ ವೇಳೆ ಹಣ ಪತ್ತೆ
- ಈ ಅನಧಿಕೃತ ಹಣ ಸಂಬಂಧ ಪ್ರಕರಣ ದಾಖಲು

ಬೆಂಗಳೂರು, ಜ.5(ಕೆಎಂಶಿ)– ವಿಧಾನಸೌಧದಲ್ಲಿ ಅನಧಿಕೃತವಾಗಿ ಸಾಗಾಟ ಮಾಡುತ್ತಿದ್ದ ಸುಮಾರು 10.50 ಲಕ್ಷ ರೂ. ನಗದನ್ನು ಪೊಲೀಸರು ವಶಪಡಿಸಿಕೊಂಡಿರುವ ಘಟನೆ ಬುಧವಾರ ಸಂಜೆ ನಡೆದಿದೆ.

ಬುಧವಾರ ಸಂಜೆ ವಿಧಾನಸೌಧದ ಪಶ್ಚಿಮ ದ್ವಾರದ ಮೂಲಕ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್‌ವೊಬ್ಬರು ಅನಧಿಕೃತವಾಗಿ ಹಣ ಸಾಗಾಟ ಮಾಡುತ್ತಿದ್ದರು. ಗೇಟ್‌ನಲ್ಲಿ ಪೊಲೀಸರು ಪರಿಶೀಲನೆ ಮಾಡಿದ ಸಂದರ್ಭದಲ್ಲಿ ಮಂಡ್ಯ ಮೂಲದ ಈ ವ್ಯಕ್ತಿಯ ಬ್ಯಾಗ್‌ನಲ್ಲಿ ದೊಡ್ಡ ಮೊತ್ತದ ಹಣ ಇರುವುದು ಪತ್ತೆಯಾಗಿದೆ.

ವ್ಯಕ್ತಿಯ ಬಳಿ ಹಣದ ಮೂಲ ಕುರಿತಾಗಿ ಪೊಲೀಸರು ಪ್ರಶ್ನಿಸಿದಾಗ ಯಾವುದೇ ಸ್ಪಷ್ಟವಾದ ಮಾಹಿತಿಯನ್ನು ಆತ ನೀಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಪೊಲೀಸರು ಹಣವನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಎಫ್‌ಐಆರ್ ಕೂಡ ದಾಖಲಾಗಿದೆ.

ಹಣ ಸಾಗಾಟ ಮಾಡುತ್ತಿದ್ದ ವ್ಯಕ್ತಿಯನ್ನು ವಿಧಾನಸೌಧ ಪೊಲೀಸರು ಈಗ ವಶಕ್ಕೆ ಪಡೆದುಕೊಂಡಿದ್ದಾರೆ. ಆದರೆ ಈ ವ್ಯಕ್ತಿ ಇಷ್ಟು ಮೊತ್ತದ ಹಣವನ್ನು ವಿಧಾನಸೌಧಕ್ಕೆ ಏಕೆ ತೆಗೆದುಕೊಂಡು ಹೋಗುತ್ತಿದ್ದರು ಎಂಬುವುದು ಇನ್ನೂ ದೃಢಪಟ್ಟಿಲ್ಲ. ಹಣದ ಮೂಲದ ಬಗ್ಗೆಯೂ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಈ ಬಗ್ಗೆ ಮಾಹಿತಿ ನೀಡಿರುವ ಪೊಲೀಸರು, ಮಂಡ್ಯ ಮೂಲದ ಪಿಡಬ್ಲ್ಯುಡಿ ಕಿರಿಯ ಎಂಜಿನಿಯರ್ ಜಗದೀಶ್ ಎಂಬುವರು ವಿಧಾನ ಸೌಧದಲ್ಲಿ ಅನಧಿಕೃತ ಹಣ ಸಾಗಾಟ ಮಾಡುತ್ತಿದ್ದುದು ಕಂಡುಬಂದಿದೆ. ಜಗದೀಶ್ ಹಣದೊಂದಿಗೆ ಮಂಡ್ಯಕ್ಕೆ ತೆರಳಬೇಕಿತ್ತು. ಅದಕ್ಕೂ ಮುನ್ನ ಯಾರನ್ನೋ ಕಾಣಲು ವಿಧಾನಸೌಧಕ್ಕೆ ಹಣ ಸಮೇತ ಒಳ ಹೋಗಲು ಬಂದಿದ್ದಾರೆ.


ಈ ವೇಳೆ ಭದ್ರತಾ ಸಿಬ್ಬಂದಿ ಚೆಕ್ ಮಾಡಿದ್ದು, ಸೂಕ್ತ ದಾಖಲಾತಿ ತೋರಿಸದ ಹಿನ್ನೆಲೆಯಲ್ಲಿ ಹಣವನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಜಗದೀಶ್‌ನನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದಿದ್ದಾರೆ. ಇಷ್ಟು ದೊಡ್ಡ ಮೊತ್ತವನ್ನು ವಿಧಾನಸೌಧಕ್ಕೆ ತಂದಿದ್ದ ಉದ್ದೇಶ ಏನು ಯಾರಿಗೆ ನೀಡಲು ತಂದಿದ್ದರು ಎಂಬುದು ಸ್ಪಷ್ಟವಾಗಿಲ್ಲ. ಸದ್ಯ ಪೊಲೀಸರು ಪ್ರಕರಣವನ್ನು ಎನ್‌ಸಿಆರ್ ಮಾಡಿದ್ದು, ಕೋರ್ಟ್‌ಗೆ ಹಣ ಜಮಾವಣೆ ಮಾಡಿ ತನಿಖೆ ಪ್ರಾರಂಭಿಸಿದ್ದಾರೆ. ಯಾವ ವಿಚಾರಕ್ಕೆ ಹಣ ತಂದಿದ್ದರು, ಯಾರಿಗೆ ಹಣ ತಲುಪಿಸಲಾಗುತ್ತಿತ್ತು ಎಂಬುದರ ಬಗ್ಗೆ ತನಿಖೆಯನ್ನು ಪೊಲೀಸರು ನಡೆಸುತ್ತಿದ್ದಾರೆ. ಇಂಜಿನಿಯರ್ ಅನ್ನು ವಶಕ್ಕೆ ಪಡೆದುಕೊಳ್ಳುತ್ತಿದ್ದಂತೆ ಸಚಿವರೊಬ್ಬರ ಕಚೇರಿಯಿಂದ ಅವರನ್ನು ಬಿಡುವಂತೆ ಒತ್ತಡ ಬಂದಿದೆ. ಆದರೆ ಅಧಿಕಾರಿಗಳು ಅದಕ್ಕೆ ಸ್ಪಂದಿಸದೇ ಹಣವನ್ನು ವಶಕ್ಕೆ ಪಡೆದು, ಅಧಿಕಾರಿ ವಿರುದ್ಧ ಕಾನೂನು ಕ್ರಮ ಜರುಗಿಸಿದ್ದಾರೆ.

ನಾಳೆ ಪೂರ್ಣಪ್ರಜ್ಞಾ ವಿದ್ಯಾಕೇಂದ್ರದ ವಾರ್ಷಿಕೋತ್ಸವ

ಮೈಸೂರು,ಜ.5–ಮೈಸೂರಿನ ನಾಗರಿಕ ವೇದಿಕೆಯ ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಪೂರ್ಣಪ್ರಜ್ಞಾ ವಿದ್ಯಾಕೇಂದ್ರದ ಶಾಲಾ ವಾರ್ಷಿಕೋತ್ಸವವನ್ನು ಜ.7ರಂದು ಸಂಜೆ 4.30 ಗಂಟೆಗೆ ಕುವೆಂಪುನಗರದ ಗಾನಭಾರತಿ ಬಯಲು ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಮಾಜಿ ಡಿ.ಮಾದೇಗೌಡ ಉದ್ಘಾಟಿಸುವರು. ನಾಗರಿಕ ವೇದಿಕೆ ಅಧ್ಯಕ್ಷ ಬಿ.ಪಿ.ಮುಟ್ಟಸ್ವಾಮಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಟ ಪವನ್‌ತೇಜ್, ಅಂತಾರಾಷ್ಟ್ರೀಯ ಕ್ರೀಡಾಪಟು ಎಂ.ಡಿ.ನಾಗೇಂದ್ರ ಭಾಗವಹಿಸುವರು.

ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ಕ್ಯಾಲೆಂಡರ್ ಬಿಡುಗಡೆ

ಯಾವುದೇ ಪತ್ರಿಕೆ ಉದ್ದೇಶ ಸಾರ್ಥಕವಾಗುವಲ್ಲಿ ವಿತರಕರದ್ದು ಮಹತ್ವದ ಪಾತ್ರ: ಹಿರಿಯ ವಿತರಕರನ್ನು ಸನ್ಮಾನಿಸಿ ಶಾಸಕ ಎಸ್.ಎ.ರಾಮದಾಸ್ ಪ್ರಶಂಸೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಮೈಸೂರು ನಗರ ಪತ್ರಿಕಾ ವಿತರಕರ ಸಂಘದ 2023ನೇ ಸಾಲಿನ ಕ್ಯಾಲೆಂಡರ್ ಅನ್ನು ಶಾಸಕ ಎಸ್.ಎ.ರಾಮದಾಸ್ ಗುರುವಾರ ಬಿಡುಗಡೆ ಮಾಡಿದರು. ಎಡದಿಂದ, ವಿತರಕರ ಸಂಘದ ನಿರ್ದೇಶಕ ಎಂ.ಜೆ.ರಮೇಶ್, ಉಪಾಧ್ಯಕ್ಷ ಜೆ.ನಾಗೇಶ್‌ಮೂರ್ತಿ, ಅಧ್ಯಕ್ಷ ಬಿ.ಸುರೇಶ್, ಜಿಲ್ಲಾ ಪತ್ರಕರ್ತರ ಸಂಘದ ನಗರ ಉಪಾಧ್ಯಕ್ಷ ಎಂ.ಎಸ್.ಬಸವಣ್ಣ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿತರಕರ ಸಂಘದ ಖಜಾಂಚಿ ಜೆ.ಲೋಕೇಶ್, ನಿರ್ದೇಶಕ ಎನ್.ಆನಂದ್, ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಂದರ್ ಚಿತ್ರದಲ್ಲಿದ್ದಾರೆ.



ಹಿರಿಯ ಪತ್ರಿಕೆ ವಿತರಕರಾದ ಅಶ್ವತ್ಥ್, ಸಿ.ಕೆ.ರಘುಪತಿ, ಕಾಳೇಗೌಡ, ನಾಗರಾಜ್, ಮಹದೇವ್, ಮೊಗಣ್ಣ, ಜವರಪ್ಪ, ಚಿಕ್ಕಯ್ಯ ಮತ್ತು ಗುಂಡಣ್ಣ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಜ.5(ಪಿಎಂ)– ಓದುಗರ ಮನೆ ಬಾಗಿಲಿಗೆ ಪತ್ರಿಕೆಗಳನ್ನು ತಲುಪಿಸುವ ಪತ್ರಿಕಾ ವಿತರಕರು ಪತ್ರಿಕೆ ಉದ್ದೇಶ ಸಾರ್ಥಕವಾಗುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾರೆ ಎಂದು ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ಗೌರವಾಧ್ಯಕ್ಷರೂ ಆದ ಮಾಜಿ ಸಚಿವ ಹಾಗೂ ಶಾಸಕ ಎಸ್.ಎ.ರಾಮದಾಸ್ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಘದ 2023ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಪತ್ರಿಕಾ ವಿತರಕರು ಬೆಳಗ್ಗೆ ಓದುಗರು ನಿದ್ದೆಯಿಂದ ಎದ್ದೇಳುವ ಮುನ್ನವೇ ಪತ್ರಿಕೆಗಳನ್ನು ಅವರ ಮನೆಗಳಿಗೆ ಮುಟ್ಟಿಸುವ ಕೈಂಕರ್ಯವನ್ನು ಮಾಡುತ್ತಾರೆ. ಪ್ರತಿದಿನ ಇಂತಹ ಕಾರ್ಯದಲ್ಲಿ ನಿರತವಾಗುವ ವಿತರಕರು ಶ್ರಮಜೀವಿಗಳು. ಪತ್ರಿಕೆ ಹೊರಬರುವಲ್ಲಿ ಇತರ ಎಲ್ಲಾ ವ್ಯವಸ್ಥೆಗಳಂತೆ ವಿತರಕರ ಪಾತ್ರವೂ ದೊಡ್ಡದು. ಪತ್ರಿಕೆ ಹಂಚುವ ಕೆಲಸ ಸಣ್ಣದಲ್ಲ. ಕಾಯಕದಲ್ಲಿ ಯಾವುದೂ ದೊಡ್ಡದು–ಚಿಕ್ಕದು ಎಂಬುದಿಲ್ಲ. ಹತ್ತು ಹಲವು ವರ್ಷಗಳಿಂದ ನಿರಂತರವಾಗಿ ವಿತರಕರಾಗಿ ಸೇವೆ ಸಲ್ಲಿಸುತ್ತಿರುವ ಹಿರಿಯರನ್ನು ಸನ್ಮಾನಿಸಿರುವುದು ಶ್ಲಾಘನೀಯ. ಈ ಸನ್ಮಾನ ಕಾಯಕನಿಷ್ಠೆಗೆ ಸಲ್ಲಿಸಿದ ಗೌರವ ಎಂದು ತಿಳಿಸಿದರು.

ವೈಜ್ಞಾನಿಕ ಕ್ಯಾಲೆಂಡರ್ ಭಾರತದ ಕೊಡುಗೆ: ಹವಾಮಾನ ಮತ್ತು ವಿಜ್ಞಾನದ ಆಧಾರದ ಮೇಲೆ ಕ್ಯಾಲೆಂಡರ್ ಕೊಟ್ಟಿರುವ ದೇಶ ಭಾರತ. ಇಡೀ ವಿಶ್ವದಲ್ಲಿ ಸುಮಾರು 56 ಬಗೆಯ ಕ್ಯಾಲೆಂಡರ್‌ಗಳಿವೆ. ಈ ಪೈಕಿ ನಮ್ಮ ದೇಶದ ಪಂಚಾಂಗ ಮತ್ತು ಕ್ಯಾಲೆಂಡರ್‌ಗೆ 5,108 ವರ್ಷಗಳ ಇತಿಹಾಸ ಇದೆ. ಆದರೆ ಇಡೀ ವಿಶ್ವಕ್ಕೆ ಬ್ರಿಟಿಷರ ಆಡಳಿತ ಬಂದ ಸಂದರ್ಭದಲ್ಲಿ ಇಂಗ್ಲಿಷ್ ಕ್ಯಾಲೆಂಡರ್ ತನ್ನದೇ ಪ್ರಭಾವ ಉಂಟು ಮಾಡಿತು. ಹಾಗಾಗಿ ವ್ಯವಹಾರಿಕ ದೃಷ್ಟಿಯಿಂದ ಇಂದು ಇಂಗ್ಲಿಷ್ ಕ್ಯಾಲೆಂಡರ್ ಅನ್ನು ಪ್ರತಿವರ್ಷ ಅವಲಂಬಿಸಿದ್ದೇವೆ. ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ಈ ಕ್ಯಾಲೆಂಡರ್‌ನಲ್ಲಿ ನಮ್ಮ ಪಂಚಾಂಗದ ಎಲ್ಲಾ ವಿವರಗಳನ್ನು ನೀಡಲಾಗಿದೆ ಎಂದರು.

ಮೈಸೂರಿನ ಒಂಟಿಕೊಪ್ಪಲ್ ಪಂಚಾಂಗ ಇಡೀ ರಾಜ್ಯದಲ್ಲಿ ಪ್ರಾಮುಖ್ಯತೆ ಹೊಂದಿದೆ. ನಮ್ಮ ಪರಂಪರೆಯಲ್ಲಿ ವೈಜ್ಞಾನಿಕ ದೃಷ್ಟಿಕೋನದಲ್ಲಿ ಕ್ಯಾಲೆಂಡರ್ ಅನ್ನು ನೋಡಲಾಗಿದೆ. ನಮ್ಮ ಪ್ರಾಚೀನ ಖಗೋಳಶಾಸ್ತ್ರಜ್ಞರಾದ ಆರ್ಯಭಟ, ಭಾಸ್ಕರ ಮೊದಲಾದವರ ಅಧ್ಯಯನದಿಂದ ಇದನ್ನು ಮನಗಾಣಬಹುದು. ಜೊತೆಗೆ ಕ್ಯಾಲೆಂಡರ್ ಎಂದಾಗ ಕೇವಲ ದಿನಾಂಕ ಮಾತ್ರ ನೋಡುವುದಿಲ್ಲ. ಜೊತೆಗೆ ಸೂರ್ಯ, ಚಂದ್ರಗ್ರಹಣ ಸೇರಿದಂತೆ ವೈಜ್ಞಾನಿಕ ವಿಚಾರಧಾರೆಯನ್ನು ಭಾರತದ ಪ್ರಾಚೀನ ಖಗೋಳ ವಿಜ್ಞಾನಿಗಳು ನೀಡಿದ್ದಾರೆ ಎಂದು ತಿಳಿಸಿದರು.

ಇಂದು ಖಗೋಳಶಾಸ್ತ್ರ ಬಹಳ ದೊಡ್ಡ ವಿಜ್ಞಾನವಾಗಿ ಬೆಳೆದಿದ್ದು, ಈ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಸಾಧನ ಸಲಕರಣೆಗಳನ್ನು ಬಳಕೆ ಮಾಡಲಾಗುತ್ತಿದೆ. ಆದರೆ ಈ ಯಾವುದೇ ವ್ಯವಸ್ಥೆ ಇಲ್ಲದ ಸಂದರ್ಭದಲ್ಲಿ ನಮ್ಮ ಪ್ರಾಚೀನ ವಿಜ್ಞಾನಿ ಆರ್ಯಭಟ ಖಗೋಳಶಾಸ್ತ್ರ ಬಗ್ಗೆ ಮಹತ್ವದ ವಿಚಾರಗಳನ್ನು ದಾಖಲಿಸಿದ್ದಾರೆ. ಕ್ಯಾಲೆಂಡರ್ ಅನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅದರಲ್ಲಿರುವ ವಿಜ್ಞಾನದ ವೈಶಿಷ್ಟ್ಯ ಅರಿವಿಗೆ ಬರಲಿದೆ ಎಂದು ಹೇಳಿದರು.

ಹಿರಿಯ ಪತ್ರಕರ್ತರೂ ಆದ ಕರ್ನಾಟಕ ಮಾಧ್ಯಮ ಅಕಾಡೆಮಿ ಮಾಜಿ ಸದಸ್ಯ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಪತ್ರಿಕಾರಂಗ 4ನೇ ಸ್ಥಾನ ಪಡೆದಿದೆ. ಅದೇ ಪತ್ರಿಕಾರಂಗದಲ್ಲಿ ಪ್ರಮುಖವಾಗಿ ಸಂಪಾದಕೀಯ, ಪ್ರಸರಣ, ಜಾಹೀರಾತು ವ್ಯವಸ್ಥೆಗಳನ್ನು ಗುರುತಿಸಲಾಗುತ್ತದೆ. ಸಂಪಾದಕೀಯ ವಿಭಾಗದವರು ಪತ್ರಿಕೆ ಹೊರತರಲು ಎಷ್ಟೇ ಶ್ರಮವಹಿಸಿದರೂ ಅದನ್ನು ಓದುಗರಿಗೆ ತಲುಪಿಸುವ ಮಹತ್ವದ ಕೆಲಸವನ್ನು ವಿತರಕರು ಮಾಡುತ್ತಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ವರ್ಷಕ್ಕೆ ಕೇವಲ ನಾಲ್ಕು ರಜೆಗಳನ್ನು ನಿಗದಿ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ವರ್ಷದ 361 ದಿನಗಳು ವಿತರಕರು ಕಾಯಕ ಮಾಡುತ್ತಾರೆ. ಕೋವಿಡ್ ಸಂದರ್ಭದಲ್ಲಿಯೂ ಓದುಗರ ಮನೆಗಳಿಗೆ ಪತ್ರಿಕೆಗಳನ್ನು ತಲುಪಿಸಿದ ಕೀರ್ತಿ ವಿತರಕರಿಗೆ ಸಲ್ಲಬೇಕು ಎಂದು ಎಂದು ತಿಳಿಸಿದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿಗೆ 2 ಕೋಟಿ ರೂ. ಮೀಸಲಿಡಲಾಗಿದೆ. ಇದೀಗ ಈ ಹಣವನ್ನು ವಿತರಕರ ಕ್ಷೇಮಾಭಿವೃದ್ಧಿಗೆ ಸಮರ್ಪಕವಾಗಿ ಬಳಕೆ ಮಾಡಲು ಕರ್ನಾಟಕ ಮಾಧ್ಯಮ ಅಕಾಡೆಮಿ ಕಾರ್ಯದರ್ಶಿ ಸಿ.ರೂಪಾ ಅವರ ನೇತೃತ್ವದಲ್ಲಿ ಇತ್ತೀಚೆಗೆ ಸರ್ಕಾರ ಉಪಸಮಿತಿ ರಚನೆ ಮಾಡಿದೆ. ಉಪಸಮಿತಿ ಶೀಘ್ರದಲ್ಲಿ ಮೈಸೂರಿಗೂ ಭೇಟಿ ನೀಡಿ ವಿತರಕರ ಜೊತೆ ಚರ್ಚೆ ನಡೆಸಲಿದೆ ಎಂದು ತಿಳಿಸಿದರು.

ಅನುದಾನ ಕಲ್ಪಿಸಿ: ಮುಂದಿನ ದಿನಗಳಲ್ಲಿ ವಿಧಾನಸಭೆ ಬಜೆಟ್ ಅಧಿವೇಶನ ಆರಂಭಗೊಳ್ಳಲಿದ್ದು, ಅದಕ್ಕೆ ಮುಂಗಡವಾಗಿ ಪತ್ರಿಕಾ ವಿತರಕರ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆದು ಅವರು ಕ್ಷೇಮಾಭಿವೃದ್ಧಿಗೆ ಅನುದಾನ ಕೊಡಿಸಬೇಕೆಂದು ಶಾಸಕ ರಾಮದಾಸ್ ಅವರಲ್ಲಿ ಅಂಶಿ ಪ್ರಸನ್ನಕುಮಾರ್ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಹಿರಿಯ ಪತ್ರಿಕಾ ವಿತರಕರಾದ ಅಶ್ವತ್ಥ್, ಸಿ.ಕೆ.ರಘುಪತಿ, ಕಾಳೇಗೌಡ, ನಾಗರಾಜ್, ಮಹದೇವ್, ಮೊಗಣ್ಣ, ಜವರಪ್ಪ, ಚಿಕ್ಕಯ್ಯ ಮತ್ತು ಗುಂಡಣ್ಣ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನಗರ ಉಪಾಧ್ಯಕ್ಷ ಎಂ.ಎಸ್.ಬಸವಣ್ಣ (ಅನುರಾಗ್ ಬಸವರಾಜ್), 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪ್ರಸರಣ ವಿಭಾಗದ ವ್ಯವಸ್ಥಾಪಕ ಟಿ.ಎಸ್.ಗೋಪಿನಾಥ್, ವಿತರಕರ ಸಂಘದ ಅಧ್ಯಕ್ಷ ಬಿ.ಸುರೇಶ್, ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಂದರ್, ಉಪಾಧ್ಯಕ್ಷ ಜೆ.ನಾಗೇಶ್‌ಮೂರ್ತಿ, ಖಜಾಂಚಿ ಜೆ.ಲೋಕೇಶ್, ವಿವಿಧ ಪತ್ರಿಕೆಗಳ ಪ್ರಸರಣ ವ್ಯವಸ್ಥಾಪಕರು ಸೇರಿದಂತೆ ಮತ್ತಿತರರು ಹಾಜರಿದ್ದರು.

ವಿದ್ಯಾರ್ಥಿನಿಯ ಬ್ಲಾಕ್‌ಮೇಲ್ ಮಾಡುತ್ತಿದ್ದ ಯುವಕನ ಹತ್ಯೆ

ನಾಪತ್ತೆಯಾಗಿದ್ದ ಹಾವೇರಿ ರೈತನ ಪ್ರಕರಣ ಅಂತೂ ಬಯಲು

ನಂಜನಗೂಡು, ಜ.5–ನಂಜನಗೂಡು ತಾಲೂಕಿನಲ್ಲಿ ನಾಪತ್ತೆಯಾಗಿದ್ದ ಹಾವೇರಿ ಜಿಲ್ಲೆಯ ರೈತನ ಪ್ರಕರಣದ ತನಿಖೆ ನಡೆಸಿದ ಬಿಳಿಗೆರೆ ಠಾಣೆ ಪೊಲೀಸರು ಈ ರೈತ ಹತ್ಯೆಯಾಗಿರುವುದನ್ನು ಪತ್ತೆ ಹಚ್ಚಿ, ಈ ಸಂಬಂಧ ಇಬ್ಬರನ್ನು ಬಂಧಿಸಿದ್ದಾರೆ.



ಹಾವೇರಿ ಜಿಲ್ಲೆ ಹಿರೇಹಳ್ಳಿ ಗ್ರಾಮದ ರೈತ ಚಂದ್ರಗೌಡ(25) ಹತ್ಯೆಗೀಡಾದವನಾಗಿದ್ದು, ಈತ ನಂಜನಗೂಡು ತಾಲೂಕಿನ ವಿದ್ಯಾರ್ಥಿನಿಯೋರ್ವಳನ್ನು ಬ್ಲಾಕ್‌ಮೇಲ್ ಮಾಡಿ ಲೈಂಗಿಕ ಸಂಪರ್ಕ ಹೊಂದಿದ್ದಲ್ಲದೇ, ಅದರ ವೀಡಿಯೋಗಳನ್ನು ಆಕೆಯ ಅಣ್ಣನಿಗೆ ಕಳುಹಿಸಿದ ಹಿನ್ನೆಲೆಯಲ್ಲಿ ಆತನನ್ನು ನಂಜನಗೂಡು ತಾಲೂಕಿಗೆ ಬರಮಾಡಿಕೊಂಡು ಹತ್ಯೆ ಮಾಡಲಾಗಿದೆ ಎಂಬುದು ತನಿಖೆ ವೇಳೆ ತಿಳಿದು ಬಂದಿದೆ.

ಹಾವೇರಿ ಜಿಲ್ಲೆಯಿಂದ 2022ರ ನ.20ರಂದು ನಂಜನಗೂಡು ತಾಲೂಕಿಗೆ ಆಗಮಿಸಿದ್ದ ಚಂದ್ರಗೌಡ ನಾಪತ್ತೆಯಾಗಿದ್ದಾನೆ ಎಂದು ಆತನ ಪರಿಚಯಸ್ಥರಾದ ತಿ.ನರಸೀಪುರ ತಾಲೂಕಿನ ಮಂಜಪ್ಪ ಎಂಬುವರು ಡಿ.29ರಂದು ನೀಡಿದ ದೂರನ್ನು ದಾಖಲಿಸಿಕೊಂಡಿದ್ದ ಬಿಳಿಗೆರೆ ಠಾಣೆ ಸಬ್‌ಇನ್ಸ್‌ಪೆಕ್ಟರ್ ಟಿ.ಆರತಿ ತನಿಖೆ ಕೈಗೆತ್ತಿಕೊಂಡಿದ್ದರು.

ಚಂದ್ರಗೌಡನ ಜೊತೆ ನಾಪತ್ತೆಯಾದ ದಿನ ಇದ್ದ ಇಬ್ಬರನ್ನು ಪತ್ತೆ ಮಾಡಿ ಜ.1ರಂದು ಅವರನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಚಂದ್ರಗೌಡ ಹತ್ಯೆಯಾಗಿರುವುದು ಬಯಲಾಗಿದೆ.

ವಿವರ: ಹತ್ಯೆಗೀಡಾದ ಚಂದ್ರಗೌಡನ ಚಿಕ್ಕಪ್ಪನ ಮಗಳು ತಿ.ನರಸೀಪುರ ತಾಲೂಕಿನ ವಸತಿ ಶಾಲೆಯೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್ ಶಿಕ್ಷಣದ ವೇಳೆ ಆಕೆ ವಿದ್ಯಾರ್ಥಿಗಳ ಗ್ರೂಪ್‌ನಲ್ಲಿ ತನ್ನ ದೊಡ್ಡಪ್ಪನ ಮಗ ಚಂದ್ರಗೌಡನನ್ನೂ ಕೂಡ ಸೇರಿಸಿದ್ದರು. ಈ ಗ್ರೂಪ್‌ನಿಂದ ನಂಜನಗೂಡು ತಾಲೂಕಿನ ವಿದ್ಯಾರ್ಥಿನಿಯೋರ್ವಳ ಫೋಟೋಗಳನ್ನು ಡೌನ್‌ಲೋಡ್ ಮಾಡಿಕೊಂಡ ಚಂದ್ರಗೌಡ, ಅದನ್ನು ಅಶ್ಲೀಲವಾಗಿ ಎಡಿಟ್ ಮಾಡಿ ನಂಜನಗೂಡು ತಾಲೂಕು ವಿದ್ಯಾರ್ಥಿನಿಯ ವಾಟ್ಸಾಪ್‌ಗೆ ರವಾನಿಸಿ ಬ್ಲಾಕ್‌ಮೇಲ್ ಮಾಡಿದ್ದಾನೆ. ನಂತರ ಆಕೆಯನ್ನು ಮೈಸೂರಿನ ಲಾಡ್ಜ್‌ವೊಂದಕ್ಕೆ ಕರೆಸಿಕೊಂಡು ಲೈಂಗಿಕ ಕ್ರಿಯೆ ನಡೆಸಿ, ಅದನ್ನೂ ಕೂಡ ವೀಡಿಯೋ ಹಾಗೂ ಫೋಟೋ ತೆಗೆದುಕೊಂಡಿದ್ದಾನೆ.

ಆನಂತರವೂ ಆತನ ಬ್ಲಾಕ್‌ಮೇಲ್ ಮುಂದುವರೆದಾಗ ವಿದ್ಯಾರ್ಥಿನಿ ಸಿಮ್ ಕಾರ್ಡ್ ಬದಲಾಯಿಸಿಕೊಂಡಿದ್ದಾಳೆ. ಕೆಲ ದಿನಗಳ ನಂತರ ಆಕೆಯ ಅಣ್ಣ ತನ್ನ ತಂಗಿಯ ಹಳೇ ಸಿಮ್ ಕಾರ್ಡ್‌ನ್ನು ಬಳಸಲಾರಂಭಿಸಿದಾಗ ವಾಟ್ಸಾಪ್ ಮೂಲಕ ತಂಗಿಯ ನಗ್ನ ಫೋಟೋ ಹಾಗೂ ಚಂದ್ರಗೌಡನೊಂದಿಗಿನ ಲೈಂಗಿಕ ಕ್ರಿಯೆ ವೀಡಿಯೋಗಳು ಬಂದಿವೆ. ಈ ಬಗ್ಗೆ ಚಂದ್ರಗೌಡನನ್ನು ಪ್ರಶ್ನಿಸಿದಾಗ, ಆತ ಇದು ಕೇವಲ ಸ್ಯಾಂಪಲ್ ಅಷ್ಟೇ ಎಂದು ಉಢಾಪೆಯಿಂದ ಹೇಳಿದ್ದಾನೆ.

ಈ ಸಂಬಂಧ ಚಂದ್ರಗೌಡನ ಪರಿಚಯಸ್ಥನಾದ ತಿ.ನರಸೀಪುರ ತಾಲೂಕಿನ ಮಂಜಪ್ಪ ಎಂಬುವರನ್ನು ಸಂಪರ್ಕಿಸಿದ ಯುವತಿ ಅಣ್ಣ, ಚಂದ್ರಗೌಡನಿಗೆ ಬುದ್ಧಿವಾದ ಹೇಳುವಂತೆ ಕೇಳಿಕೊಂಡಿದ್ದಾನೆ. ಆನಂತರವೂ ಯುವತಿ ಅಣ್ಣನ ವಾಟ್ಸಾಪ್‌ಗೆ ತಂಗಿಯ ಅಶ್ಲೀಲ ಚಿತ್ರಗಳು ಬರಲಾರಂಭಿಸಿವೆ. ಈ ವೇಳೆ ಮಂಜಪ್ಪ ಅವರನ್ನು ಮತ್ತೆ ಸಂಪರ್ಕಿಸಿದ ಯುವತಿ ಅಣ್ಣ ಚಂದ್ರಗೌಡನಿಗೆ ತಂಗಿಯನ್ನು ಮದುವೆ ಮಾಡುತ್ತೇವೆ. ಅದರ ಬಗ್ಗೆ ಮಾತುಕತೆ ನಡೆಸೋಣ ಎಂದು ಆತನನ್ನು ಕರೆಸಿಕೊಂಡು ಆತ ತನ್ನ ತಂಗಿಯ ತಂಟೆಗೆ ಬರದೇ ಇರುವಂತೆ ಪೂಜೆಯೊಂದನ್ನು ಮಾಡಿಸೋಣ ಎಂದು ತಿಳಿಸಿದ್ದಲ್ಲದೇ ಚಂದ್ರಗೌಡನನ್ನು ಕರೆಸುವಂತೆ ಕೇಳಿಕೊಂಡಿದ್ದಾನೆ.

ಅದರಂತೆ ನ.20ರಂದು ಮಂಜಪ್ಪ ಜೊತೆ ಯುವತಿಯ ಅಣ್ಣ ಹೇಳಿದಂತೆ ವರುಣಾ ಬಳಿಗೆ ಚಂದ್ರಗೌಡ ಬಂದಿದ್ದಾನೆ. ಆಗ ಯುವತಿಯ ಅಣ್ಣನ ಸಂಬಂಧಿಯೋರ್ವ ಜೊತೆಯಾಗಿದ್ದು, ಚಂದ್ರಗೌಡ ಮತ್ತು ಮಂಜಪ್ಪ ಅವರನ್ನು ಆಲ್ದೂರು ಗೇಟ್ ಬಳಿ ಬರಲು ತಿಳಿಸಿದ್ದಾರೆ. ಆನಂತರ ಉಪಾಯವಾಗಿ ಮಂಜಪ್ಪನನ್ನು ತಿ.ನರಸೀಪುರಕ್ಕೆ ಕರೆದೊಯ್ದು ಬಿಟ್ಟ ನಂತರ ಚಂದ್ರಗೌಡನ ಜೊತೆ ಸೇರಿ ಯುವತಿಯ ಅಣ್ಣ ಮತ್ತು ಸಂಬಂಧಿ ಮದ್ಯ ಸೇವನೆ ಮಾಡಿದ ನಂತರ ಆತನನ್ನು ಹತ್ಯೆ ಮಾಡಿ ಶವವನ್ನು ಗೋಣಿಚೀಲದಲ್ಲಿ ತುಂಬಿ, ಬೈಕ್‌ನಲ್ಲಿ ತಿ.ನರಸೀಪುರ ಹೊಸ ಸೇತುವೆ ಬಳಿ ಬಂದು ಕಬಿನಿ ನದಿಗೆ ಬಿಸಾಡಿದ್ದಾರೆ ಎಂಬುದು ತನಿಖೆ ವೇಳೆ ತಿಳಿದು ಬಂದಿದ್ದು, ನಾಪತ್ತೆ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಮಾರ್ಪಡಿಸಿಕೊಂಡ ಸಬ್ ಇನ್ಸ್‌ಪೆಕ್ಟರ್ ಆರತಿ ಅವರು ಇಬ್ಬರೂ ಆರೋಪಿಗಳನ್ನು ಬಂಧಿಸಿದ್ದಾರೆ.

ಸಿಎಫ್‌ಟಿಆರ್‌ಐ ಆವರಣದಲ್ಲಿ 'ಚಿರತೆ' ಶೋಧ ಮುಂದುವರಿಕೆ

● 10 ಕ್ಯಾಮರಾ, ಬೋನ್ ಅಳವಡಿಕೆ ● ಕಾಂಪೌಂಡ್ ಮೇಲೆ ಎರಡು ಪುನುಗು ಬೆಕ್ಕು ಪತ್ತೆ





ಮೈಸೂರು, ಜ.5(ಎಂಟಿವೈ)– ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ಎರಡನೇ ದಿನವೂ ಅರಣ್ಯ ಇಲಾಖೆ ಸಿಬ್ಬಂದಿ, ಚಿರತೆಗಾಗಿ ಶೋಧ ನಡೆಸಿದ್ದಾರೆ. ಆದರೆ ಯಾವುದೇ ಸುಳಿವು ದೊರೆತಿಲ್ಲ. ಇಲ್ಲಿ ಅಳವಡಿಸಿರುವ 10 ಕ್ಯಾಮರಾಗಳಲ್ಲೂ ಚಿರತೆ ದೃಶ್ಯ ಸೆರೆಯಾಗಿಲ್ಲ. ಹಾಗಾಗಿ ಆತಂಕ ಮುಂದುವರೆದಿದೆ.

ಚಿರತೆಗಳು ಕಂಡು ಬಂದವು ಎಂದು ಹೇಳಲಾದ ಸ್ಥಳವೂ ಸೇರಿದಂತೆ ಸುತ್ತಮುತ್ತ ಬುಧವಾರ ದಿನವಿಡೀ ಪರಿಶೀಲನೆ ನಡೆಸಿ, ಬೋನ್, 10 ಕ್ಯಾಮರಾಗಳ ಅಳವಡಿಸಲಾಗಿತ್ತು. ಆದರೆ, ಚಿರತೆಯ ಸುಳಿವು ಪತ್ತೆಯಾಗಿಲ್ಲ. ಅರಣ್ಯ ಇಲಾಖೆ ಕ್ಯಾಮರಾ ಮಾತ್ರವಲ್ಲದೆ, ಸಿಎಫ್‌ಟಿಆರ್‌ಐ ಆವರಣದಲ್ಲಿ ಅಳವಡಿಸಿರುವ ಎಲ್ಲಾ ಸಿಸಿ ಕ್ಯಾಮರಾ ದೃಶ್ಯಗಳ ಪರಿಶೀಲಿಸಿದರೂ ಯಾವುದೇ ಸುಳಿವಿಲ್ಲ. ಇದರಿಂದ ಚಿರತೆ ಇರುವ ಬಗ್ಗೆ ಅನುಮಾನ ವ್ಯಕ್ತವಾಗಿದೆ.

ಚಿರತೆ ಇರುವಿಕೆ ಬಗ್ಗೆ ಸಂದೇಹ: ಬುಧವಾರ ಸಂಜೆ ಸಿಎಫ್‌ಟಿಆರ್‌ಐ ಆವರಣದಲ್ಲಿ ಕಪ್ಪು ಚಿರತೆಗಳಿವೆ ಎಂದು ಸ್ಥಳೀಯರೊಬ್ಬರು ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲಿಸಿದ ಅರಣ್ಯ ಸಿಬ್ಬಂದಿಗೆ ಎರಡು ಪುನುಗು ಬೆಕ್ಕು ಕಂಡು ಬಂದಿವೆ. ಬಹುಶಃ ಈ ಬೆಕ್ಕುಗಳನ್ನೇ ಚಿರತೆ ಎಂದು ಭಾವಿಸಿ ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿರಲೂಬಹುದು ಎಂದು ಸಿಬ್ಬಂದಿ ಅಭಿಪ್ರಾಯಪಟ್ಟಿದ್ದಾರೆ.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳ ಆಕರ್ಷಕ ವಾಕಥಾನ್



ಮೈಸೂರು, ಜ.5(ಎಂಟಿವೈ)– ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ವತಿಯಿಂದ 'ಸುಸ್ಥಿತ ಗ್ರಹ ಕಲ್ಪನೆ ಮತ್ತು ಮಾದರಿ ಅಭಿವೃದ್ಧಿಗಾಗಿ' ವಿಷಯ ಕುರಿತು ಆಯೋಜಿಸಿದ್ದ ವಾಕಥಾನ್‌ನಲ್ಲಿ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು, ಗಮನ ಸೆಳೆದರು.

ವಿದ್ಯಾವರ್ಧಕ ಕಾಲೇಜಿನಲ್ಲಿ ಜ.4ರಿಂದ 8ರವರೆಗೆ ಸುಸ್ಥಿರ ಅಭಿವೃದ್ಧಿಗಾಗಿ ಎಂಜಿನಿಯರಿಂಗ್ ಶಿಕ್ಷಣದಲ್ಲಿ ಪರಿವರ್ತನೆಗಳು ವಿಷಯ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದ್ದು, ಅದರ ಅಂಗವಾಗಿ ಇಂದು ಬೆಳಗ್ಗೆ 7.30ಕ್ಕೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ 'ಸುಸ್ಥಿತ ಗ್ರಹ ಕಲ್ಪನೆ ಮತ್ತು ಮಾದರಿ ಅಭಿವೃದ್ಧಿಗಾಗಿ' ಶೀರ್ಷಿಕೆಯಲ್ಲಿ ಆರಂಭವಾದ ವಾಕಥಾನ್‌ನಲ್ಲಿ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಮೈಸೂರಿನ ವಿವಿಧ ರಸ್ತೆಗಳಲ್ಲಿ ಹಾದು, ಕೊನೆಗೆ ವಾಕಥಾನ್ ಕಾಲೇಜು ಮೈದಾನದಲ್ಲಿ ಅಂತ್ಯಗೊಂಡಿತು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಸದಾಶಿವೇಗೌಡ ಕಾಲೇಜಿನ ವಿವಿಧ ವಿಭಾಗದ ತಜ್ಞರಾದ ಡಾ. ವಿನುತಾ, ಡಾ. ಶೋಭಾ ಶಂಕರ್, ಡಾ. ಸುಚಿತ್ರ ಡಾ.ಅರುಣ್ ದೀಕ್ಷಿತ್, ಡಾ.ಟಿ.ಪಿ.ಸುರೇಖಾ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲೆಯಾದ್ಯಂತ ಜಾನುವಾರು ಜಾತ್ರೆ, ಸಂತೆ ನಿಷೇಧ

ಮೈಸೂರು,ಜ.5– ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನಲ್ಲಿ ಜಾನುವಾರುಗಳಲ್ಲಿ ಚರ್ಮಗಂಟು ರೋಗವು (Lumpy Skin Disease) ಕಾಣಿಸಿಕೊಂಡಿದ್ದು ರೋಗ ವ್ಯಾಪಕವಾಗಿ ಹರಡುವುದನ್ನು ತಡೆಗಟ್ಟಲು ತಾಲೂಕಿನಾದ್ಯಂತ ಲಸಿಕಾ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಕೆ.ಆರ್.ನಗರ ತಾಲೂಕಿನ ಚುಂಚನಕಟ್ಟೆ ಜಾತ್ರೆಯು ರಾಜ್ಯದ ಪ್ರತಿಷ್ಠಿತ ಹಾಗೂ ಪ್ರಸಿದ್ಧವಾದ ಜಾತ್ರೆಯಾಗಿದ್ದು, ಇಲ್ಲಿಗೆ ರಾಜ್ಯದ ವಿವಿಧ ಭಾಗಗಳಿಂದ ಜಾನುವಾರುಗಳನ್ನು ಮಾರುವವರು ಮತ್ತು ಕೊಳ್ಳುವವರು ಬರುವುದು ಪ್ರತೀತಿಯಾಗಿರುತ್ತದೆ. ಇದರಿಂದ ಜಾನುವಾರುಗಳಲ್ಲಿ ಚರ್ಮಗಂಟು ರೋಗ ಮತ್ತೊಮ್ಮೆ ತೀವ್ರವಾಗಿ ಕಾಣಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ಚುಂಚನಕಟ್ಟೆ ಜಾತ್ರೆಯಲ್ಲಿ ಜಾನುವಾರು ಜಾತ್ರೆಯನ್ನು ನಿರ್ಬಂಧಿಸುವುದು ಅಗತ್ಯವಾಗಿದೆ.

ಜಿಲ್ಲೆಯಲ್ಲಿ ಕೆ.ಆರ್.ನಗರ ಅಲ್ಲದೆ ಇತರೆ ತಾಲೂಕಿನಲ್ಲಿಯೂ ಸಹ ಅಲ್ಪ ಪ್ರಮಾಣದಲ್ಲಿ ಪ್ರತಿನಿತ್ಯ ಚರ್ಮಗಂಟು ರೋಗ ವರದಿಯಾಗುತ್ತಿರುವ ಕಾರಣ ಮೈಸೂರು ಜಿಲ್ಲೆಯ ರೈತರು ಮತ್ತು ಜಾನುವಾರು ಸಂಪತ್ತನ್ನು ರಕ್ಷಿಸುವ ಮತ್ತು ಚರ್ಮಗಂಟು ರೋಗವನ್ನು ಹತೋಟಿಗೆ ತರಲು ಜಾನುವಾರು ಜಾತ್ರೆ, ಸಂತೆಗಳನ್ನು ಸಂಪೂರ್ಣವಾಗಿ ನಿಷೇಧಿಸುವುದು ಅತ್ಯಗತ್ಯವೆಂದು ಪರಿಗಣಿಸಿ, ಮೈಸೂರು ಜಿಲ್ಲೆಯಲ್ಲಿ ಜಾನುವಾರುಗಳಲ್ಲಿ ಚರ್ಮಗಂಟು ರೋಗ ಮತ್ತಷ್ಟು ಹರಡುವುದನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಮೈಸೂರು ಜಿಲ್ಲೆಯಾದ್ಯಂತ ಕೆ.ಆರ್.ನಗರದ ಚುಂಚನಕಟ್ಟೆ ಜಾತ್ರೆ, ನಂಜನಗೂಡಿನ ಸುತ್ತೂರು ಜಾತ್ರೆ ಮತ್ತು ತಿ.ನರಸೀಪುರದ ಮುಡುಕುತೊರೆ ಜಾತ್ರೆಗಳಲ್ಲಿ ಜಾನುವಾರು ಜಾತ್ರೆ ಸಂತೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ಕೆವಿ. ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಗರ ಪಾಲಿಕೆ ಬಜೆಟ್‌ನಲ್ಲಿ ಸವಿತಾ ಸಮಾಜದವರಿಗೆ ಅನುಕೂಲವಾಗುವಂತೆ ಹೆಚ್ಚಿನ ಅನುದಾನ ಮೀಸಲಿಡಬೇಕೆಂದು ಸವಿತಾ ಸಮಾಜದ ಮುಖಂಡರು ಮೇಯರ್ ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ನಾದಬ್ರಹ್ಮ ಕಲಾ ಸಂಘದ ಅಧ್ಯಕ್ಷ ವಿದ್ವಾನ್ ಪುಟ್ಟರಾಜು, ನಯನ ಕ್ಷತ್ರಿಯ ರಾಮಮಂದಿರದ ಗಂಗಾಧರ್, ಗೋಪಿನಾಥ್, ಲೋಕೇಶ್, ನಾಗಪ್ಪ, ಸದಾನಂದ, ತೆಲುಗು ರೆಡ್ಡಿ ಸಂಘದ ರಾಜುರೆಡ್ಡಿ ಉಪಸ್ಥಿತರಿದ್ದರು.

ಕಸಾಯಿಖಾನೆಗೆ 21 ಜಾನುವಾರು ಸಾಗಾಣೆ

ಓರ್ವನ ಬಂಧನ; ಮೂವರ ವಿರುದ್ಧ ಕೇಸ್ ದಾಖಲು

ಮೈಸೂರು, ಜ.5–ಕಸಾಯಿಖಾನೆಗೆ ಸಾಗಾಟ ಮಾಡುತ್ತಿದ್ದ 21 ಜಾನುವಾರುಗಳನ್ನು ವಶಪಡಿಸಿಕೊಂಡಿರುವ ಉದಯಗಿರಿ ಠಾಣೆ ಪೊಲೀಸರು ಓರ್ವನನ್ನು ಬಂಧಿಸಿ, ಮೂವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಉದಯಗಿರಿ ಠಾಣೆ ಸಬ್ ಇನ್ಸ್‌ಪೆಕ್ಟರ್ ರೂಪೇಶ್, ತಮ್ಮ ಸಿಬ್ಬಂದಿಯೊಂದಿಗೆ ಜ.2ರಂದು ಮಧ್ಯಾಹ್ನ ಗಸ್ತು ತಿರುಗುತ್ತಿದ್ದಾಗ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಬರುತ್ತಿದ್ದ ಟಾಟಾ ಏಸ್ ಗೂಡ್ಸ್ ವಾಹನವನ್ನು (ಕೆಎ 54 ಜೆ 7373) ಅನುಮಾನದ ಮೇರೆಗೆ ನಿಲ್ಲಿಸಿದ್ದಾರೆ. ಪೊಲೀಸರನ್ನು ಕಂಡೊಡನೆ ಓರ್ವ ವಾಹನದಿಂದ ಇಳಿದು ಓಡಿ ಹೋಗಿದ್ದು, ಚಾಲಕ ಇಮ್ರಾನ್ ಎಂಬಾತನನ್ನು ವಶಕ್ಕೆ ಪಡೆದು ವಾಹನವನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ 21 ಜಾನುವಾರುಗಳು ಪತ್ತೆಯಾಗಿವೆ. ಚಾಲಕನನ್ನು ವಿಚಾರಣೆಗೊಳಪಡಿಸಿದ ವೇಳೆ ವಾಹನದಿಂದ ಓಡಿ ಹೋದವನು ತಂಜೀಮ್ ಎಂದು ತಿಳಿಸಿದ್ದು, ಇವರು ತಿ.ನರಸೀಪುರದಿಂದ ಜಾನುವಾರುಗಳನ್ನು ಖರೀದಿಸಿ ಗೌಸಿಯಾನಗರದ ಮಹಮ್ಮದ್ ಅಲಿ ಎಂಬಾತನಿಗೆ ನೀಡಲು ಹೋಗುತ್ತಿದ್ದರು. ಮಹಮ್ಮದ್ ಅಲಿ ಜಾನುವಾರುಗಳನ್ನು ಕತ್ತರಿಸಿ ಮಾಂಸ ಮಾಡುತ್ತಿದ್ದ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ. ಚಾಲಕ ಇಮ್ರಾನ್‌ನನ್ನು ಬಂಧಿಸಿರುವ ಪೊಲೀಸರು ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಹಿನ್ನೆಲೆ

ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್‌ಸಿಂಗ್ ಆರ್ಯರಿಗೆ ಅದ್ದೂರಿ ಸ್ವಾಗತ


ಬೃಹತ್ ಬೈಕ್ ರ್‍ಯಾಲಿ; ಪುರಭವನದ ಆವರಣದಲ್ಲಿ ಡಾ.ಅಂಬೇಡ್ಕರ್ ಪ್ರತಿಮೆಗೆ ಪುಷ್ಪನಮನ

ಮೈಸೂರು, ಜ.5(ಎಂಕೆ)– ಮೈಸೂರಿನ ಲಲಿತ ಮಹಲ್ ಹೋಟೆಲ್‌ನಲ್ಲಿ ಮೂರು ದಿನಗಳ ಕಾಲ ನಡೆಯುವ ಬಿಜೆಪಿ ಎಸ್‌ಸಿ ರಾಷ್ಟ್ರೀಯ ಮೋರ್ಚಾ ಕಾರ್ಯಕಾರಿಣಿ ಸಭೆ ಹಿನ್ನೆಲೆ ನಗರಕ್ಕೆ ಆಗಮಿಸಿದ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್‌ಸಿಂಗ್ ಆರ್ಯ ಅವರನ್ನು ಬೈಕ್ ರ್‍ಯಾಲಿ ಮೂಲಕ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಕೆ.ಆರ್.ವಿಧಾನಸಭಾ ಕ್ಷೇತ್ರದ ಬಿಜೆಪಿ ಎಸ್‌ಸಿ ಮೋರ್ಚಾ ಹಾಗೂ ಯುವಮೋರ್ಚಾ ವತಿಯಿಂದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಿಂದ ಪುರಭವನದವರೆಗೆ ಬೈಕ್ ರ್‍ಯಾಲಿ ನಡೆಸುವ ಮೂಲಕ ಸ್ವಾಗತಿಸಲಾಯಿತು. ನಂತರ ಪುರಭವನದ ಎದುರಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಲಾಯಿತು.

ಬಳಿಕ ಮಾತನಾಡಿದ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್‌ಸಿಂಗ್ ಆರ್ಯ, ತಾಯಿ ಚಾಮುಂಡೇಶ್ವರಿ ನೆಲೆಸಿರುವ ಮೈಸೂರಿನಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಆಯೋಜಿಸಲಾಗಿದೆ. ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸೇರಿದಂತೆ ಹಲವು ಬಿಜೆಪಿ ನಾಯಕರು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ಎಸ್‌ಸಿ ಸಮುದಾಯಕ್ಕೆ ಕೇಂದ್ರದ ನೀತಿ ಕುರಿತಂತೆ ಪ್ರಸ್ತಾವನೆ ಸಿದ್ಧಪಡಿಸಲಾಗುವುದು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಎಸ್‌ಸಿ ಸಮುದಾಯಕ್ಕೆ ನೀಡಿರುವ ಕೊಡುಗೆಗಳ ಕುರಿತು ಚರ್ಚಿಸಲಾಗುವುದು. ಈ ಮೂಲಕ ಎಸ್‌ಸಿ ಸಮುದಾಯವನ್ನು ಇನ್ನಷ್ಟು ಸಂಘಟಿಸಲಾಗುವುದು ಎಂದು ಹೇಳಿದರು.



ಸ್ಯಾಂಟ್ರೋ ರವಿ ಬಗ್ಗೆ ಗೊತ್ತಿಲ್ಲ...

ದಲಿತ ಮಹಿಳೆಯೊಬ್ಬರಿಗೆ ವಂಚಿಸಿರುವ ಸ್ಯಾಂಟ್ರೋ ರವಿ ಕುರಿತು ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ಸ್ಯಾಂಟ್ರೋ ರವಿ ಬಿಜೆಪಿ ಪಕ್ಷದವರ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಪ್ರಕರಣ ದಾಖಲಾಗಿರುವ ಕುರಿತು ಪ್ರಸ್ತಾಪಿಸುವುದಿಲ್ಲ. ಆದರೆ ಮಾಹಿತಿ ಪಡೆದು ಪಕ್ಷದ ಹಿರಿಯ ನಾಯಕರಿಗೆ ಮಾಹಿತಿ ನೀಡಲಾಗುವುದು. ತಪ್ಪು ಯಾರೇ ಮಾಡಿದ್ದರು ತಪ್ಪೇ. ಬಿಜೆಪಿ ಎಂದಿಗೂ ತಪ್ಪಿತಸ್ಥರನ್ನು ಸಹಿಸುವುದಿಲ್ಲ. ಯಾರೇ ಆಗಲಿ ಸೂಕ್ತ ಕ್ರಮತೆಗೆದುಕೊಳ್ಳುವುದು ಮುಖ್ಯ. ಮಾಜಿ ಸಿಎಂ ಕುಮಾರಸ್ವಾಮಿಯವರು ಮೊದಲಿನಿಂದಲೂ ಗಾಳಿಯಲ್ಲಿ ಗುಂಡು ಹೊಡೆದಂತೆ ಮಾತನಾಡುತ್ತಾರೆ. ಆದ್ದರಿಂದ ಅವರ ಮಾತನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ ಎಂದರು.

ರಾಜ್ಯದಲ್ಲಿ ಮಲ್ಲಿಕಾರ್ಜುನ ಖರ್ಗೆಯವರಿಗೆ, ಜಿ.ಪರಮೇಶ್ವರ್ ಅವರಿಗೆ ಅವಕಾಶವಿದ್ದರೂ ಮುಖ್ಯಮಂತ್ರಿ ಸ್ಥಾನ ನೀಡದೆ ಕಾಂಗ್ರೆಸ್ ದಲಿತ ಸಮುದಾಯವನ್ನು ವಂಚಿಸಿದೆ. ಇದೇ ರೀತಿ ದಲಿತ ನಾಯಕರನ್ನು ತುಳಿಯುವ ಕೆಲಸವನ್ನು ಕಾಂಗ್ರೆಸ್ ಮಾಡಿಕೊಂಡು ಬಂದಿದೆ. ಆದರೆ ಬಿಜೆಪಿ ದಲಿತ ಸಮುದಾಯಕ್ಕೆ ಸೇರಿದ ರಾಮನಾಥ ಕೋವಿಂದ್ ಅವರನ್ನು ರಾಷ್ಟ್ರಪತಿಯನ್ನಾಗಿ ಮಾಡಿ ಗೌರವಿಸಿದೆ ಎಂದು ಸ್ಮರಿಸಿದರು.

ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಮೈಸೂರು ಭಾಗದಲ್ಲಿ ದಲಿತ ಸಮುದಾಯ ಹೆಚ್ಚಿದ್ದು, ನೇರವಾಗಿ ಭೇಟಿ ಮಾಡಿ ರಾಜ್ಯ ಮತ್ತು ಕೇಂದ್ರ ಬಿಜೆಪಿ ಸರ್ಕಾರ ನೀಡುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಸಂಘಟಿಸಲಾಗುವುದು ಎಂದು ತಿಳಿಸಿದರು.

ನಗರದೆಲ್ಲೆಡೆ ಬಿಜೆಪಿ ಬಾವುಟಗಳ ಹಾರಾಟ...

ಮೂರು ದಿನಗಳ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಹಿನ್ನೆಲೆ ಮೈಸೂರು ನಗರದೆಲ್ಲೆಡೆ ಬಿಜೆಪಿ ಬಾವುಟಗಳು ರಾರಾಜಿಸುತ್ತಿವೆ. ಕೆ.ಆರ್.ವೃತ್ತ, ಆಯುರ್ವೇದಿಕ್ ವೃತ್ತ, ಹೈವೇ ಸರ್ಕಲ್, ದೊಡ್ಡಗಡಿಯಾರ, ಟೌನ್‌ಹಾಲ್ ಎದುರು ಸೇರಿದಂತೆ ನಗರದ ಪ್ರಮುಖ ವೃತ್ತಗಳು ಹಾಗೂ ರಸ್ತೆಗಳಲ್ಲಿ ಬಿಜೆಪಿ ಬಾವುಟಗಳು ರಾರಾಜಿಸುತ್ತಿವೆ. ಬಿಜೆಪಿ ಬಾವುಟಗಳಿಂದಾಗಿ ಸುಂದರ ಸಾಂಸ್ಕೃತಿಕ ನಗರಿ ಮೈಸೂರು ಸೌಂದರ್ಯ ಹಾಳಾಗಿದೆ ಎಂದು ಹಲವು ಪ್ರವಾಸಿಗರು ಬೇಸರ ವ್ಯಕ್ತಪಡಿಸಿದ್ದಾರೆ.

ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಂಜಯ್ ನಿರ್ಮಲ್, ಪ್ರಭಾರಿ ಸೋಗಲ ಕುಮಾರ್, ರಾಷ್ಟ್ರೀಯ ಉಪಾಧ್ಯಕ್ಷ ಅಶೋಕ್ ವಾಡೆ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಕೆಆರ್.ಮಂಡಲ ಉಪಾಧ್ಯಕ್ಷ ಸಂತೋಷ್ ಶಂಭು, ಯುವಮೋರ್ಚಾ ನಗರಾಧ್ಯಕ್ಷ ಎಂ.ಜೆಕಿರಣ್‌ಗೌಡ, ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ.ಮಹದೇವಯ್ಯ, ಎನ್.ಆರ್.ಕ್ಷೇತ್ರ ಪ್ರಧಾನ ಕಾರ್ಯದರ್ಶಿ ವಿನೋದ್ ಕುಮಾರ್, ಕೆ.ಆರ್.ಕ್ಷೇತ್ರ ಅಧ್ಯಕ್ಷ ಪುನೀತ್, ಯುವಮೋರ್ಚಾ ಕೆ.ಆರ್.ಕ್ಷೇತ್ರದ ಅಧ್ಯಕ್ಷ ಮನುಶೈವ, ಕಾರ್ಯಕಾರಿಣಿ ಸದಸ್ಯ ಹೇಮಂತ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕೊಡಗು ಜಿಪಂ ಕ್ಷೇತ್ರಗಳ ಪುನರ್‌ವಿಂಗಡನೆ ಅವೈಜ್ಞಾನಿಕ

• 25 ಕ್ಷೇತ್ರಗಳನ್ನಾಗಿ ಮಾಡಿ ಅನ್ಯಾಯ • ಜ.16ರಂದು ಕಾಂಗ್ರೆಸ್‌ನಿಂದ ಆಕ್ಷೇಪಣೆ ಸಲ್ಲಿಕೆ



ಮಡಿಕೇರಿ, ಜ.5– ಜನಸಂಖ್ಯೆಗೆ ವ್ಯತಿರಿಕ್ತವಾಗಿ ಕೊಡಗಿನ 29 ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳನ್ನು 25 ಕ್ಷೇತ್ರಗಳಿಗೆ ಮೊಟಕುಗೊಳಿಸುವ ಮೂಲಕ ಜಿಲ್ಲೆಗೆ ಅನ್ಯಾಯ ಮಾಡಲಾಗಿದೆ ಈ ಅವೈಜ್ಞಾನಿಕ ಜಿಪಂ ಕ್ಷೇತ್ರಗಳ ಪುನರ್ ವಿಂಗಡಣೆ ವಿರುದ್ಧ ಜ.16ರಂದು ಜಿಲ್ಲಾ ಕಾಂಗ್ರೆಸ್ ಆಕ್ಷೇಪಣೆ ಸಲ್ಲಿಸಲಿದೆ ಎಂದು ಕೆಪಿಸಿಸಿ ಪ್ರಮುಖರು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳನ್ನು 25ಕ್ಕೆ ಇಳಿಕೆ ಮಾಡಿರುವುದು ಮತ್ತು 50 ರಿಂದ 60 ಕಿಲೋ ಮೀಟರ್‌ಗೆ 1 ಜಿಲ್ಲಾ ಪಂಚಾಯ್ತಿ ಕ್ಷೇತ್ರವೆಂದು ಗಡಿರೇಖೆಯನ್ನು ವಿಚಿತ್ರ ರೀತಿಯಲ್ಲಿ ಗುರುತಿಸಲಾಗಿದೆ. ಇದರಿಂದಾಗಿ ಜಿಲ್ಲಾ ಪಂಚಾಯ್ತಿ ಸದಸ್ಯರ ಕಾರ್ಯನಿರ್ವಹಣೆಗೂ ತೊಡಕಾಗಲಿದೆ. ಕ್ಷೇತ್ರ ಕಡಿಮೆಯಾದಂತೆ ಜಿಲ್ಲೆಗೆ ಬರುವ ಅನುದಾನವೂ ಕಡಿಮೆಯಾಗಲಿದ್ದು, ಈ ವಿಚಾರದಲ್ಲಿ ಜಿಲ್ಲೆಯ ಶಾಸಕರುಗಳು ಹಾಗೂ ಸರ್ಕಾರ ತಕ್ಷಣ ಎಚ್ಚೆತ್ತುಕೊಳ್ಳಬೇಕೆಂದು ಧರ್ಮಜ ಉತ್ತಪ್ಪ ಒತ್ತಾಯಿಸಿದರು.

ಆರ್‌ಟಿಸಿ ಶುಲ್ಕವನ್ನು 15 ರೂಪಾಯಿಗಳಿಂದ 25 ರೂಪಾಯಿಗಳಿಗೆ ಹೆಚ್ಚಿಸಲಾಗಿದ್ದು, ಇದರಿಂದಾಗಿ ರೈತರಿಗೆ ಹೊರೆಯಾಗುತ್ತಿದೆ. ತಕ್ಷಣ ಆರ್‌ಟಿಸಿ ದರವನ್ನು 15 ರೂಪಾಯಿಗಳಿಗೆ ಇಳಿಸಬೇಕು. ಕಂದಾಯ ಇಲಾಖೆಗಳಲ್ಲಿ ಮಧ್ಯವರ್ತಿಗಳ ಹಾವಳಿ ಮಿತಿಮೀರಿದ್ದು, ಈ ಬಗ್ಗೆ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಜಿಲ್ಲಾ ಪಂಚಾಯ್ತಿ ಚುನಾವಣೆ ನಡೆದಲ್ಲಿ ಅದರ ಫಲಿತಾಂಶದ ಪರಿಣಾಮ ವಿಧಾನಸಭಾ ಚುನಾವಣೆಯ ಮೇಲೆ ಬೀರಲಿದೆ. ಬಿಜೆಪಿ ಸರ್ಕಾರಕ್ಕೆ ಇದೀಗ ಚುನಾವಣೆ ನಡೆದಲ್ಲಿ ಸೋಲುವ ಆತಂಕವಿದೆ. ಈ ಹಿನ್ನೆಲೆಯಲ್ಲಿ ಜಿಪಂ ಚುನಾವಣೆ ನಡೆಯಬಾರದು ಎನ್ನುವ ಉದ್ದೇಶದಿಂದಲೇ ಗೊಂದಲ ಸೃಷ್ಟಿಸಲು ಕ್ಷೇತ್ರಗಳ ಸಂಖ್ಯೆಯನ್ನು ಕಡಿತಗೊಳಿಸಿದೆ ಎಂದು ಟೀಕಿಸಿದರು. ಜಿಲ್ಲೆಗೆ ಇಷ್ಟೆಲ್ಲಾ ಅನ್ಯಾಯವಾಗುತ್ತಿದ್ದರೂ ಶಾಸಕರುಗಳು ಮೌನಕ್ಕೆ ಶರಣಾಗಿರುವುದು ಹಾಸ್ಯಾಸ್ಪದ ಎಂದು ಲೇವಡಿ ಮಾಡಿದ ಶಶಿಧರ್, ತಕ್ಷಣವೇ ಜಿ.ಪಂ ಕ್ಷೇತ್ರಗಳನ್ನು 30ರಿಂದ 32ಕ್ಕೆ ಏರಿಕೆ ಮಾಡಬೇಕೆಂದು ಒತ್ತಾಯಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ ಮಾತನಾಡಿ, 3 ವಿಧಾನ ಸಭಾ ಕ್ಷೇತ್ರಗಳು 2ಕ್ಕೆ ಸೀಮಿತವಾಗಿದೆ. ಇದೀಗ 4 ಜಿ.ಪಂ ಕ್ಷೇತ್ರಗಳನ್ನು ಕಳೆದುಕೊಳ್ಳಲಾಗಿದೆ. ಆದರೂ ಶಾಸಕರುಗಳು ಜಿಲ್ಲೆಯ ಬಗ್ಗೆ ಯಾವುದೇ ಆಸಕ್ತಿ ತೋರುತ್ತಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು. ಜಿಲ್ಲೆಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸದ್ಯಕ್ಕೆ ದೊರೆಯಲಾರದು ಎನ್ನುವುದು ಅಧಿವೇಶನದ ಸಂದರ್ಭ ಬಹಿರಂಗವಾಗಿದೆ. ಮಡಿಕೇರಿಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿಯೂ ಅಗತ್ಯ ಚಿಕಿತ್ಸಾ ಸೌಲಭ್ಯಗಳಿಲ್ಲ. ನುರಿತ ವೈದ್ಯರು, ಸಿ.ಟಿ ಸ್ಕ್ಯಾನ್, ಹೃದಯ ತಜ್ಞರು ಸೇರಿದಂತೆ ವೈದ್ಯರ ಕೊರತೆ ಕಾಡುತ್ತಿದೆ. ಹೀಗಿದ್ದರೂ ಶಾಸಕರು ಸಮಸ್ಯೆಗಳ ಪರಿಹಾರಕ್ಕೆ ಮುಂದಾಗುತ್ತಿಲ್ಲ ಎಂದು ಚಂದ್ರಕಲಾ ಟೀಕಿಸಿದರು. ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳ ಪುನರ್ ವಿಂಗಡಣೆ ವಿರುದ್ಧ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಬಾನಂಡ ಪ್ರಥ್ಯು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ, ಪ್ರಮುಖರಾದ ಅಪ್ರೋಜ್ ಉಪಸ್ಥಿತರಿದ್ದರು.

ನಾಳೆ ಚಿತ್ರಕಲಾ ಸ್ಪರ್ಧೆ ವಿಜೇತರಿಗೆ ಬಹುಮಾನ

ಮಡಿಕೇರಿ, ಜ.5– ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವದ ಅಂಗವಾಗಿ ಜ.7ರಂದು ಏರ್ಪಡಿಸಲಾಗಿರುವ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭ ಅಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ.

ಗೋಣಿಕೊಪ್ಪ ಕಾಲ್ಸ್ ವಿದ್ಯಾಸಂಸ್ಥೆ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಐಮಂಡ ಗೋಪಾಲ್ ಸೋಮಯ್ಯ ವಹಿಸಲಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ಟಿ.ಎನ್. ಮಂಜುನಾಥ್, ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಬಾಚರಣಿಯಂಡ ಅನು ಕಾರ್ಯಪ್ಪ, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ, ಎನ್.ಎನ್. ದಿನೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ತಹಸೀಲ್ದಾರ್ ಎನ್.ಎಸ್. ಪ್ರಶಾಂತ್, ಜಿಪಂ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ, ವಿರಾಜಪೇಟೆ ಲಿಟ್ಲ್ ಸ್ಕಾಲರ್ ಅಕಾಡೆಮಿ ಅಧ್ಯಕ್ಷೆ ಪೂಜಾ ರವೀಂದ್ರ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

ಸಮಯಪ್ರಜ್ಞೆ ಮೆರೆದ ಶಾಲಾ ಬಾಲಕ

45 ನಿಮಿಷ ಸೆಣಸಾಡಿ ನೀರಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಕರುವನ್ನು ರಕ್ಷಿಸಿದ ಸಾಹಸಿ

ಮಡಿಕೇರಿ, ಜ.5– ನೀರು ಕುಡಿಯಲು ಬಂದು ಆಕಸ್ಮಿಕವಾಗಿ ಕೆರೆಗೆ ಬಿದ್ದು ಸಾವು–ಬದುಕಿನ ಮಧ್ಯೆ ಹೋರಾಡುತ್ತಿದ್ದ ಹೋರಿ ಕರುವನ್ನು ಶಾಲಾ ಬಾಲಕನೋರ್ವ ಸಮಯಪ್ರಜ್ಞೆ ಮೆರೆದು ಶಕ್ತಿ ಹಾಗೂ ಯುಕ್ತಿಯಿಂದ ರಕ್ಷಿಸಿರುವ ಘಟನೆ ಸೋಮವಾರಪೇಟೆ ತಾಲೂಕಿನ ಕಿಬ್ಬೆಟ್ಟ ಗ್ರಾಮದಲ್ಲಿ ನಡೆದಿದೆ.



ಕಿಬ್ಬೆಟ್ಟ ಗ್ರಾಮದ 9ನೇ ತರಗತಿ ವಿದ್ಯಾರ್ಥಿ ಕೆ.ಎಂ.ರೋಹನ್ ಎಂಬಾತನೇ ಈ ಸಾಹಸವಂತ ಬಾಲಕ. ಈತ ಗುರುವಾರ ಎಂದಿನಂತೆ ಬೆಳಗ್ಗೆ ಸೋಮವಾರಪೇಟೆ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆಗೆ ತೆರಳುತ್ತಿದ್ದಾಗ ಕೆರೆಯಲ್ಲಿ ಹೋರಿ ಕರು ಮುಳುಗಿ ಒದ್ದಾಡುತ್ತಿರುವುದನ್ನು ಕಂಡಿದ್ದಾನೆ.

ತಕ್ಷಣ ಎಚ್ಚೆತ್ತುಕೊಂಡ ರೋಹನ್ ಕೊಕ್ಕೆ ಕೋಲೊಂದನ್ನು ಹುಡುಕಿ ತಂದು ಕೆರೆಯಲ್ಲಿ ಒದ್ದಾಡುತ್ತಿದ್ದ ಕರುವಿನ ಮೂಗುದಾರಕ್ಕೆ ಸಿಕ್ಕಿಸಿ, ಸುಮಾರು 25 ಮೀಟರ್ ದೂರಕ್ಕೆ ಎಳೆದು ತಂದಿದ್ದಾನೆ. ಕೆರೆಗೆ ಮೆಟ್ಟಿಲು ಅಥವಾ ಬೇರೆ ಯಾವುದೇ ಮಾರ್ಗವಿಲ್ಲದ ಕಾರಣ ದಿಬ್ಬದ ಬಳಿಯೇ ನಿಂತು ಶಕ್ತಿಮೀರಿ ಕರುವನ್ನು ಎಳೆದಿದ್ದಾನೆ. ಸುಮಾರು 45 ನಿಮಿಷದ ಕಾರ್ಯಾಚರಣೆಯ ನಂತರ ಕರು ಕಷ್ಟಪಟ್ಟು ಕೆರೆಯಿಂದ ಮೇಲೆ ಬಂದು ಜೀವ ಉಳಿಸಿಕೊಂಡಿದೆ. ಇದು ಅಪಾಯಕಾರಿ ಕೆರೆಯಾಗಿದ್ದು, ಈ ಹಿಂದೆಯೂ ಹಸುಗಳು ಮೃತಪಟ್ಟಿವೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಬಾಲಕನ ಸಾಹಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿರುವ ಗ್ರಾಮಸ್ಥರು ಈತನಿಗೆ ಶೌರ್ಯ ಪ್ರಶಸ್ತಿ ನೀಡಬೇಕೆಂದು ಆಗ್ರಹಿಸಿದ್ದಾರೆ. ಕಿಬ್ಬೆಟ್ಟ ಗ್ರಾಮದ ನಿವಾಸಿ ಪಿ.ಸಿ.ಮುದ್ದ ಹಾಗೂ ಲಕ್ಷ್ಮಿ ದಂಪತಿಯ ಪುತ್ರನಾಗಿರುವ ರೋಹನ್ 9ನೇ ತರಗತಿ ವಿದ್ಯಾರ್ಥಿಯಾಗಿದ್ದಾನೆ.

ಕಾಂಗ್ರೆಸ್ ತೊರೆಯಲಿದ್ದಾರೆಯೇ ಕದ್ದಣಿಯಂಡ ಹರೀಶ್ ಬೋಪಣ್ಣ

ವಿರಾಜಪೇಟೆ, ಜ.5– ಕೊಡಗು ಜಿಲ್ಲೆಯ ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ನಾಯಕರಲ್ಲಿ ಹೊಂದಾಣಿಕೆಯ ಕೊರತೆ ಎದ್ದು ಕಾಣುತ್ತಿದ್ದು, ಒಬ್ಬೊಬ್ಬರು ಒಂದೊಂದು ಕಡೆಗೆ ಮುಖ ಮಾಡಿದ್ದಾರೆ. ಇದರಿಂದ ಬೇಸತ್ತಿರುವ ಕಾಂಗ್ರೆಸ್ ಮುಖಂಡ ಕದ್ದಣಿಯಂಡ ಹರೀಶ್ ಬೋಪಣ್ಣ ಕಾಂಗ್ರೆಸ್ ತೊರೆಯುವ ಬಗ್ಗೆ ನಿರ್ಧಾರ ಕೈಗೊಳ್ಳಲು ಮುಂದಾಗಿದ್ದಾರೆ.



ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ, ಹೈಕೋರ್ಟ್ ಹಿರಿಯ ವಕೀಲ, ಕಾಂಗ್ರೆಸ್ ಪಕ್ಷದ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣ ಹಾಗೂ ಕದ್ದಣಿಯಂಡ ಹರೀಶ್ ಬೋಪಣ್ಣ ಅವರುಗಳು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ವಿರಾಜಪೇಟೆ ಕ್ಷೇತ್ರದ ಆಕಾಂಕ್ಷಿ ಗಳಾಗಿದ್ದು, ಇವರುಗಳಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಕ್ಷೇತ್ರದಲ್ಲಿ ಈಗಾಗಲೇ ರಾಜಕೀಯ ಚಟುವಟಿಕೆಗಳು ಪ್ರಾರಂಭಗೊಂಡಿದ್ದು, ಯಾರಿಗೆ ಅದೃಷ್ಟ ಒಲಿಯುವುದೋ ಕಾದು ನೋಡಬೇಕಾಗಿದೆ. ಟಿಕೆಟಿಗಾಗಿ ಪೈಪೋಟಿ ನಡೆಸಿರುವ ಈ ಮೂವರು ನಾಯಕರು ಒಂದೇ ಪಕ್ಷದವರಾದರೂ ಕೂಡ ಒಂದೇ ವೇದಿಕೆಯಲ್ಲಿ ಎಂದೂ ಕಾಣಿಸಿಕೊಂಡಿಲ್ಲ. ಇದು ಪಕ್ಷದ ಸಂಘಟನೆ ಮೇಲೂ ಪ್ರಭಾವ ಬೀರುವ ಸಾಧ್ಯತೆಗಳಿವೆ.

ಈ ಹಿಂದೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅಂದಿನ ಉಸ್ತುವಾರಿ ಸಚಿವರ ಜೊತೆ ಮಾತನಾಡಿ ನಾನು ಕೊಡಗಿಗೆ ನೂರಾರು ಕೋಟಿ ರೂ. ಅನುದಾನ ತರಲು ಶ್ರಮವಹಿಸಿದ್ದೆ. ಜೊತೆಗೆ ಮಲೆನಾಡು ಅಭಿವೃದ್ಧಿ ನಿಗಮದ ಅನುದಾನದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಸ್ಥಾಪನೆ ಸೇರಿದಂತೆ ಕೊಡಗಿನ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಕಾಂಗ್ರೆಸ್ ಪಕ್ಷದ ಏಳಿಗೆಗಾಗಿ ದುಡಿದಿದ್ದೇನೆ ಎಂದು ತಿಳಿಸಿದ ಹರೀಶ್ ಬೋಪಣ್ಣ ಇದೀಗ ನನ್ನನ್ನೂ ಕಡೆಗಣಿಸಲಾಗುತ್ತಿದೆ. ಇದು ನನ್ನಲ್ಲಿ ಬೇಸರವನ್ನುಂಟು ಮಾಡಿದೆ. ಆದ್ದರಿಂದ ಪಕ್ಷವನ್ನು ತೊರೆಯುವ ಬಗ್ಗೆ ನಿರ್ಧಾರ ಕೈಗೊಳ್ಳುವೆ ಎಂದರು.

ಕೊಡ್ಲಿಪೇಟೆಗೆ ಮತದಾರರ ಪಟ್ಟಿ ವೀಕ್ಷಕರ ಭೇಟಿ, ಪರಿಶೀಲನೆ




ಮಡಿಕೇರಿ, ಜ.5– ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಮತದಾರರ ಪಟ್ಟಿ ವೀಕ್ಷಕರಾದ ವಿ.ಅನ್ಬುಕುಮಾರ್ ಅವರು ಸೋಮವಾರಪೇಟೆ ತಾಲೂಕಿನ ಕೊಡ್ಲಿಪೇಟೆ ಹೋಬಳಿಯ ಮತಗಟ್ಟೆ (ಸಂಖ್ಯೆ 29, 30, 31) ಗಳಿಗೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದರು.

ಹಾಗೆಯೇ ಈ ಮತಗಟ್ಟೆಗಳ ಬಿಎಲ್‌ಒ ಅವರಿಂದ ಒಟ್ಟು ಮತದಾರರ ವಿವರ, ಹೊಸದಾಗಿ ಯುವ ಮತದಾರರ ಸೇರ್ಪಡೆ, ನಮೂನೆ 7 ರಂತೆ ತೆಗೆದಿರುವ ಮತದಾರರ ಸಂಖ್ಯೆ ಮತ್ತು ಯಾವ ಕಾರಣಕ್ಕೆ ತೆಗೆದಿರುವುದು ಹಾಗೂ ಸ್ಥಳಾಂತರ ಮತ್ತಿತರ ಬಗ್ಗೆ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ನರಗುಂದ, ಕಂದಾಯ ಪರಿವೀಕ್ಷಕರು, ಗ್ರಾಮ ಆಡಳಿತ ಅಧಿಕಾರಿ ಬಿಎಲ್‌ಒಗಳು ಇತರರು ಹಾಜರಿದ್ದರು.

ಇಂದು ಕೊಡಗಿಗೆ ಸಮಾಜ ಕಲ್ಯಾಣ ಸಚಿವರ ಆಗಮನ

ಮಡಿಕೇರಿ, ಜ.5– ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ ಅವರು ಜ.6 ರಂದು ಕೊಡಗು ಜಿಲ್ಲಾ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.



ಸಚಿವರು ಶುಕ್ರವಾರ ಬೆಳಗ್ಗೆ 8 ಗಂಟೆಗೆ ಕುಶಾಲನಗರ ಬಳಿಯ ಕೂಡಿಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿನಿಯರ 'ಓಬವ್ವ ಆತ್ಮ ರಕ್ಷಣೆ ಕಲೆ' ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಮಧ್ಯಾಹ್ನ 12.30 ಗಂಟೆಗೆ ಬೈಚನಹಳ್ಳಿಯ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಉದಯ ಕುಮಾರ್ ಶೆಟ್ಟಿ ಅವರು ತಿಳಿಸಿದ್ದಾರೆ.

ಸಂತಾನಹರಣ ಶಸ್ತ್ರಚಿಕಿತ್ಸಾ ಶಿಬಿರ

ಮಡಿಕೇರಿ, ಜ.5– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ 2023ರ ಜನವರಿ ತಿಂಗಳಲ್ಲಿ ಮಹಿಳಾ ಸಂತಾನಹರಣ ಶಸ್ತ್ರಚಿಕಿತ್ಸಾ ಶಿಬಿರ ನಡೆಯಲಿದೆ.

ಜ.13 ರಂದು ಪಾಲಿಬೆಟ್ಟ, ಸಿದ್ದಾಪುರ, ಜ.19 ರಂದು ಗೋಣಿಕೊಪ್ಪ, ಜ.20 ರಂದು ನಾಪೋಕ್ಲು, ಜ.24 ರಂದು ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮತ್ತು ಜ.17 ರಂದು ಸೋ.ಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಲ್ಯಾಪ್ರೋಸ್ಕೋಪಿಕ್ ಚಿಕಿತ್ಸೆ ನಡೆಯಲಿದೆ. ಜ.18 ರಂದು ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮತ್ತು ಜ.11 ರಂದು ಚೆಟ್ಟಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಟ್ಯುಬೆಕ್ಟಮಿ ಚಿಕಿತ್ಸೆ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಆರ್.ವೆಂಕಟೇಶ್ ಅವರು ತಿಳಿಸಿದ್ದಾರೆ.

ಹೆಬ್ಬಾಲೆಯಲ್ಲಿ ಹೆದ್ದಾರಿ ಪಕ್ಕದ ಮನೆಗೆ ಖನ್ನ

ಚಿನ್ನಾಭರಣ, ನಗದು ದೋಚಿ ಪರಾರಿ

ಕುಶಾಲನಗರ, ಜ.5– ತಾಲೂಕಿನ ಹೆಬ್ಬಾಲೆ ಗ್ರಾಮದಲ್ಲಿ ಬುಧವಾರ ರಾತ್ರಿ ಕರೆಂಟ್ ಇಲ್ಲದ ಸಮಯದಲ್ಲಿ ಮನೆಯೊಂದಕ್ಕೆ ನುಗ್ಗಿದ ಕಳ್ಳರು ಕ್ಷಣಾರ್ಧದಲ್ಲಿ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿರುವ ಘಟನೆ ನಡೆದಿದೆ.

ಹಾಸನ–ಮಡಿಕೇರಿ ರಾಜ್ಯ ಹೆದ್ದಾರಿಯ ಪಕ್ಕದ ನಾರಾಯಣ ಎಂಬುವರ ಮನೆಯಲ್ಲಿ ಈ ಕಳ್ಳತನ ನಡೆದಿದ್ದು, ಮನೆಯಲ್ಲಿದ್ದ 7.5 ಲಕ್ಷ ರೂ. ಬೆಲೆಬಾಳುವ ಚಿನ್ನಾಭರಣ, ಮತ್ತು ಬೀರುವಿನಲ್ಲಿದ್ದ 13 ಸಾವಿರ ರೂ. ಕಳ್ಳತನ ಮಾಡಿದ್ದಾರೆ.

ಮನೆಯ ಮಾಲೀಕ ನಾರಾಯಣ ಮನೆಯ ಮುಂಭಾಗದಲ್ಲಿರುವ ತಮ್ಮ ಅಂಗಡಿಯಲ್ಲಿ ವ್ಯಾಪಾರದಲ್ಲಿ ನಿರತರಾಗಿದ್ದ ಸಂದರ್ಭ ವಿದ್ಯುತ್ ಕಡಿತಗೊಂಡಿದೆ. ಈ ಸುಸಂದರ್ಭವನ್ನು ಬಳಸಿಕೊಂಡ ಕಳ್ಳರು ಸಂಜೆ 7 ಗಂಟೆಯ ಸಮಯದಲ್ಲಿ ಮನೆಗೆ ನುಗ್ಗಿ ಮಾಲೀಕನಿಗೆ ಯಾವುದೇ ಶಬ್ದ ಕೇಳದ ರೀತಿಯಲ್ಲಿ ಕ್ಷಣಾರ್ಧದಲ್ಲಿ ಕಳ್ಳತನ ಮಾಡಿ ಆಭರಣ ಹಾಗೂ ನಗದು ದೋಚಿ ಪರಾರಿಯಾಗಿದ್ದಾರೆ.ವಿದ್ಯುತ್ ಬಂದ ನಂತರ ಮನೆಯ ಒಳಗೆ ಬಂದ ಮಾಲೀಕ ನಾರಾಯಣ ಅವರಿಗೆ ರೂಮ್‌ನಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಬಟ್ಟೆ ಹಾಗೂ ಬೀರು ತೆರೆದಿದ್ದನ್ನು ಕಂಡು ಕಳ್ಳತನ ನಡೆದಿರುವುದು ಖಚಿತವಾಗಿದೆ.

ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಘಟನೆ ನಡೆದ ಸ್ಥಳಕ್ಕೆ ಕುಶಾಲನಗರ ಡಿವೈಎಸ್‌ಪಿ, ಗಂಗಾಧರಪ್ಪ, ವೃತ್ತ ನಿರೀಕ್ಷಕ ಮಹೇಶ್, ಗ್ರಾಮಾಂತರ ಠಾಣಾಧಿಕಾರಿ ಚಂದ್ರಶೇಖರ್ ಸೇರಿದಂತೆ ಶ್ವಾನದಳ ಮತ್ತು ಬೆರಳಚ್ಚು ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಆರೋಪಿಗಳನ್ನು ಪತ್ತೆ ಹಚ್ಚಲು ಈಗಾಗಲೇ ಪೊಲೀಸರ ನಾಲ್ಕು ತಂಡಗಳ ರಚನೆ ಮಾಡಿ ಪತ್ತೆ ಕಾರ್ಯದಲ್ಲಿ ತೊಡಗಿದ್ದಾರೆ.

ಅಂತಿಮ ಮತದಾರರ ಪಟ್ಟಿ ಪ್ರಕಟ

ಜಿಲ್ಲೆಯಲ್ಲಿ 8,42,496 ಮತದಾರರು

ಚಾಮರಾಜನಗರ, ಜ.5– ಭಾವಚಿತ್ರವಿರುವ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಸಂಬಂಧ ಗುರುವಾರ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಜಿಲ್ಲೆಯಲ್ಲಿ 842496 ಮತದಾರರಿದ್ದಾರೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ದಿನಾಂಕ: 01.01.2023 ಕ್ಕೆ ಅರ್ಹತಾ ದಿನಾಂಕ ನಿಗದಿಪಡಿಸಿ ಭಾವಚಿತ್ರವಿರುವ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಸಂಬಂಧ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 982 ಮತಗಟ್ಟೆಗಳಿವೆ. ಕರಡು ಮತದಾರರ ಪಟ್ಟಿಯಲ್ಲಿ 834872 ಮತದಾರರಿದ್ದರು. ಹೆಚ್ಚುವರಿ ಮತದಾರರ ಸಂಖ್ಯೆ 7624 ಇದ್ದು ಅಂತಿಮ ಮತದಾರರ ಪಟ್ಟಿಯಲ್ಲಿ 842496 ಮತದಾರರಿದ್ದಾರೆ ಎಂದರು.

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತಗಟ್ಟೆಗಳ ಪುನರ್ ವಿಂಗಡಣೆ ಪೂರ್ವದಲ್ಲಿ 247 ಮತಗಟ್ಟೆಗಳಿದ್ದವು. ಪುನರ್ ವಿಂಗಡಣೆ ನಂತರ 253 ಮತಗಟ್ಟೆಗಳಿವೆ. ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತಗಟ್ಟೆಗಳ ಪುನರ್ ವಿಂಗಡಣೆ ಪೂರ್ವದಲ್ಲಿ 243 ಮತಗಟ್ಟೆಗಳಿದ್ದವು. ಪುನರ್ ವಿಂಗಡಣೆ ನಂತರ 241 ಮತಗಟ್ಟೆಗಳಿವೆ. ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತಗಟ್ಟೆಗಳ ಪುನರ್ ವಿಂಗಡಣೆ ಪೂರ್ವದಲ್ಲಿ 239 ಮತಗಟ್ಟೆಗಳಿದ್ದವು. ಪುನರ್ ವಿಂಗಡಣೆ ನಂತರ 239 ಮತಗಟ್ಟೆಗಳಿವೆ. ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮತಗಟ್ಟೆಗಳ ಪುನರ್ ವಿಂಗಡಣೆ ಪೂರ್ವದಲ್ಲಿ 251 ಮತಗಟ್ಟೆಗಳಿದ್ದವು. ಪುನರ್ ವಿಂಗಡಣೆ ನಂತರ 249 ಮತಗಟ್ಟೆಗಳಿವೆ ಎಂದು ವಿವರಿಸಿದರು.

ಜಿಲ್ಲೆಯಲ್ಲಿ 982 ಮತಗಟ್ಟೆಗಳಿವೆ: ಹೆಚ್ಚುವರಿ ಡಿಸಿ ಕಾತ್ಯಾಯಿನಿದೇವಿ



ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕರಡು ಮತದಾರರ ಪಟ್ಟಿಯಲ್ಲಿ 212091 ಮತದಾರರಿದ್ದಾರೆ. 2506 ಹೆಚ್ಚುವರಿ ಮತದಾರರ ಸಂಖ್ಯೆಯಿದ್ದು, ಅಂತಿಮ ಮತದಾರರ ಪಟ್ಟಿಯಲ್ಲಿ 214597 ಮತದಾರರಿದ್ದಾರೆ. ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕರಡು ಮತದಾರರ ಪಟ್ಟಿಯಲ್ಲಿ 211134 ಮತದಾರರಿದ್ದರು. 947 ಹೆಚ್ಚುವರಿ ಮತದಾರರ ಸಂಖ್ಯೆ ಸೇರಿ, ಅಂತಿಮ ಮತದಾರರ ಪಟ್ಟಿಯಲ್ಲಿ 212081 ಮತದಾರರಿದ್ದಾರೆ. ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕರಡು ಮತದಾರರ ಪಟ್ಟಿಯಲ್ಲಿ 203507 ಮತದಾರರಿದ್ದು, 1869 ಹೆಚ್ಚುವರಿ ಮತದಾರರ ಸಂಖ್ಯೆ ಸೇರಿ, ಅಂತಿಮ ಮತದಾರರ ಪಟ್ಟಿಯಲ್ಲಿ 205376 ಮತದಾರರಿದ್ದಾರೆ. ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕರಡು ಮತದಾರರ ಪಟ್ಟಿಯಲ್ಲಿ 208140 ಮತದಾರರಿದ್ದು, 2302 ಹೆಚ್ಚುವರಿ ಮತದಾರರ ಸಂಖ್ಯೆಯಿದ್ದು, ಅಂತಿಮ ಮತದಾರರ ಪಟ್ಟಿಯಲ್ಲಿ 210442 ಮತದಾರರಿದ್ದಾರೆ.

ಮತದಾರರ ಪಟ್ಟಿಯಲ್ಲಿ ಕೈಬಿಟ್ಟುಹೋಗಿರುವ ಮತದಾರರು ಮತ್ತು 18 ವರ್ಷ ಹಾಗೂ ಮೇಲ್ಪಟ್ಟ ಯುವ ಮತದಾರರ ಹೆಸರುಗಳನ್ನು ನಿರಂತರ ಪರಿಷ್ಕರಣೆ ಅವಧಿಯಲ್ಲಿ ಅರ್ಜಿ ಪಡೆದು, ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಚುನಾವಣಾ ವಿಷಯಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ಟೋಲ್‌ಫ್ರಿ ಸಂಖ್ಯೆ 1950 ಅನ್ನು ಹಾಗೂ ಉಪ ವಿಭಾಗಾಧಿಕಾರಿಗಳ ಕಚೇರಿ ಮತ್ತು ಆಯಾ ತಾಲೂಕು ತಹಶೀಲ್ದಾರ್ ಕಚೇರಿಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ ಅವರು ತಿಳಿಸಿದರು.

ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ; ಪ್ರತಿಭಟನೆ



ಯಳಂದೂರು, ಜ.5– ಯಳಂದೂರಿನಲ್ಲಿರುವ ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ಲಂಚದ ಹಾವಳಿ ಹೆಚ್ಚಾಗಿದ್ದು, ಅಧಿಕಾರಿ ವರ್ಗ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ, ಸಾರ್ವಜನಿಕ ಸೇವೆಗಳಲ್ಲಿ ವಿನಾಕಾರಣ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಾಷ್ಟ್ರ ಸಮಿತಿ(ಕೆಆರ್‌ಎಸ್) ಪಕ್ಷದ ವತಿಯಿಂದ ಗುರುವಾರ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಯಿತು.

ಪಟ್ಟಣದ ನಾಡಮೇಗಲಮ್ಮ ದೇಗುಲದಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು ಇಲಾಖೆ ಹಾಗೂ ಭ್ರಷ್ಟ ಅಧಿಕಾರಿಗಳ ವಿರುದ್ಧ ದಿಕ್ಕಾರಗಳನ್ನು ಕೂಗಿ ತಹಶೀಲ್ದಾರ್ ಕಚೇರಿಯ ಮುಂಭಾಗ ಜಮಾವಣೆಗೊಂಡರು.

ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಸಿ.ಎಲ್. ಶ್ರೀನಿವಾಸ ಮಾತನಾಡಿ, ಇಲ್ಲಿನ ಸರ್ಕಾರಿ ಕಚೇರಿಯ ನೌಕರರು ತಮ್ಮ ಗುರುತಿನ ಚೀಟಿಗಳನ್ನು ಧರಿಸುವುದಿಲ್ಲ. ಇಲಾಖೆಯ ಮುಂಭಾಗ ಸೇವೆಗಳ ಪಟ್ಟಿಯನ್ನು ಪ್ರದರ್ಶಿಸಿಲ್ಲ, ಸಕಾಲ ಪಟ್ಟಿಯನ್ನು ಪ್ರದರ್ಶಿಸಿಲ್ಲ, ಭ್ರಷ್ಟಾಚಾರ ನಿಗ್ರಹದಳ ಮತ್ತು ಲೋಕಾಯುಕ್ತರ ಸಂಪರ್ಕ ಮಾಹಿತಿ ಫಲಕ ಹಾಕಿಲ್ಲ,ವಿವಿಧ ಇಲಾಖೆಗಳ ಕೊಠಡಿಗಳ ನಾಮಫಲಕ ಪ್ರದರ್ಶಿಸಿಲ್ಲ, ಇಲಾಖೆಗಳಲ್ಲಿ ಅಧಿಕಾರಿಗಳ ಪದನಾಮಗಳ ಬಗ್ಗೆ ಮಾಹಿತಿ ಇಟ್ಟಿಲ್ಲ, ಸೇವಾಶುಲ್ಕಗಳ ಪಟ್ಟಿ ಪ್ರದರ್ಶಿಸಿಲ್ಲ ಎಂದು ಆಪಾದಿಸಿದರು.

ಸಿಸಿ ಟಿವಿ ಸರಿಯಾಗಿ ಕೆಲ ಮಾಡುತ್ತಿಲ್ಲ, ಕೆಲ ಇಲಾಖೆಗಳಲ್ಲಿ ಇದು ಇರುವುದೇ ಇಲ್ಲ, ಮಾಹಿತಿ ಹಕ್ಕು ಸಂಪರ್ಕಾಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರದ ಮಾಹಿತಿ ಇಲ್ಲ, ಕಿಯೋಸ್ಕ್ ಸೌಲಭ್ಯ ಇದ್ದರೂ ಇದಕ್ಕೆ ವಿದ್ಯುತ್, ಇಂಟರ್ನೆಟ್ ಸಂಪರ್ಕ ಇಲ್ಲ ಮಿನಿ ವಿಧಾನಸೌಧ ದುರಸ್ತಿ ಕಾಮಗಾರಿಯಲ್ಲಿ ಮೋಸ ನಡೆದಿದ್ದು, ಕಳಪೆ ಕಾಮಗಾರಿ ಮಾಡಲಾಗುತ್ತಿದೆ. ಸರ್ಕಾರಿ ನೌಕರರು ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗುವುದಿಲ್ಲ. ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಬೇಕೆಂತಲೇ ವಿಳಂಬ ಮಾಡುತ್ತಿದ್ದಾರೆ ಎಂದು ಆಪಾದಿಸಿದರು. ಪಕ್ಷದ ಕಾರ್ಯದರ್ಶಿ ಶ್ರೀನಿವಾಸ್ ಬೂದಬಾಳು, ಪ್ರಭುಸ್ವಾಮಿ, ರಾಮು, ಶಂಕರ, ಮರಿಸ್ವಾಮಿ ಸೇರಿದಂತೆ ಇತರರು ಹಾಜರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜ.5– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜ.7 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಪಣ್ಯದಹುಂಡಿ ವ್ಯಾಪ್ತಿಯ ಬದನಗುಪ್ಪೆ, ಪಣ್ಯದಹುಂಡಿ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್‌ಜೆವೈ, ಇಂಡಸ್ಟ್ರಿಯಲ್ ಏರಿಯಾ, ಕೆಇಡಿಪಿ 10 ಮತ್ತು 11, ಮುತ್ತಿಗೆ, ಹೆಗ್ಗೋಠಾರ ಹಾಗೂ ಬದನಗುಪ್ಪೆ ವ್ಯಾಪ್ತಿಯ ಕೆಐಎಡಿಬಿ ಇಂಡಸ್ಟ್ರೀಯಲ್ ಏರಿಯಾ ಮರಿಯಾಲ, ಬೇಡರಪುರ, ಕೆಲ್ಲಂಬಳ್ಳಿ, ಬಸವನಪುರ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಜ.9, ಚಾ.ನಗರ ಅಭಿವೃದ್ಧಿಗೆ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ, ಜ.5 – ಚಾಮರಾಜನಗರ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ಜ.9 ರಂದು ನಗರದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸುವುದಾಗಿ ಕನ್ನಡ ಚಳವಳಿ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ತಿಳಿಸಿದ್ದಾರೆ.

ನಗರದ ರಾಮಸಮುದ್ರ ಬಡಾವಣೆಗೆ ಭೇಟಿ ನೀಡಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಹಿಂದುಳಿದ ಗಡಿಪ್ರದೇಶವಾದ ಚಾಮರಾಜನಗರ ಜಿಲ್ಲೆಯನ್ನು ರಾಜ್ಯ ಸರ್ಕಾರ ಸಂಪೂರ್ಣವಾಗಿ ಕಡೆಗಣಿಸಿದ್ದು, ಆಯವ್ಯಯದಲ್ಲಿ ನಯಾಪೈಸೆ ಮೀಸಲಿಟ್ಟಿಲ್ಲ. ಜಿಲ್ಲೆಗೆ ಅನ್ಯಾಯವಾಗಿದೆ. ರಾಜ್ಯ ಸರ್ಕಾರಕ್ಕೆ ಚಾಮರಾಜನಗರ ಇದೆಯೇ ಎಂಬುವುದೇ ಗೊತ್ತಿಲ್ಲ ಎಂದರು. ಚಾಮರಾಜನಗರಕ್ಕೆ ತನ್ನದೆ ಆದ ಇತಿಹಾಸವಿದ್ದು, ಪ್ರವಾಸಿತಾಣವಾಗಿದೆ. ಅಪಾರ ಅರಣ್ಯ ಸಂಪತ್ತನ್ನು ಹೊಂದಿದೆ. ನನ್ನ ಹೋರಾಟದ ಶ್ರಮದಿಂದ ಜಿಲ್ಲೆಯಾಯ್ತು. ಇಲ್ಲಿಗೆ ಕಾವೇರಿ ನೀರು ತಂದಿದ್ದು , ಜೋಡಿರಸ್ತೆ ಮಾಡಿಸಿದ್ದು, ಹಳ್ಳಿಗಳಿಗೆ ಸಾವಿರಾರು ನಿವೇಶನ, ವಿಧವಾವೇತನ, ವೃದ್ಧಾಪ್ಯ ವೇತನ ಸೇರಿದಂತೆ ಹತ್ತು ಹಲವು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಇನ್ನೂ ಚಾಮರಾಜನಗರದಲ್ಲಿ ಕಾವೇರಿ ನೀರು 2 ಹಂತದ ಯೋಜನೆ ಜಾರಿ ಸೇರಿದಂತೆ ಜಿಲ್ಲೆಯಲ್ಲಿ ಆಗಬೇಕಾದ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಬೇಕು ಅದಕ್ಕಾಗಿ ಜ.9 ರಂದು ನಗರದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ಈ ಸಂದರ್ಭದಲ್ಲಿ ರೇವಣ್ಣಸ್ವಾಮಿ, ಕುಮಾರ್, ಗೋಪಾಲನಾಯಕ, ಶಿವಲಿಂಗಮೂರ್ತಿ, ಸಂಜು, ಸಂಜಯ್ ಇತರರು ಹಾಜರಿದ್ದರು



ಬೇಗೂರು ಗ್ರಾಮ ಪಂಚಾಯಿತಿ ವತಿಯಿಂದ ಗ್ರಾಮದ ಕಸ ವಿಲೇವಾರಿಗೆ ನೀಡಲಾದ ನೂತನ ಸ್ವಚ್ಛ ವಾಹಿನಿ ವಾಹನಕ್ಕೆ ಗ್ರಾಪಂ. ಅಧ್ಯಕ್ಷೆ ಇಂದಿರಾ ಸುರೇಶ್ ಹಸಿರು ಬಾವುಟ ತೋರಿಸುವ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಗ್ರಾಪಂ ಉಪಾಧ್ಯಕ್ಷ ಕೆ. ಮಹದೇವಶೆಟ್ಟಿ, ಪಿಡಿಒ ಗುರುಪ್ರಸಾದ್, ಗ್ರಾಪಂ ಮಾಜಿ ಅಧ್ಯಕ್ಷ ರಾಜಶೆಟ್ಟಿ ಮತ್ತಿತ್ತರರಿದ್ದರು.

ವಿದ್ಯುತ್ ಸ್ಪರ್ಶ: 20 ಎಕರೆ ಕಬ್ಬು ಬೆಂಕಿಗಾಹುತಿ



ಯಳಂದೂರು, ಜ.5– ಶಾರ್ಟ್ ಸರ್ಕ್ಯೂಟ್‌ನಿಂದ 20ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಕಬ್ಬಿನ ಫಸಲು ಬೆಂಕಿಗಾಹುತಿಯಾಗಿರುವ ಘಟನೆ ಪಟ್ಟಣದಲ್ಲಿ ಸಂಭವಿಸಿದೆ.

ಯಳಂದೂರು ಪಟ್ಟಣದ ರೈತರಾದ ನಾಗರಾಜು, ನಾಗೇಂದ್ರ ರಂಗಪ್ಪ ಲೋಕೇಶ, ರಾಮಮೂರ್ತಿ ಸೇರಿದಂತೆ ಇತರ ರೈತರ ಫಸಲು ಸುಟ್ಟುಹೋಗಿದ್ದು, ಲಕ್ಷಾಂತರ ರೂ. ನಷ್ಟವಾಗಿದೆ. ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆ ಅಂಚಿನಲ್ಲಿ 20 ಎಕರೆಗೆ ಹೆಚ್ಚು ಪ್ರದೇಶಗಳಲ್ಲಿ ಬೆಳೆದಿದ್ದ ಕಬ್ಬು ಸಂಪೂರ್ಣ ನಷ್ಟವಾಗಿವೆ. ಇದರಿಂದ ರೈತರು ಆತಂಕಗೊಂಡಿದ್ದಾರೆ. ಕಬ್ಬಿನ ಗದ್ದೆ ಮೇಲೆ ಹಾದು ಹೋಗಿರುವ ವಿದ್ಯುತ್ ತಂತಿಗಳು ಜೋತು ಬಿದ್ದಿದ್ದು, ಅದನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಿದರೂ ಕ್ರಮ ವಹಿಸದ ಕಾರಣ ರೈತರ ಫಸಲು ಬೆಂಕಿಗೆ ಆಹುತಿಯಾಗಲು ಕಾರಣವಾಗಿದೆ ಎಂದು ರೈತ ನಾಗರಾಜ್ ಆರೋಪಿಸಿದರು. ಬೆಳೆದಿದ್ದ ಕಬ್ಬು ಕಟಾವಿಗೆ ಬಂದಿದ್ದು ಸುಮಾರು ಒಂದು 30 ಲಕ್ಷ ಎಷ್ಟು ನಷ್ಟವಾಗಿದೆ ಎಂದು ರೈತ ಸೊಸೈಟಿ ನಂಜಯ್ಯ ತಿಳಿಸಿದ್ದಾರೆ.

ಬೆಂಕಿ ನಂದಿಸಲು ಹರಸಾಹಸ: ಬೆಂಕಿಯ ಕೆನ್ನಾಲಿಗೆ ಕಬ್ಬಿನ ಫಸಲು ಧಗಧಗನೆ ಉರಿಯುತ್ತಿದ್ದರೆ ಅಗ್ನಿಶಾಮಕ ದಳದ ಸಿಬ್ಬಂದಿಗಳು ರೈತರ ಫಸಲು ಉಳಿಸಲು ತಮ್ಮ ಜೀವದ ಹಂಗನ್ನು ತೊರೆದು ಬೆಂಕಿ ನಂದಿಸಲು ಹೋರಾಡುತ್ತಿದ್ದರು. ಅಗ್ನಿಶಾಮಕ ಸಿಬ್ಬಂದಿಯ ಜೊತೆಯಲ್ಲಿ ಆಸುಪಾಸಿನ ಗದ್ದೆ ಹೊಲ ಜಮೀನಿನಲ್ಲಿ ಕೆಲಸ ಮಾಡು ತ್ತಿದ್ದ ರೈತರು ಕಬ್ಬಿನ ಗದ್ದೆ ಒಳಗೆ ನುಗ್ಗಿ ಕಬ್ಬನ್ನು ಮುರಿದು ನಂದಿಸುವಲ್ಲಿ ಯಶಸ್ವಿಯಾದರು. ವರ್ಷಪೂರ್ತಿ ಹಗಲು ರಾತ್ರಿ ಎನ್ನದೆ ವ್ಯವಸಾಯ ಮಾಡಿ ಬೆಳೆದಿದ್ದ ಕಬ್ಬು ಕ್ಷಣಾರ್ಧದಲ್ಲಿ ಸುಟ್ಟು ಹೋದದ್ದನ್ನು ನೋಡಿ ರೈತ ಕಬ್ಬಿನ ಮೇಲೆ ಬಿದ್ದು ಒದ್ದಾಡುತ್ತಿದ್ದ ದೃಶ್ಯ ಮನ ಕಲಕುವಂತಿತ್ತು.

ಶಾರ್ಟ್ ಸರ್ಕ್ಯೂಟ್; ಹೊಲಿಗೆಯಂತ್ರ, ಹೊಸಬಟ್ಟೆಗಳು ಭಸ್ಮ

ಚಾಮರಾಜನಗರ ಜ.5– ನಗರದ ಸಂತೇಮರಹಳ್ಳಿ ವೃತ್ತದಲ್ಲಿರುವ ಟೈಲರಿಂಗ್ ಅಂಗಡಿಯಲ್ಲಿ ಸಂಭವಿಸಿದ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿಬಿದ್ದು ಹೊಲಿಗೆ ಯಂತ್ರ ಹಾಗೂ ಹೊಸಬಟ್ಟೆಗಳು ಬೆಂಕಿ ಗಾಹುತಿಯಾಗಿವೆ. ಸಯ್ಯದ್‌ಜಾವೀದ್ ಎಂಬವರಿಗೆ ಸೇರಿದ ಅಂಗಡಿ ಇದಾಗಿದ್ದು, ಈ ಅವಘಡದಿಂದ ಸುಮಾರು 3ಲಕ್ಷ ರೂ.ಗಳು ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಸ್ಥಳಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಪರಿಶೀಲಿಸುವ ಮೂಲಕ ಅಂಗಡಿ ಮಾಲೀಕರಿಗೆ ವೈಯಕ್ತಿಕ ಪರಿಹಾರ ವಿತರಿಸಿ ದರು. ಈ ಸಂದರ್ಭದಲ್ಲಿ ನಗರಸಭೆ ಆಯುಕ್ತ ಎಸ್.ವಿ. ರಾಮದಾಸ್, ಕಂದಾಯಾಧಿಕಾರಿ ಶರವಣ ಹಾಜರಿದ್ದರು.

ಇಂದಿನಿಂದ ಚಿಕ್ಕಲೂರು ಜಾತ್ರೆ

ಪ್ರಾಣಿ ಬಲಿ ನೀಡದಂತೆ ಮನವಿ

ಚಾಮರಾಜನಗರ, ಜ.5– ಶುಕ್ರವಾರದಿಂದ (ಜ.6) ಜ.10ರವರೆಗೆ ನಡೆಯಲಿರುವ ಚಿಕ್ಕಲೂರು ಜಾತ್ರೆಯಲ್ಲಿ ಪ್ರಾಣಿಗಳನ್ನು ಬಲಿ ಕೊಡದೆ ಸಾತ್ವಿಕ ರೀತಿಯಲ್ಲಿ ಭಕ್ತರು ಸಿದ್ದಪ್ಪಾಜಿ ಅವರಿಗೆ ಪೂಜೆ ಸಲ್ಲಿಸಬೇಕು ಎಂದು ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ ಅಧ್ಯಕ್ಷ ದಯಾನಂದ ಸ್ವಾಮೀಜಿ ಮನವಿ ಮಾಡಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಜಾತ್ರೆಯಲ್ಲಿ ಹರಕೆಯ ರೂಪದಲ್ಲಿ ಆಡು, ಕುರಿ, ಕೋಳಿಗಳನ್ನು ಬಲಿ, ಹತ್ಯೆ, ರಕ್ತ ತರ್ಪಣ ಬಿಡುವುದು, ಮಾಂಸ ನೈವೇದ್ಯ ಮಾಡುವಂತಹ ಆಚರಣೆಗಳಿವೆ. ಇವು ಜೀವ ಹಿಂಸಾತ್ಮಕ ಆಚರಣೆಗಳಾಗಿದ್ದು, ಇವನ್ನು ದೇವಾಲಯದ ಆವರಣ, ಹೊಲಗದ್ದೆ, ಬಿಡಾರಗಳಲ್ಲಿ ಮಾಡಬಾರದು. ಇವುಗಳ ಬದಲಾಗಿ, ತೆಂಗಿನಕಾಯಿ, ಬಾಳೆಹಣ್ಣು ಧೂಪ ದೀಪ ಮುಂತಾದವುಗಳಿಂದ ಸಾತ್ವಿಕ ಪೂಜೆ ಸಲ್ಲಿಸಬೇಕು ಎಂದು ತಿಳಿಸಿದರು.

ದೇವರಿಗೆ ಸಸ್ಯಾಹಾರಿ ಮತ್ತು ಸಿಹಿಯಾದ ನೈವೇದ್ಯ ಮಾಡಿ ಪ್ರಸಾದವನ್ನು ಭಕ್ತರು ಸ್ವೀಕರಿಸಬೇಕು ಎಂದು ಹೇಳಿದರು. ಪ್ರಾಣಿ ಬಲಿಯು ಅವೈಜ್ಞಾನಿಕ. ಮೌಢ್ಯದ ಪರಮಾವಧಿ. ಇದು ದೇವರು ಮತ್ತು ಧರ್ಮ ವಿರೋಧಿ. 1959ರ ಕರ್ನಾಟಕ ಪ್ರಾಣಿಬಲಿ ಪ್ರತಿಬಂಧಕ ಕಾಯ್ದೆ ಹಾಗೂ ಹೈಕೋರ್ಟ್‌ನ ಆದೇಶ ಪ್ರಕಾರ, ಪ್ರಾಣಿ ಬಲಿ ಶಿಕ್ಷಾರ್ಹ ಅಪರಾಧ. ಅಲ್ಲದೇ ಇದು ಘೋರ ಪಾಪ ಕೃತ್ಯ. ಇದರಿಂದ ಸಾಂಕ್ರಾಮಿಕ ರೋಗ ರುಜಿನಗಳೂ ಹರಡಬಹುದು. ಹಾಗಾಗಿ, ಭಕ್ತರು ಪ್ರಾಣಿ ಬಲಿ ನೀಡಬಾರದು ಎಂದು ಹೇಳಿದರು.

ದೇವಸ್ಥಾನಗಳಲ್ಲಿ ಭಕ್ತಿ ಇರಲಿ. ರಕ್ತ ಬೇಡ. ದೇವಾಲಯಗಳು ವಧಾಲಾಯಗಳಾಗದೆ, ದಿವ್ಯಾಲಯಗಳು ಆಗಬೇಕು. ಜಾತ್ರೆ ನಡೆಯುವ ಪರಿಸರಗಳು ದಯೆ, ಕರುಣೆ ಹಾಗೂ ಮಾನವೀಯತೆ ಸಂದೇಶ ಸಾರುವ ಕೇಂದ್ರಗಳಾಬೇಕು ಎಂದರು.

ಪ್ರಾಣಿ ವಧೆ ತಡೆದು, ಜನರಲ್ಲಿ ಜಾಗೃತಿ ಮೂಡಿಸಲು ಜ.6ರಂದು ಬೆಳಗ್ಗೆ 10ಗಂಟೆ ಜಿಲ್ಲಾಡಳಿತ ಭವನದಿಂದ ಅಹಿಂಸಾ– ಪ್ರಾಣಿ ದಯಾ ಆಧ್ಯಾತ್ಮ ಸಂದೇಶ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯಾತ್ರೆಯೂ ಜ.17ರವರೆಗೆ ಜಿಲ್ಲಾದ್ಯಂತ ಸಂಚರಿಸಲಿದೆ ಎಂದು ತಿಳಿಸಿದರು.

ಮೈಸೂರು ಮಿತ್ರ

ಸಿದ್ದರಾಮಯ್ಯರ ಸೋಲು ಈಗ ಚಾಮುಂಡೇಶ್ವರಿ ಕ್ಷೇತ್ರದ ಮತದಾರರಲ್ಲಿ ನೋವುಂಟು ಮಾಡಿದೆ

ಜ.20ಕ್ಕೆ ಲಿಂಗದೇವರ ಕೊಪ್ಪಲು ಮೈದಾನದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಭಾರೀ ಸಮಾವೇಶ



ಮೈಸೂರು, ಜ.5–ಲಿಂಗದೇವರಕೊಪ್ಪಲು ದೊಡ್ಡ ಮೈದಾನದಲ್ಲಿ ಜ.20ರಂದು ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರ ಬೃಹತ್ ಸಮಾವೇಶ ಏರ್ಪಡಿಸಲಾಗಿದ್ದು, ಈ ಸಮಾವೇಶದಲ್ಲಿ ಸಿದ್ದರಾಮಯ್ಯನವರ ಶಕ್ತಿ ಪ್ರದರ್ಶನವಾಗಬೇಕಾಗಿದೆ ಎಂದು ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷರೂ ಆದ ಕೆಪಿಸಿಸಿ ಸದಸ್ಯ ಕೆ.ಮರೀಗೌಡ ಹೇಳಿದರು.

ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ಹಾಗೂ ಜ.8ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಎಸ್ಸಿ, ಎಸ್ಟಿ ಸಮಾವೇಶದ ಅಂಗವಾಗಿ ಚಾಮುಂಡಿಬೆಟ್ಟ, ಆಲನಹಳ್ಳಿ, ಹೊಸಹುಂಡಿ, ಕಡಕೊಳ, ಸಿಂಧುವಳ್ಳಿ ಗ್ರಾಪಂಗಳ ವ್ಯಾಪ್ತಿಯ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಲಿಂಗದೇವರಕೊಪ್ಪಲಿನಲ್ಲಿ ನಡೆಯಲಿರುವ ಸಮಾವೇಶದಲ್ಲಿ ಜೆಡಿಎಸ್ ಮುಖಂಡರಾದ ಮಾವಿನಹಳ್ಳಿ ಸಿದ್ದೇಗೌಡ, ಜಲಿಹುಂಡಿ ಬಸವಣ್ಣ, ಮಾದೇಗೌಡ, ಕೆಂಪನಾಯಕ ಸೇರಿದಂತೆ ಹಲವಾರು ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಿದರು. 2018ರಲ್ಲಿ ಸಿದ್ದರಾಮಯ್ಯನವರು ಅನೇಕ ಷಡ್ಯಂತ್ರಗಳಿಂದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲನನುಭವಿಸಿದ್ದು, ಇದರಿಂದ ಕ್ಷೇತ್ರದ ಮತದಾರರು ಅತ್ಯಂತ ನೋವು ಅನುಭವಿಸಿದ್ದಾರೆ ಎಂದ ಅವರು, ಹಾಲಿ ಶಾಸಕರ ಅವಧಿಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ನಡೆದಿಲ್ಲ. ಹೀಗಾಗಿ 2023ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರ ಪರ ಕ್ಷೇತ್ರ ಮತದಾರರು ಇದ್ದಾರೆ ಎಂಬ ಸಂದೇಶವನ್ನು ರವಾನಿಸಬೇಕಾಗುತ್ತದೆ. ಸಿದ್ದರಾಮಯ್ಯನವರ ಆಶೀರ್ವಾದ ಪಡೆದ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಬೇಕಾಗಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಗುರುಸ್ವಾಮಿ, ಸತೀಶ್ ಕುಮಾರ್, ಚಾಮುಂಡೇಶ್ವರಿ ಕ್ಷೇತ್ರದ ಎಲ್ಲಾ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು, ಮುಂಚೂಣಿ ಘಟಕದ ಅಧ್ಯಕ್ಷರುಗಳು, ಕಾರ್ಯಕರ್ತರು ಭಾಗವಹಿಸಿದ್ದರು.

2024ರ ಜ.1ರಂದು ಅಯೋಧ್ಯೆಯಲ್ಲಿ ರಾಮಮಂದಿರ ರೆಡಿ



ಪುರಾ, ಜ.5– 2024ರ ಜನವರಿ 1ರಂದು ಅಯೋಧ್ಯೆಯ ರಾಮಮಂದಿರ ಭಕ್ತರ ದರ್ಶನಕ್ಕೆ ಮುಕ್ತವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗುರುವಾರ ಘೋಷಿಸಿದ್ದಾರೆ. ಇಂದು ದಕ್ಷಿಣ ತ್ರಿಪುರಾದಲ್ಲಿ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಅಮಿತ್ ಶಾ, "ಕಾಂಗ್ರೆಸ್ ರಾಮ ಮಂದಿರ ನಿರ್ಮಾಣಕ್ಕೆ ಅಡ್ಡಿಪಡಿಸಿತು. ಆದರೆ ಸುಪ್ರೀಂ ಕೋರ್ಟ್ ತೀರ್ಪು ಬಂದ ನಂತರ, ಮೋದಿಜಿ ಮಂದಿರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದರು. ಪ್ರಧಾನಿ ಮೋದಿ ಅವರು 'ಭೂಮಿ ಪೂಜೆ' ನೆರವೇರಿಸಿದರು ಮತ್ತು ದೇವಸ್ಥಾನದ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುತ್ತಿದ್ದಾರೆ ಎಂದರು.

ಮೂರನೇ ಪುಟದಿಂದ

ಫೆಬ್ರವರಿ ಅಂತ್ಯದಲ್ಲಿ ಸಂಚಾರಕ್ಕೆ ಮುಕ್ತ

ಪ್ರಯಾಣದ ಅವಧಿ ಕಡಿಮೆಯಾಗಿರುವುದರಿಂದ ಮೈಸೂರಿನಲ್ಲಿ ಹೂಡಿಕೆಗೆ ಪ್ರೇರಣೆಯಾದಂತಾಗುತ್ತದೆಯಲ್ಲದೆ, ಐಟಿ–ಬಿಟಿ ಕಂಪನಿಗಳ ಸ್ಥಾಪನೆಗೆ ಅನುಕೂಲವಾಗಲಿದೆ. ರಿಯಲ್ ಎಸ್ಟೇಟ್ ಉದ್ಯಮ, ಶಿಕ್ಷಣ ಸಂಸ್ಥೆಗಳು ಹೊಸ ಕೋರ್ಸ್ ಆರಂಭಿಸಿ ವಿಸ್ತರಿಸಲು ಸಹಕಾರಿಯಾಗಲಿದೆ. ಹೆದ್ದಾರಿ ನಿರ್ಮಾಣದಲ್ಲಿ ಪರಿಣಿತಿ ಹೊಂದಿದ ಸಂಸ್ಥೆಯಿಂದ ವಿನ್ಯಾಸ ಮಾಡಿಸಿ ಅದರನ್ವಯ ಗುಣಮಟ್ಟದ ಕಾಮಗಾರಿ ಪೂರ್ಣಗೊಳಿಸಲಾಗಿದೆ, ಇದರಿಂದ ಪ್ರಯಾಣದ ಅವಧಿ ಕಡಿತ ಮಾತ್ರವಲ್ಲ ಇಂಧನ ಉಳಿತಾಯವೂ ಆಗಲಿದ್ದು, ಎರಡೂ ಬದಿಯಲ್ಲಿ ಉದ್ದಿಮೆಗಳು, ಗುಡಿಗಾರಿಕೆ ಉತ್ಪನ್ನಗಳ ಮಾರಾಟ, ಟೌನ್‌ಶಿಪ್‌ಗಳು ತಲೆ ಎತ್ತಲಿದ್ದು, ಉದ್ಯೋಗ ಸೃಷ್ಟಿಯಾಗಲಿದೆ ಎಂದು ಅವರು ಇದೇ ಸಂದರ್ಭ ನುಡಿದರು. ಕುಂಬಳಗೋಡು, ಬಿಡದಿ, ಗೆಜ್ಜಲಗೆರೆ ಹಾಗೂ ತೂಬಿನಕೆರೆ ಇಂಡಸ್ಟ್ರಿಯಲ್ ಟೌನ್‌ಶಿಪ್‌ಗಳಿಗೆ ಸಂಪರ್ಕ ಕಲ್ಪಿಸುವುದರಿಂದ ಅಲ್ಲಿನ ಕೈಗಾರಿಕೋದ್ಯಮಕ್ಕೆ ಪೂರಕ ಸೌಲಭ್ಯ, ಸಾರ್ವಜನಿಕ ಸಾರಿಗೆ, ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ನಿತಿನ್ ಗಡ್ಕರಿ ತಿಳಿಸಿದರು.

ಬೆಂಗಳೂರು–ಕಡಪ–ವಿಜಯವಾಡ: ಕೇಂದ್ರ ಸರ್ಕಾರವು ಬೆಂಗಳೂರು–ಕಡಪ–ವಿಜಯವಾಡ ನಡುವೆ 342 ಕಿಮೀ ಹಸಿರು ವಲಯವುಳ್ಳ ಸುವಿಶಾಲ ಹೆದ್ದಾರಿ ಕಾರಿಡಾರ್ ಯೋಜನೆಯನ್ನು 13,600 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು, ಇದರಿಂದ ಕರ್ನಾಟಕ ಮತ್ತು ಆಂಧ್ರಪ್ರದೇಶದ ಪ್ರಮುಖ ನಗರಗಳಿಗೆ ಸಂಪರ್ಕ ಕಲ್ಪಿಸಿದಂತಾಗುತ್ತದೆಯಲ್ಲದೆ 75 ಕಿಮೀ ಅಂತರ ಕಡಿತಗೊಂಡು, 5 ಗಂಟೆ ಪ್ರಯಾಣದ ಅವಧಿಯೂ ಕಡಿಮೆಯಾಗಲಿದೆ ಎಂದರು.

ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ: 16,730 ಕೋಟಿ ರೂ. ವೆಚ್ಚದಲ್ಲಿ 8 ಪಥದ 262 ಕಿಮೀ ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಕಾಮಗಾರಿ ಭರದಿಂದ ಸಾಗಿದ್ದು, 5 ಗಂಟೆ ಪ್ರಯಾಣದ ಅವಧಿಯು ಎರಡೂವರೆ ಗಂಟೆಗೆ ಕಡಿತವಾಗಲಿದೆ. 2024ರ ಡಿಸೆಂಬರ್‌ನಲ್ಲಿ ಯೋಜನೆ ಪೂರ್ಣಗೊಳ್ಳಲಿದೆ ಎಂದು ಸಚಿವರು ತಿಳಿಸಿದರು.

ಅದೇ ರೀತಿ ಮುಂಬೈ–ಕನ್ಯಾಕುಮಾರಿ, ಪುಣೆ–ಬೆಂಗಳೂರು ನ್ಯೂ ಗ್ರೀನ್ ಫೀಲ್ಡ್, ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್ ರೋಡ್, ಸೊಲ್ಲಾಪುರ–ಕರ್ನೂಲ್–ಚೆನ್ನೈ ಎಕನಾಮಿಕ್ ಕಾರಿಡಾರ್ ಸೇರಿದಂತೆ ಕೇಂದ್ರ ಸರ್ಕಾರ ದೇಶಾದ್ಯಂತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಕ 4.5 ಲಕ್ಷ ಕೋಟಿ ರೂ. ವೆಚ್ಚದಲ್ಲಿ 27 ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್ ವೇ ಮತ್ತು ಅಕ್ಸೆಸ್ ಕಂಟ್ರೋಲ್ಡ್ ಕಾರಿಡಾರ್ (ಒಟ್ಟು 10,000 ಕಿಮೀ)ಗಳ ನಿರ್ಮಾಣ ಮಾಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು. ಸಚಿವರಾದ ಕೆ. ಗೋಪಾಲಯ್ಯ, ಡಾ.ಸಿ.ಎನ್.ಅಶ್ವಥ್‌ನಾರಾಯಣ, ಮಾಜಿ ಸಚಿವ ಸಿ.ಪಿ. ಯೋಗೇಶ್ವರ್, ಸಂಸದರಾದ ಪ್ರತಾಪ್ ಸಿಂಹ, ಡಿ.ಕೆ. ಸುರೇಶ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಯಾವುದೇ ಹೆಸರಿಡುವ ಪರಿಪಾಠವಿಲ್ಲ

ಜಾರಿಗೊಳಿಸಬೇಕು, ಈಗಲೂ ಈ ಬಗ್ಗೆ ಪರಿಶೀಲಿಸಿ ರೈತರಿಗೆ ಅನುಕೂಲವಾಗುವಂತೆ ಅಗತ್ಯಕ್ರಮ ವಹಿಸುತ್ತೇವೆ ಎಂದರು. ಮೈಸೂರು–ಬೆಂಗಳೂರು ಹೆದ್ದಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದ ಕಾರಣ, ಯೋಜನೆ ವೆಚ್ಚ ಹೆಚ್ಚಾಗಿದೆ. ಸಾರ್ವಜನಿಕರ ತೆರಿಗೆ ಹಣ ದುಂದುವೆಚ್ಚದಂತಾಗಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ನಿತಿನ್ ಗಡ್ಕರಿ, ಪ್ರಕೃತಿ ವಿಕೋಪ, ಕೆಲ ಕಾನೂನು ತೊಡಕುಗಳು ಹಾಗೂ ಭೂಸ್ವಾಧೀನ ಪ್ರಕ್ರಿಯೆ ವೆಚ್ಚ ಅಧಿಕವಾಗಿದೆ ಎಂದರು. ಇಷ್ಟೊಂದು ಸೌಲಭ್ಯಗಳೊಂದಿಗೆ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗಿದೆ. ಪ್ರಯಾಣ ಸಮಯ, ಇಂಧನ ಉಳಿತಾಯ, ರಸ್ತೆ ಸುರಕ್ಷತೆ ಇರುವಾಗ ಟೋಲ್ ಶುಲ್ಕ ಪಾವತಿಸುವುದು ದೊಡ್ಡ ವಿಷಯವೇನಲ್ಲ ಎಂದು ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಹೆದ್ದಾರಿ ನಡುವೆ ರೈತರು ಬೆಳೆದ ಹತ್ತಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಕಾಟನ್ ಇಂಡಸ್ಟ್ರಿ ಮಾಡುವ ಪ್ರಸ್ತಾಪಕ್ಕೆ ಉತ್ತರಿಸಿದ ಅವರು, ಈ ಯೋಜನೆಯಿಂದಾಗಿ ಎರಡೂ ಕಡೆ ಸ್ಥಳೀಯ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಅದರಲ್ಲಿ ಗುಡಿಗಾರಿಕೆ, ಕರಕುಶಲ ವಸ್ತುಗಳು, ಕೃಷಿ ಉತ್ಪನ್ನಗಳಿಗೂ ಆದ್ಯತೆ ನೀಡಲಾಗುವುದು ಎಂದರು.

ಹೆಲಿಕಾಪ್ಟರ್ ಲ್ಯಾಂಡಿಂಗ್ ರಾಜ್ಯದ ಹೆಗ್ಗಳಿಕೆ

ಸಮೀಕ್ಷೆ ನಡೆಸಿದರು. ಮಧ್ಯಾಹ್ನ 1.45 ಗಂಟೆಗೆ ಗಡ್ಕರಿ ಅವ ರಿದ್ದ ಹೆಲಿಕಾಪ್ಟರ್, ರಾಮನಗರ ಸಮೀಪ ಜೀಗೇನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ ನಡುವೆ ವ್ಯವಸ್ಥೆ ಮಾಡಿದ್ದ ತಾತ್ಕಾಲಿಕ ಹೆಲಿಪ್ಯಾಡ್‌ನಲ್ಲಿ ಬಂದಿಳಿಯಿತು. ಆ ವೇಳೆ ಈ ಮಾರ್ಗದ ವಾಹನ ಸಂಚಾರವನ್ನು ಬಂದ್ ಮಾಡಿ, ಎರಡೂ ಬದಿಯ ಸರ್ವಿಸ್ ರೋಡ್‌ನಲ್ಲಿ ಬದಲಿ ಮಾರ್ಗ ಕಲ್ಪಿಸಲಾಗಿತ್ತು. ನಿತಿನ್ ಗಡ್ಕರಿಯವರಿದ್ದ ಹೆಲಿಕಾಪ್ಟರ್ ರಾಷ್ಟ್ರೀಯ ಹೆದ್ದಾರಿ ಮಧ್ಯೆ ಲ್ಯಾಂಡ್ ಆಗುವುದರೊಂದಿಗೆ ಕರ್ನಾಟಕದ ಇತಿಹಾಸದಲ್ಲೇ ಮೊದಲ ಬಾರಿ ಹೆದ್ದಾರಿಯಲ್ಲಿ ಹೆಲಿಕಾಪ್ಟರ್ ಇಳಿದ ದಾಖಲೆಯಾಯಿತು. ರಸ್ತೆಯಲ್ಲಿ ಹೆಲಿಕಾಪ್ಟರ್ ಭೂ ಸ್ಪರ್ಶ ಮಾಡುವುದನ್ನು ನೋಡಲು ಸುತ್ತಲಿನ ಗ್ರಾಮಸ್ಥರು ನೆರೆದಿದ್ದರಲ್ಲದೆ, ಆ ಮಾರ್ಗ ಸಂಚರಿಸುತ್ತಿದ್ದ ವಾಹನ ಚಾಲಕರು, ಪ್ರಯಾಣಿಕರೂ ಸಹ ಹೆದ್ದಾರಿಯಲ್ಲಿ ಹೆಲಿಕಾಪ್ಟರ್ ಇಳಿಯುತ್ತಿದ್ದುದ್ದನ್ನು ಕಂಡು ನಿಬ್ಬೆರಗಾದರು.

ಈ ವೇಳೆ ಮತ್ತೊಂದು ಪೈಲಟ್ ಹೆಲಿಕಾಪ್ಟರ್ ಸಹ ಬಂದು ಲ್ಯಾಂಡ್ ಆಗಿ, ಸುದ್ದಿಗೋಷ್ಠಿ ಮುಗಿದ ಬಳಿಕ ಎರಡೂ ಹೆಲಿಕಾಪ್ಟರ್‌ಗಳು ಮಧ್ಯಾಹ್ನ 2.45 ಗಂಟೆ ವೇಳೆಗೆ ಅಲ್ಲಿಂದ ಟೇಕ್ ಆಫ್ ಆದವು. ಮೊದಲು ನಿತಿನ್ ಗಡ್ಕರಿ ಅವರು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹರೊಂದಿಗೆ ಬೆಂಗಳೂರು–ಚೆನ್ನೈ ರಾಷ್ಟ್ರೀಯ ಹೆದ್ದಾರಿಯ ವೈಮಾನಿಕ ಸಮೀಕ್ಷೆ ನಡೆಸಿದ ನಂತರ, ಮೈಸೂರು–ಬೆಂಗಳೂರು ದಶ ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಪ್ರಗತಿಯನ್ನು ವೀಕ್ಷಿಸಿದರು. ನಂತರ ಜೀಗೇನಹಳ್ಳಿಯಲ್ಲಿ ಹೆಲಿಕಾಪ್ಟರ್‌ನಿಂದಿಳಿದು ಅವರಿಗಾಗಿ ಸಿದ್ಧಪಡಿಸಿದ್ದ ಮರ್ಸಿಡಿಸ್ ಬೆನ್ಜ್ ಕಾರಿನಲ್ಲಿ ನಿತಿನ್ ಗಡ್ಕರಿ ಅವರು ಹೆದ್ದಾರಿಯನ್ನು ಒಂದು ಕಿ.ಮೀ. ಪರಿಶೀಲಿಸಿದ ಬಳಿಕ ಸಮೀಪದಲ್ಲಿ ಆಯೋಜಿಸಿದ್ದ ಎಕ್ಸ್‌ಪ್ರೆಸ್‌ವೇ ಛಾಯಾಚಿತ್ರಗಳನ್ನು ವೀಕ್ಷಿಸಿ ಸುದ್ದಿಗಾರರಿಗೆ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಬಳಿಕ ಮಧ್ಯಾಹ್ನ 2.45 ಗಂಟೆಗೆ ವಾಪಸ್ಸಾದರು.

ಮೈಸೂರು ಕಲಾಮಂದಿರದ ಕಿರು ರಂಗಮಂದಿರದಲ್ಲಿ ಜನಪದ ಜಾತ್ರೆ

ಕಂಸಾಳೆ, ಡೊಳ್ಳು, ಪೂಜಾ ಕುಣಿತ ಸೇರಿದಂತೆ ಜನಪದ ವೈಭವ ಅನಾವರಣ

ಮೈಸೂರು, ಜ.5(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಗುರುವಾರ ವಿವಿಧ ಪ್ರಕಾರಗಳ ಜಾನಪದ ಕಲೆಗಳು ಮೇಳೈಸಿದವು.

ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಆಯೋಜಿಸಿದ್ದ ರಂಗಭೂಮಿ ಮತ್ತು ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರದ ಸಮಾರೋಪ, ಜಾನಪದ ಸಂಭ್ರಮ ಮತ್ತು ನಾಟಕೋತ್ಸವಕ್ಕೆ ಹಿರಿಯ ರಂಗಕರ್ಮಿ ಪ್ರಸನ್ನ ಡೋಲು ಬಾರಿಸುವ ಮೂಲಕ ಚಾಲನೆ ನೀಡಿ, ಶುಭ ಕೋರಿದರು.



ಕಾರ್ಯಕ್ರಮದಲ್ಲಿ ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ ಸೇರಿದಂತೆ ವಿವಿಧ ಜಾನಪದ ಪ್ರಕಾರಗಳನ್ನು ಪ್ರದರ್ಶಿಸಲಾಯಿತು. ಜಾನಪದ ಕಲೆಗಳನ್ನು ಜನತೆ ಮನಸಾರೆ ಆಸ್ವಾದಿಸಿದರು. ಕಾರ್ಯಕ್ರಮದ ಅಂಗವಾಗಿ ಕಲಾಮಂದಿರದ ಪ್ರವೇಶ ದ್ವಾರದಿಂದ ಕಿರುರಂಗ ಮಂದಿರದವರೆಗೆ ಜಾನಪದ ಮೆರವಣಿಗೆ ನಡೆಯಿತು. ಕಲಾವಿದರು ತಮ್ಮ ಪ್ರದರ್ಶನದ ಮೂಲಕ ಗಮನ ಸೆಳೆದರು.

ವೇದಿಕೆ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳು ಕೋಲಾಟ, ಕಂಸಾಳೆ, ಮಾರು ಕುಣಿತ, ಡೊಳ್ಳುಕುಣಿತ ಪ್ರಸ್ತುತ ಪಡಿಸಿದರು. ದೇವಾನಂದವರ ಪ್ರಸಾದ್, ಡಾ.ಸೋಮಶೇಖರ್, ಪಿ.ಲಾಸ್ಯ ಗಣೇಶ್ ಮಲರಕಾಲನಿ, ಶ್ರೀನಿವಾಸ್‌ಮೂರ್ತಿ ಕಿರಗುಂದ, ಸಿಂಚನ ಚಿಕ್ಕೊಳಲೆ ಅವರು ಜಾನಪದ ಗೀತೆಗಳನ್ನು ಸೊಗಸಾಗಿ ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದಲ್ಲಿ ರಂಗಕರ್ಮಿ ಹೆಚ್. ಜನಾರ್ಧನ್ (ಜನ್ನಿ) ಮಾತನಾಡಿ, ಶಾಂತಿ, ಸೌಹಾರ್ದತೆ, ಸಮಾನತೆಯ ಸಮಾಜವನ್ನು ಕಟ್ಟುವುದು ಜಾನಪದದಿಂದ ಮಾತ್ರ ಸಾಧ್ಯ. ಶ್ರಮ ಸಂಸ್ಕೃತಿ ಮೂಲಕ ಜಾನಪದ ಸೃಷ್ಟಿಯಾಗಿದ್ದು, ಶಾಂತಿ, ಸೌಹಾರ್ದತೆ, ಸಾಮರಸ್ಯ, ಮಾನವೀಯತೆ ಇಲ್ಲದ ಕಡೆಗೆ ಇಂದಿನ ಸಮಾಜ ಮುಖ ಮಾಡಿದೆ. ಇದನ್ನು ಸರಿದಾರಿಗೆ ತರುವ ಶಕ್ತಿ ಜಾನಪದಕ್ಕೆ ಇದೆ. ಜನರ ಬಾಯಿ ಮಾತಿನ ಮೂಲಕ ಹರಡಿರುವ ಜಾನಪದ ಕಲೆಯನ್ನು ಉಳಿಸಿ, ಬೆಳೆಸಬೇಕಾಗಿದ್ದು, ಇದು ಪ್ರತಿಯೊಬ್ಬರ ಕರ್ತವ್ಯ ಆಗಬೇಕು. ವಚನ ಚಳವಳಿ, ದಾಸ ಸಾಹಿತ್ಯ, ಸೂಫಿ ಪರಂಪರೆಯೆಲ್ಲ ಜಾನಪದದ ಕೊಡುಗೆ ಆಗಿದೆ. ಯಾವುದೇ ಕಲೆ ಸಮಾಜದ ಒಳಿತಿಗೆ, ಮನುಷ್ಯನ ಬೆಳವಣಿಗೆಗೆ ಪೂರಕವಾಗಿರಬೇಕು. ಆಗಲೇ ಕಲೆಗೆ ಒಂದು ಸಾರ್ಥಕತೆ ಮತ್ತು ಅರ್ಥ ಬರುತ್ತದೆ ಎಂದರು.

ರಂಗಕರ್ಮಿ ಪ್ರಸನ್ನ ಮಾತನಾಡಿ, ಕನ್ನಡದ ಸಮಾಜ, ಭಾರತದ ಸಭ್ಯತೆಯನ್ನು ಕಟ್ಟುವ ಕೆಲಸ ಜನಪದ ಕಲಾ ಪ್ರಕಾರಗಳಿಂದ ಆಗುತ್ತಿದೆ. ಸಂತ ಪರಂಪರೆಯನ್ನು ಪಂಡಿತರು, ಪೂಜಾರಿಗಳು ನಿರ್ಮಿಸಿಲ್ಲ. ನಮ್ಮ ಬಸವಣ್ಣ, ಮಂಟೆಸ್ವಾಮಿ ಅವರಂತಹವರು ಸಂತ ಪರಂಪರೆಯನ್ನು ಕಟ್ಟಿದವರು ಎಂದರು.

ಸಂತ ಪರಂಪರೆಯನ್ನು ಜೀವಂತ ಇಟ್ಟವರು ನಮ್ಮ ಹಳ್ಳಿಯ ಜನರು. ಜನಪದರ ದುಡಿಯುವ ಕೈಗಳು ಕಲಾ ಪ್ರಕಾರಗಳಿಗೆ ಜೀವ ತುಂಬಿವೆ. ದೈಹಿಕ ಕೆಲಸ ಹೀನ, ಬುದ್ಧಿ–ಕೃತಕ ಬುದ್ಧಿ ಮತ್ತೆಯ ಕಾರ್ಯ ಮಾತ್ರ ಶ್ರೇಷ್ಠ ಎಂಬ ಭಾವನೆ. ಇಂದು ಕಂಪ್ಯೂಟರ್ ಆಧಾರಿತ ಬುದ್ಧಿವಂತ ರಾಕ್ಷಸರನ್ನು ಸೃಷ್ಟಿಸುತ್ತಿದ್ದೇವೆ ಎಂದು ಹೇಳಿದರು.

ಸಮಾಜ ಹಾಳಾಗುತ್ತಿದೆ. ನೀವು ಬುದ್ಧಿವಂತ ರಾಕ್ಷಸರೋ, ದಡ್ಡ ಜಾನಪದರೋ ಆಗಬೇಡಿ. ಜಾನಪದ ಜ್ಞಾನಪರಂಪರೆ ಎತ್ತಿ ಹಿಡಿಯಿರಿ. ಇಂಗ್ಲಿಷ್, ಫಿಸಿಕ್ಸ್ ಮುಂತಾದ ಹೊಸದನ್ನೂ ಕಲಿಯಿರಿ. ಇದಕ್ಕೆಲ್ಲ ಭದ್ರ ಬುನಾದಿ ನಮ್ಮ ನೆಲದ ಅಡುಗೆ, ಕೊಟ್ಟಿಗೆ, ಆಹಾರ ಪರಂಪರೆ ಇತ್ಯಾದಿ. ಕಂಪ್ಯೂಟರ್ ಬಳಸಿ, ಕಂಸಾಳೆಯನ್ನೂ ನುಡಿಸಿ ಎಂದು ಸಲಹೆ ನೀಡಿದರು. ನಮ್ಮ ದುಡಿಯುವ ವರ್ಗ ರೂಪಿಸಿದ ಅವ್ಯವಸ್ಥಿತ ನೃತ್ಯ, ಕಂಸಾಳೆ ಡೊಳ್ಳು, ಪೂಜಾಕುಣಿತ, ಹಾಡು, ನಾಟಕಗಳಿಗೆ ವ್ಯವಸ್ಥಿತ ರೂಪದ ತರಬೇತಿ ನೀಡುವ ಕ್ರಮ ಶ್ಲಾಘನೀಯ ಎಂದು ಪ್ರಸನ್ನ ಹೇಳಿದರು.

ಪೇಟೆಯಲ್ಲಿ ಅದಾನಿ, ಅಂಬಾನಿ ಮಾಡುವ ವ್ಯವಸ್ಥಿತ ಅವ್ಯವಸ್ಥೆಯನ್ನೇ ಉತ್ತಮ ಅಂದುಕೊಂಡಿದ್ದೇವೆ. ಫಿಸಿಕ್ಸ್, ಗಣಿತ ಕಲಿಯಲಾರದವರನ್ನು ದಡ್ಡರು ಅನ್ನುತ್ತಾರೆ. ಸಾಮಾನ್ಯ ಜನರು ದಡ್ಡರಾದರೆ ನಾವೆಲ್ಲರೂ ದಡ್ಡರೇ ಎಂದು ಅಭಿಪ್ರಾಯಪಟ್ಟರು. ಇಂದಿನ ಈ ಚಟುವಟಿಕೆಗಳಿಗೆಲ್ಲ 4 ದಶಕಗಳ ಹಿಂದಿನ 'ಸಮುದಾಯ ಚಳವಳಿ' ಕಾರಣ, ನಾನು, ಜನಾರ್ದನ (ಜನ್ನಿ) ಇವರೆಲ್ಲ ಇದರಿಂದ ಬೆಳೆದವರು ಎಂದು ನೆನಪಿಸಿಕೊಂಡರು. ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ಪ್ರಸನ್ನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಗೌತಮ ಟ್ರಸ್ಟ್‌ನ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು ಇನ್ನಿತರರು ಇದ್ದರು.

ಜ.24 ಮತ್ತು 25ರಂದು ಔಷಧ ವಿಜ್ಞಾನದ ವಿವಿಧ ಆಯಾಮ ಕುರಿತು ನಡೆಯುವ

ಅಂತಾರಾಷ್ಟ್ರೀಯ ಸಮ್ಮೇಳನದ ಕೈಪಿಡಿ, ವೆಬ್‌ಸೈಟ್ ಬಿಡುಗಡೆ



ಮೈಸೂರು,ಜ.5(ಪಿಎಂ)– ಫಾರ್ಮಾಕೋವಿಜಿಲೆನ್ಸ್, ಫಾರ್ಮಾಸ್ಯುಟಿಕಲ್ ಕೇರ್ ಮತ್ತು ಬಯೋಮೆಡಿಕಲ್ ರಿಸರ್ಚ್ (ಔಷಧ ವಿಜ್ಞಾನದ ವಿವಿಧ ಆಯಾಮ) ಕುರಿತು ಜ.24 ಮತ್ತು 25ರಂದು ಮೈಸೂರಿನಲ್ಲಿ ಹಮ್ಮಿಕೊಂಡಿರುವ ಅಂತಾರಾಷ್ಟ್ರೀಯ ಸಮ್ಮೇಳನದ ವಿವರ ಒಳಗೊಂಡ ಕೈಪಿಡಿ ಮತ್ತು ವೆಬ್‌ಸೈಟ್ ಅನ್ನು ಗುರುವಾರ ಬಿಡುಗಡೆ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು. ಬಳಿಕ ಮಾತನಾಡಿದ ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಹಾಗೂ ಸಮ್ಮೇಳನದ ಸಂಚಾಲಕ ಡಾ.ಹನುಮಂತಾಚಾರ್ ಜೋಷಿ, ಶಾರದಾ ವಿಲಾಸ ಫಾರ್ಮಸಿ ಕಾಲೇಜು ಮತ್ತು ಅಸೋಸಿಯೇಷನ್ ಕಮ್ಯೂನಿಟಿ ಫಾರ್ಮಾಸಿಸ್ಟ್ ಆಫ್ ಇಂಡಿಯಾ (ಎಸಿಪಿಐ) ದಕ್ಷಿಣ ಭಾರತ ಘಟಕದ ಜಂಟಿ ಆಶ್ರಯದಲ್ಲಿ ಈ ಸಮ್ಮೇಳನ ಆಯೋಜಿಸಲಾಗಿದೆ. ಮೈಸೂರಿನಲ್ಲಿ ಇದೇ ಮೊಟ್ಟ ಮೊದಲಿಗೆ ಈ ಸಮ್ಮೇಳನ ನಡೆಯುತ್ತಿದೆ ಎಂದು ತಿಳಿಸಿದರು.

ಹಲವು ದೇಶಗಳ ತಜ್ಞರು ಸಂಪನ್ಮೂಲ ವ್ಯಕ್ತಿಗಳಾಗಿ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ. ಈಗಾಗಲೇ 700 ಮಂದಿ ಸಮ್ಮೇಳನದಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡಿದ್ದಾರೆ. ಈ ಪೈಕಿ ರಾಜ್ಯದ 18 ಫಾರ್ಮಸಿ ಕಾಲೇಜುಗಳ ವಿದ್ಯಾರ್ಥಿಗಳೂ ಇದ್ದಾರೆ. 'ಕೋವಿಡ್ 19 ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳು' ಸೇರಿದಂತೆ ಹಲವು ಮಹತ್ವದ ವಿಚಾರಗಳ ಮಂಡನೆಯಾಗಲಿದ್ದು, ಈ ಪೈಕಿ 'ಆಸ್ಪತ್ರೆಯಲ್ಲಿ ಫಾರ್ಮಸಿಸ್ಟ್‌ಗಳ ಸವಾಲುಗಳು' ಎಂಬ ಬಗ್ಗೆ ವಿಚಾರ ಗೋಷ್ಠಿ ನಡೆಯುವುದು ವಿಶೇಷ ಎಂದು ಹೇಳಿದರು.

ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಸಮ್ಮೇಳನ ನಡೆಯಲಿದ್ದು, ಪಾಲ್ಗೊಳ್ಳಲಿಚ್ಛಿಸುವವರು ಜ.18ರೊಳಗೆ ನಿಗದಿತ ಶುಲ್ಕ ಪಾವತಿಯೊಂದಿಗೆ ನೋಂದಣಿ ಮಾಡಿಕೊಳ್ಳಬಹುದು. ವಿವರಗಳಿಗೆ ಮೊ.ಸಂ. 94498 15695 ಅಥವಾ 98447 67638 ಅನ್ನು ಸಂಪರ್ಕಿಸಬಹುದು ಎಂದರು.

ಕೈಪಿಡಿ ಬಿಡುಗಡೆ ಮಾಡಿದ ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಮಾತನಾಡಿ, ಆರೋಗ್ಯ ಕ್ಷೇತ್ರದ ಎಲ್ಲರಿಗೂ ತಮ್ಮ ಜ್ಞಾನ ವೃದ್ಧಿಸಿಕೊಳ್ಳಲು ಈ ಸಮ್ಮೇಳನದಿಂದ ಸಾಧ್ಯವಾಗಲಿದೆ. ಹಾಗಾಗಿ ಇಂತಹ ಸಮ್ಮೇಳನ ಆಯೋಜಿಸಿರುವುದು ಅಭಿನಂದನಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ಸಮ್ಮೇಳನದ ವೆಬ್‌ಸೈಟ್ (www.acpisouth.in) ಬಿಡುಗಡೆ ಮಾಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ಫಾರ್ಮಾಸಿಸ್ಟ್‌ಗಳ ಸಂಘದ ಮೈಸೂರು ಮತ್ತು ಚಾಮರಾಜನಗರ ಘಟಕದ ಅಧ್ಯಕ್ಷ ಹೆಚ್.ಎಂ.ಉಮೇಶ್‌ಬಾಬು, ಸುವರ್ಣ ಕರ್ನಾಟಕ ಕೆಮಿಸ್ಟ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಮಂಜುನಾಥ್, ಮೈಸೂರು ಡಿಸ್ಟ್ರಿಕ್ ರೀಟೆಲರ್ಸ್ ಅಂಡ್ ಕೆಮಿಸ್ಟ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಸಿ.ಕೆ.ಅರುಣ್ ಮತ್ತಿತರರು ಹಾಜರಿದ್ದರು.

ಜ.18ರಿಂದ 22ರವರೆಗೆ ಬೆಂಗಳೂರಲ್ಲಿ ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ

'ರಾಜ್ಯದ ಅಭಿವೃದ್ಧಿಗೆ ಕೈಗಾರಿಕೆಗಳು, ಕಾರ್ಮಿಕರ ಕೊಡುಗೆ' ವಿಷಯವಾಗಿ ಜ.8ರಂದು ವಿಚಾರ ಸಂಕಿರಣ

ಮೈಸೂರು,ಜ.5(ಪಿಎಂ)– ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್‌ನ (ಸಿಐಟಿಯು) 17ನೇ ಅಖಿಲ ಭಾರತ ಸಮ್ಮೇಳನವನ್ನು ಜ.18ರಿಂದ 22ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದು, ಜ.22ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬೃಹತ್ ಬಹಿರಂಗ ಸಭೆ ನಡೆಯಲಿದೆ ಎಂದು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಕೆ.ಬಾಲಾಜಿರಾವ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ಜನ ವಿರೋಧಿ, ಕಾರ್ಮಿಕ ಮತ್ತು ರೈತ ವಿರೋಧಿ ಆಡಳಿತದ ವಿರುದ್ಧ ಸಮ್ಮೇಳನ ಪ್ರತಿಧ್ವನಿಸಲಿದೆ. ಸಮ್ಮೇಳನದಲ್ಲಿ 2 ಸಾವಿರ ಸಿಐಟಿಯು ಸದಸ್ಯತ್ವ ಹೊಂದಿರುವ ಕಾರ್ಮಿಕರು ಭಾಗವಹಿಸುತ್ತಿದ್ದು, ಜ.22ರಂದು ನಡೆಯುವ ಬಹಿರಂಗ ಸಭೆಯಲ್ಲಿ ಮೈಸೂರು ಜಿಲ್ಲೆ ಒಂದರಿಂದಲೇ 10 ಸಾವಿರ ಕಾರ್ಮಿಕರು ಪಾಲ್ಗೊಳ್ಳಲಿದ್ದಾರೆ ಎಂದರು.

ಸಮ್ಮೇಳನದ ಪ್ರಯುಕ್ತ ಜ.8ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಕೆಆರ್ ಮೊಹಲ್ಲಾದ ನಾಲಾ ಬೀದಿಯಲ್ಲಿರುವ ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ ಸಭಾಂಗಣದಲ್ಲಿ 'ಕರ್ನಾಟಕ ಅಭಿವೃದ್ಧಿಗೆ ಕೈಗಾರಿಕೆಗಳು ಮತ್ತು ದುಡಿಯುವ ಜನತೆಯ ಕೊಡುಗೆ' ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿದೆ. ಸಿಐಟಿಯು ಜಿಲ್ಲಾಧ್ಯಕ್ಷ ಜಿ.ಜಯರಾವ್ ಅಧ್ಯಕ್ಷತೆ ವಹಿಸಲಿದ್ದು, ಸಿಐಟಿಯು ರಾಜ್ಯ ಉಪಾಧ್ಯಕ್ಷ ವಿ.ಜೆ.ಕೆ.ನಾಯರ್ ಮತ್ತು ಜಂಟಿ ಕಾರ್ಮಿಕ ಆಯುಕ್ತ ಡಾ.ರವಿಕುಮಾರ್ ವಿಚಾರ ಮಂಡಿಸಲಿದ್ದಾರೆ ಎಂದು ತಿಳಿಸಿದರು.

ಮುಂಬರುವ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸದಿರಲು ಕಾರ್ಮಿಕ ವರ್ಗ ತೀರ್ಮಾನಿಸಿದೆ. ಮಾರ್ಚ್‌ನಲ್ಲಿ ದೇಶ ವ್ಯಾಪಿ ಕಾರ್ಮಿಕ ಮುಷ್ಕರಕ್ಕೆ ಕರೆ ನೀಡಲು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಉದ್ದೇಶಿಸಿದ್ದು, ಈ ಸಂಬಂಧ ಜ.30ರಂದು ದೆಹಲಿಯಲ್ಲಿ ರಾಷ್ಟ್ರೀಯ ಸಮಾವೇಶ ಏರ್ಪಡಿಸಲಾಗಿದೆ ಎಂದು ಹೇಳಿದರು. ಸಿಐಟಿಯು ಜಿಲ್ಲಾಧ್ಯಕ್ಷ ಜಿ.ಜಯರಾವ್, ಖಜಾಂಚಿ ಎಂ.ಅಣ್ಣಪ್ಪ, ಪದಾಧಿಕಾರಿ ಧನಂಜಯ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಚಿನ್ನ ಖರೀದಿಸಿ ಫೋನ್ ಪೇ ಮೂಲಕ ಹಣ ಪಾವತಿಸಿರುವುದಾಗಿ ಹೇಳಿ ವಂಚನೆ

ಆಭರಣ ಅಂಗಡಿ ಮಾಲೀಕನಿಂದ ಪೊಲೀಸರಿಗೆ ದೂರು

ಮೈಸೂರು, ಜ.5–ಚಿನ್ನ ಖರೀದಿಸಿ ಫೋನ್ ಪೇ ಮೂಲಕ ಹಣ ಪಾವತಿಸಿರುವುದಾಗಿ ನಂಬಿಸಿ ಚಿನ್ನದಂಗಡಿ ಮಾಲೀಕನಿಗೆ ವಂಚಿಸಿರುವುದು ವರದಿಯಾಗಿದೆ.

ಮೈಸೂರಿನ ಹಿನಕಲ್‌ನಲ್ಲಿರುವ ದೀಪಕ್ ಜೈನ್(28) ಎಂಬುವರ ಚಿನ್ನದ ಅಂಗಡಿಗೆ ಡಿ.30ರಂದು ಬೆಳಗ್ಗೆ ಬಂದಿದ್ದ ಇಬ್ಬರು ವ್ಯಕ್ತಿಗಳು 11.250 ಗ್ರಾಂ ತೂಕದ ಚಿನ್ನ ಖರೀದಿಸಿ, 62,500 ರೂ. ಫೋನ್ ಪೇ ಮೂಲಕ ವರ್ಗಾವಣೆ ಮಾಡಿರುವುದಾಗಿ ಮಾಲೀಕನಿಗೆ ಸ್ಕ್ರೀನ್‌ಶಾಟ್ ತೋರಿಸಿದ್ದಾರೆ. ಈ ವ್ಯಕ್ತಿಗಳು ಬಿಲ್ ಪಡೆಯುವಾಗ ಒಮ್ಮೆ ಅಶೋಕ್ ಎಂದು ತಿಳಿಸಿ, ನಂತರ ಅಶ್ವತ್ ಎಂಬ ಹೆಸರಿನಲ್ಲಿ ಬಿಲ್ ಪಡೆದಿದ್ದಾರೆ. ಆದರೆ ಅಂಗಡಿ ಮಾಲೀಕನ ಖಾತೆಗೆ ಹಣ ಜಮೆ ಆಗಿಲ್ಲ. ಈ ಸಂಬಂಧ ಜ.3ರಂದು ದೀಪಕ್ ಜೈನ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಆಭರಣದ ಅಂಗಡಿಯಲ್ಲಿ ಅಸಲಿ ಓಲೆ ಕದ್ದು, ನಕಲಿ ಓಲೆ ಕೊಟ್ಟು ವಂಚನೆ

ಮೈಸೂರು, ಜ.5–ಚಿನ್ನ ಖರೀದಿಸುವ ನೆಪದಲ್ಲಿ ಜುವೆಲರಿ ಶಾಪ್‌ಗೆ ಆಗಮಿಸಿದ್ದ ಇಬ್ಬರು ಮಹಿಳೆಯರು 21.860 ಗ್ರಾಂ ತೂಕದ ಅಸಲಿ ಚಿನ್ನದ ಓಲೆ ಕದ್ದು, ಟ್ರೇನಲ್ಲಿ ನಕಲಿ ಓಲೆ ಇಟ್ಟು ಪರಾರಿಯಾಗಿರುವುದು ವರದಿಯಾಗಿದೆ.

ಮೈಸೂರಿನ ಅಶೋಕ ರಸ್ತೆಯಲ್ಲಿರುವ ಪವನ್ ಜುವೆಲರೀಸ್ ಅಂಗಡಿ ಮಾಲೀಕ ದೀಪಕ್ ಕುಮಾರ್(34) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಡಿ.30ರಂದು ಸಂಜೆ ಓಲೆ ಖರೀದಿಗೆಂದು ಇವರ ಅಂಗಡಿಗೆ ಇಬ್ಬರು ಮಹಿಳೆಯರು ಬಂದಿದ್ದಾರೆ. ದೀಪಕ್ ಕುಮಾರ್ ತಂದೆ ಸಾಗರ್ ಮಲ್ ಷಾ ಅವರು ಚಿನ್ನದ ಓಲೆಗಳಿದ್ದ ಟ್ರೇಯನ್ನು ಟೇಬಲ್ ಮೇಲೆ ಇಟ್ಟು ಮಹಿಳೆಯರಿಗೆ ತೋರಿಸುತ್ತಿದ್ದರು. ಈ ವೇಳೆ ಅವರು ಕ್ಯಾಷ್ ಕೌಂಟರ್ ಕಡೆ ಹೋಗಿ ಹಿಂದಿರುಗಿದಾಗ ಈ ಮಹಿಳೆಯರು ಮತ್ತೆ ಬರುತ್ತೇವೆ ಎಂದು ಹೇಳಿ ಹೊರಟು ಹೋಗಿದ್ದಾರೆ. ಮರು ದಿನ ಚಿನ್ನದ ಆಭರಣ ಪರಿಶೀಲಿಸಿದಾಗ ಟ್ರೇನಲ್ಲಿ ನಕಲಿ ಚಿನ್ನದ ಓಲೆ ಇರುವುದು ಗೊತ್ತಾಗಿದೆ. ಸಿಸಿ ಕ್ಯಾಮರಾ ದೃಶ್ಯಗಳನ್ನು ಪರಿಶೀಲಿಸಿದಾಗ ಡಿ.30ರಂದು ಸಂಜೆ 7.38ರ ವೇಳೆಯಲ್ಲಿ ಇಬ್ಬರು ಮಹಿಳೆಯರು ಚಿನ್ನದ ಓಲೆ ತೆಗೆದುಕೊಂಡು ಟ್ರೇನಲ್ಲಿ ನಕಲಿ ಚಿನ್ನದ ಓಲೆಗಳನ್ನು ಇಟ್ಟಿರುವುದು ಪತ್ತೆಯಾಗಿದೆ. ಈ ಸಂಬಂಧ ದೀಪಕ್ ಕುಮಾರ್ ಜ.3ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆ ಮಾರಾಟದ ಕರಾರು ಮಾಡಿ 5 ಲಕ್ಷ ವಂಚನೆ

ಪಾನಿಪೂರಿ ಮಾರುವ ಮಹಿಳೆಯಿಂದ ಪೊಲೀಸರಿಗೆ ದೂರು

ಮೈಸೂರು, ಜ.5–ಮನೆ ಮಾರಾಟ ಮಾಡುವುದಾಗಿ ಒಪ್ಪಂದ ಕರಾರು ಮಾಡಿಕೊಂಡು ಪಾನಿಪೂರಿ ಮಾರಾಟ ಮಾಡುವ ಮಹಿಳೆಗೆ 5 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಸಿದ್ಧಾರ್ಥನಗರ ವಿನಯ ಮಾರ್ಗದಲ್ಲಿ ಎ.ವಿ. ಆಸ್ಪತ್ರೆ ಬಳಿ ಪಾನಿಪೂರಿ ವ್ಯಾಪಾರ ಮಾಡುತ್ತಿರುವ ಜಯಲಕ್ಷ್ಮಿ(37) ವಂಚನೆಗೊಳಗಾದವರಾಗಿದ್ದು, ಕುರುಬಾರಹಳ್ಳಿ ನಿವಾಸಿಗಳಾದ ಪುಟ್ಟಮಾದಯ್ಯ, ಮಹದೇವಮ್ಮ, ಗೌರಿ, ಕುಮಾರಿ, ಲೋಕೇಶ್ ಮತ್ತು ಮಂಜು ಸೇರಿದಂತೆ 6 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ಜಯಲಕ್ಷ್ಮಿ ಹಾಲಿ ತಾನು ವಾಸವಿರುವ ಮನೆಯನ್ನು ಖಾಲಿ ಮಾಡಿ ಭೋಗ್ಯಕ್ಕೆ ಬೇರೆ ಮನೆಗೆ ಹೋಗಬೇಕೆಂಬ ಚಿಂತನೆಯಲ್ಲಿರುವಾಗ ಈ 6 ಮಂದಿ ಆರೋಪಿಗಳು ಆಕೆಯನ್ನು ಸಂಪರ್ಕಿಸಿ, ಕುರುಬಾರಹಳ್ಳಿ 3ನೇ ಕ್ರಾಸ್‌ನಲ್ಲಿ ಇರುವ 93ನೇ ಸಂಖ್ಯೆಯ 15X12.5 ಅಡಿ ವಿಸ್ತೀರ್ಣದ ಮನೆಯನ್ನು 8 ಲಕ್ಷ ರೂ.ಗಳಿಗೆ ಮಾರಾಟ ಮಾಡುವುದಾಗಿ ತಿಳಿಸಿದ್ದಲ್ಲದೇ, ಈ ಮನೆ ಮೇಲೆ ಕನ್ಯಕಾಪರಮೇಶ್ವರಿ ಬ್ಯಾಂಕ್‌ನಲ್ಲಿ ಇರುವ 2.88 ಲಕ್ಷ ಸಾಲ ತೀರಿಸಿ, ಉಳಿಕೆ ಹಣವನ್ನು ತಮಗೆ ಕೊಡುವಂತೆ ಕೇಳಿದ್ದಾರೆ.

ಅದರಂತೆ ಜಯಲಕ್ಷ್ಮಿ ಒಟ್ಟು 5 ಲಕ್ಷ ರೂ.ಗಳನ್ನು ಇವರಿಗೆ ನೀಡಿದ್ದು, ಮನೆ ಮಾರಾಟದ ಬಗ್ಗೆ 2022ರ ಮಾ.3ರಂದು ಒಪ್ಪಂದ ಕರಾರು ಮಾಡಿಕೊಳ್ಳಲಾಗಿದೆ. ಆದರೆ ಬಾಕಿ ಹಣ ಪಡೆದು ಮನೆಯನ್ನು ರಿಜಿಸ್ಟರ್ ಮಾಡಿಕೊಡಲು ಹೆಣ್ಣು ಮಕ್ಕಳು ಒಪ್ಪುತ್ತಿಲ್ಲ. ಅವರನ್ನು ಒಪ್ಪಿಸಿ ರಿಜಿಸ್ಟರ್ ಮಾಡಿಕೊಡುತ್ತೇವೆ ಎಂದು ತಿಳಿಸಿದ್ದ ಆರೋಪಿಗಳು, 2022ರ ಸೆ.17ರಂದು ಮರು ಅಗ್ರಿಮೆಂಟ್ ಮಾಡಿಕೊಟ್ಟಿದ್ದಾರೆ. ಈ ಮಧ್ಯೆ ಇವರು ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಜಯಲಕ್ಷ್ಮಿ ಅವರ ಗಮನಕ್ಕೇ ಬಾರದೇ 4.5 ಲಕ್ಷ ರೂ. ಸಾಲ ಪಡೆದಿದ್ದು, ಜಯಲಕ್ಷ್ಮಿ ಅವರನ್ನು ವಂಚಿಸಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಹೆಬ್ಬಾಳು ಬಸವನಗುಡಿ ಬಳಿಯ ಪೌರಕಾರ್ಮಿಕರ ನೆಲೆ ಏಕಾಏಕಿ ತೆರವುಗೊಳಿಸಬೇಡಿ

ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ ಸೂಚನೆ

ಮೈಸೂರು,ಜ.5(ಎಂಟಿವೈ)– ಮೈಸೂರು ಹೆಬ್ಬಾಳು ಬಸವನಗುಡಿಯಲ್ಲಿ ನೆಲೆಸಿರುವ 35 ಪೌರಕಾರ್ಮಿಕ ಕುಟುಂಬಗಳ ಗುಡಿಸಲುಗಳನ್ನು ಯಾವುದೇ ಕಾರಣಕ್ಕೂ ತೆರವು ಮಾಡಬಾರದು ಎಂದು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಗುರುವಾರ ಸ್ಲಂ ಬೋರ್ಡ್ ಮತ್ತು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಪೌರಕಾರ್ಮಿಕರಿಗೆ ರಕ್ಷಣೆ ಕೊಡುವುದು ಆಯೋಗದ ಕರ್ತವ್ಯ ಹಾಗೂ ಜವಾಬ್ದಾರಿ. ಒಂದೆಡೆ ನೆಲೆಸಿರುವ ಪೌರಕಾರ್ಮಿಕರನ್ನು ಏಕಾಏಕಿ ಒಕ್ಕಲೆಬ್ಬಿಸುವುದು ಸೂಕ್ತವಲ್ಲ. ಹೆಬ್ಬಾಳು ಬಡಾವಣೆಯ ಬಸವನಗುಡಿ ಬಳಿ ನೆಲೆಸಿರುವ ಪೌರಕಾರ್ಮಿಕ ಕುಟುಂಬಗಳನ್ನು ತೆರವು ಮಾಡದಂತೆ ಮುಡಾ ಆಯುಕ್ತರಿಗೆ ಪತ್ರ ಬರೆಯಲಾಗುವುದು. ಏಕಾಏಕಿ ಒತ್ತಾಯದ ಬದಲು ಮನವೊಲಿಸಿ, ತೆರವುಗೊಳಿಸಬಹುದಾಗಿತ್ತು. ಬಲವಂತದ ತೆರವಿನ ವೇಳೆ ವ್ಯತ್ಯಾಸವಾದರೆ ಸರ್ಕಾರಕ್ಕೂ ಮುಜುಗರವಾಗುತ್ತದೆ. ಹಾಗಾಗಿ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ ಏನು ಕ್ರಮ ಕೈಗೊಳ್ಳಬಹುದು ಎಂದು ನಿರ್ಧರಿಸುವಂತೆ ಸೂಚಿಸಿದರು.

ಸ್ಲಂ ಬೋರ್ಡ್ ಎಇಇ ರಾಮಚಂದ್ರ ಮಾತನಾಡಿ, ಹೆಬ್ಬಾಳು ಬಸವನಗುಡಿ ಬಳಿ ಸರ್ವೆ ನಂ 165ರಲ್ಲಿ 1990ರಿಂದ 35 ಪೌರಕಾರ್ಮಿಕ ಕುಟುಂಬಗಳು ವಾಸಿಸುತ್ತಿವೆ. 2014ರಲ್ಲಿ ಈ ಕುಟುಂಬಗಳಿಗೆ ಮೇಟಗಳ್ಳಿಯ ಅಂಬೇಡ್ಕರ್ ಜ್ಞಾನಲೋಕದಲ್ಲಿ ಜೆ–ನರ್ಮ್ ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸಲಾಗಿದೆ. ಗುಡಿಸಲುಗಳನ್ನು ತೆರವು ಮಾಡುವಂತೆ ಮುಡಾದಿಂದ ಒತ್ತಡ ಇದೆ. ಸ್ಥಳೀಯ ನಾಗರಿಕರೊಬ್ಬರು ಮನೆ ಕೊಟ್ಟ ಬಳಿಕ ಖಾಲಿ ಮಾಡಿಸದಿರುವುದಕ್ಕೆ ಸ್ಲಂ ಬೋರ್ಡ್ ವಿರುದ್ಧವೇ ಲೋಕಾಯುಕ್ತಕ್ಕೆ ದೂರು ಕೊಟ್ಟಿದ್ದಾರೆ ಎಂದು ವಾಸ್ತವ ವಿಚಾರ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಿವಣ್ಣ ಅವರು, ಪೌರಕಾರ್ಮಿಕರು ವಾಸಿಸುತ್ತಿರುವ ಜಾಗವನ್ನು ಪ್ರಭಾವಶಾಲಿಗಳು ಕಬಳಿಸಲು ಸಂಚು ನಡೆಸಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ. ಪೌರಕಾರ್ಮಿಕರಿಗೆ ಮೀಸಲಿಟ್ಟ ಜಾಗವನ್ನು ಆಶ್ರಯ ಸಮಿತಿಗೆ ಕೊಟ್ಟಿದ್ದಾರೆಂದು ಅಧಿಕಾರಿಗಳು ಹೇಳುತ್ತಿದ್ದು, ಇದರಲ್ಲಿ ಗೊಂದಲವಿದೆ. ಪೂರ್ಣ ಮಾಹಿತಿ ಪಡೆದು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಸ್ಲಂ ಬೋರ್ಡ್ ಎಇಇ ತೇಜಶ್ರೀ ಮಾತನಾಡಿ, ಪ್ರಧಾನ ಮಂತ್ರಿ ವಸತಿ ಯೋಜನೆಯಡಿ ಗಾಂಧಿನಗರದಲ್ಲಿ 770 ಮನೆಗಳ ವಿತರಣೆಗೆ ಅನುಮೋದನೆ ದೊರೆತಿದ್ದು, ಫಲಾನುಭವಿಗಳಿಂದ ದಾಖಲೆಗಳನ್ನು ಸಂಗ್ರಹಿಸಲಾಗಿತ್ತು. ಆದರೆ, ಸರ್ಕಾರ ಈ ಮನೆಗಳನ್ನು ವಾಪಸ್ ಪಡೆದಿದೆ. ಇದರಿಂದ ಗಾಂಧಿನಗರದ ಯೋಜನೆ ಸ್ಥಗಿತಗೊಂಡಿದೆ. ಸ್ಲಂ ಬೋರ್ಡ್ ವತಿಯಿಂದ ಪೌರಕಾರ್ಮಿಕರಿಗೆ ಹೆಚ್ಚು ಮನೆಗಳನ್ನು ನೀಡಿದ್ದೇವೆ. ಮೈಸೂರು ನಗರದಲ್ಲಿ 871, ಮೈಸೂರು ಜಿಲ್ಲೆಯಲ್ಲಿ 1306 ಮನೆಗಳನ್ನು ವಿತರಣೆ ಮಾಡಲಾಗಿದೆ. ಹೈವೇ ಸರ್ಕಲ್‌ನಲ್ಲಿರುವ ಪೌರಕಾರ್ಮಿಕ ಕಾಲೋನಿಯಲ್ಲಿ ಕಂದಾಯ ಸಂಗ್ರಹಿಸಿ, ಅದನ್ನು ನಿರ್ವಹಣೆ ಮಾಡುವಂತೆ ನಗರ ಪಾಲಿಕೆಗೆ ಮನವಿ ಮಾಡಿದರೂ ಸ್ಪಂದಿಸುತ್ತಿಲ್ಲ. ಸ್ಲಂ ಬೋರ್ಡ್‌ನಲ್ಲಿ ಬಡಾವಣೆ ನಿರ್ವಹಣೆಗೆ ಹಣ ಇಲ್ಲ ಎಂದರು.

ಗಾಂಧಿನಗರದ ಮುಖಂಡ ನಾರಾಯಣ ಮಾತನಾಡಿ, ಗಾಂಧಿನಗರದ ನಿವಾಸಿಗಳಿಗೆ ನೀಡಲು ಉದ್ದೇಶಿಸಿದ್ದ ಮನೆಗಳನ್ನು ಯಾವ ಕಾರಣಕ್ಕೆ ರದ್ದು ಮಾಡಿದ್ದಾರೆ ಎಂದು ತಿಳಿದಿಲ್ಲ. ವಸತಿ ಸಚಿವ ವಿ.ಸೋಮಣ್ಣ ಅವರೊಂದಿಗೆ ಚರ್ಚಿಸಿ ಮತ್ತೆ ಮನೆ ಮಂಜೂರು ಮಾಡಿಸುವಂತೆ ಕೋರಿದರು.

'ಜಮಾಲಿ ಗುಡ್ಡ' ಒಂದು ಅದ್ಭುತ ಅನುಭವ



ಈಗಾಗಲೇ ಬಿಡುಗಡೆಯಾಗಿರುವ 'ಜಮಾಲಿ ಗುಡ್ಡ' ಚಿತ್ರದ ಬಗ್ಗೆ ಇದರ ನಾಯಕ ಡಾಲಿ ಧನಂಜಯ್ ಪತ್ರಿಕೆಯೊಂದಿಗೆ ಮನಬಿಚ್ಚಿ ಮಾತನಾಡಿದ್ದಾರೆ. ನಮಗೆ ಅದ್ಭುತವಾದ ನೆನಪುಗಳನ್ನು ಉಳಿಸುವ ಸಿನಿಮಾ 'ಜಮಾಲಿ ಗುಡ್ಡ'. ಪ್ರಯಾಣದ ಕತೆಗಳು ಎಂದರೆ ಎಲ್ಲರಿಗೂ ಇಷ್ಟವಾಗುತ್ತದೆ. ಅದರಲ್ಲೂ ಜೀವನ ಪಯಣದ ಕತೆಗಳು ದೃಶ್ಯಗಳಾಗಿ ನಮ್ಮ ಮುಂದೆ ಬಂದಾಗ ಅವು ಕೊಡುವ ಫೀಲ್ ಪದಗಳಲ್ಲಿ ಹೇಳಲು ಸಾಧ್ಯವಿಲ್ಲ.

ಈ ಚಿತ್ರವನ್ನು ನೋಡುತ್ತಿದ್ದಾಗ ನಿರ್ದೇಶಕ ಕುಶಾಲ್, ನಮ್ಮದೇ ಜಗತ್ತನ್ನು ಅಚ್ಚುಕಟ್ಟಾಗಿ ನಮ್ಮ ಮುಂದೆ ತೆರೆದಿಟ್ಟಿದ್ದಾರೆ ಎನಿಸುತ್ತದೆ. ಮಾಸ್ ಹಾಗೂ ಆ್ಯಕ್ಷನ್ ಪ್ರಿಯರಿಗೆ ಸಿನಿಮಾ ಇಷ್ಟವಾಗುತ್ತದೆಯೇ ಎನ್ನುವ ಅನುಮಾನ ಬೇಡ. ಪ್ರೇಕ್ಷಕರು ಈಗ ಕ್ಯಾಟಗರಿ ಮಾಡಿಕೊಂಡು ಸಿನಿಮಾ ನೋಡಲ್ಲ. ಒಳ್ಳೆಯ ಕತೆಯನ್ನು ಯಾವ ಜಾನರ್‌ನಲ್ಲಿ ಹೇಳಿದರೂ ಇಷ್ಟಪಟ್ಟು ನೋಡುತ್ತಾರೆ. ಈಗ ಪ್ರೇಕ್ಷಕರಿಗೆ ಒಳ್ಳೆಯ ಕಂಟೆಂಟ್ ಮುಖ್ಯ, ಅದು ನಮ್ಮ ಈ ಚಿತ್ರದಲ್ಲಿ ಇದೆ ಎನ್ನುವ ಭರವಸೆ ಕೊಡುತ್ತೇನೆ.

ಪಾತ್ರಧಾರಿಗಳ ಸಂಯೋಜನೆಯೇ ಈ ಚಿತ್ರದ ಮತ್ತೊಂದು ವಿಶೇಷತೆ. ತುಂಬಾ ದಿನಗಳ ನಂತರ ನಟಿ ಭಾವನಾ ರಾಮಣ್ಣ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರಕಾಶ್ ಬೆಳವಾಡಿ, ಅದಿತಿ ಪ್ರಭುದೇವ, ನಂದ ಗೋಪಾಲ್, ಯಶ್ ಶೆಟ್ಟಿ, ಟಗರು ಸರೋಜ, ಬಾಲನಟಿ ಪ್ರಾಣ್ಯ ಹೀಗೆ ಕಲಾವಿದರ ದೊಡ್ಡ ದಂಡೇ ಚಿತ್ರದಲ್ಲಿದೆ. ಈ ಎಲ್ಲ ಪಾತ್ರಧಾರಿಗಳ ಸುತ್ತ ಒಂದು ಕತೆ ಸಾಗುತ್ತಿರುತ್ತದೆ. ಕತೆ ಕೇಳಿದಾಗಲೇ ಈ ಚಿತ್ರದಲ್ಲಿ ನಟಿಸಬೇಕು ಎನ್ನಿಸುತ್ತದೆ. ಅಂಥ ಚಿತ್ರಗಳ ಸಾಲಿಗೆ ಸೇರುವ ಸಿನಿಮಾ 'ಜಮಾಲಿ ಗುಡ್ಡ'. ಇದೊಂದು ಕಾಲ್ಪನಿಕ ಕತೆಯಾದರೂ ನೋಡುತ್ತಿದ್ದಾಗ ಎಲ್ಲೋ ಇದು ನಮ್ಮದೇ ಜೀವನದಲ್ಲಿ ಬಂದಿದೆಯಲ್ಲ ಎನ್ನುವಂತೆ ಈ ಸಿನಿಮಾ ಕನೆಕ್ಟ್ ಆಗುತ್ತದೆ. ಕಾಲ್ಪನಿಕ ಜಗತ್ತು, ಅಲ್ಲಿನ ಸ್ನೇಹ, ಪ್ರೀತಿ-ಪ್ರೇಮ ಮತ್ತು ಜಗಳ, ಸಂಬಂಧಗಳು, ಜೈಲು ಇತ್ಯಾದಿಗಳ ಸುತ್ತ ಸಾಗುವ ಈ ಚಿತ್ರದಲ್ಲಿ ವಿಶೇಷ ತಿರುವುಗಳಿವೆ. ಇದೇ ಚಿತ್ರದ ನಿರೂಪಣೆಯ ವಿಶೇಷತೆ ಎನ್ನಬಹುದು. ಇದರ ಕತೆಯನ್ನು ಒಂದು ಸಾಲಿನಲ್ಲಿ ಹೇಳುವುದಾದರೆ ಜೈಲಿನಿಂದ ಪರಾರಿಯಾದ ಖೈದಿಯ ಸುತ್ತ ಸಾಗುವ ಸನ್ನಿವೇಶ, ಘಟನೆಗಳು ಅಥವಾ ಪಾತ್ರಧಾರಿಗಳ ಒಟ್ಟು ಸಂಯೋಜನೆಯೇ 'ಜಮಾಲಿ ಗುಡ್ಡ'. 95 ಹಾಗೂ 96ರ ಕಾಲಘಟ್ಟದ ಕತೆಯಾದರೂ ಈಗಲೂ ನೋಡಿದಾಗ ಹೊಸತನದಿಂದ ಕಾಣುತ್ತದೆ.



ರಂಗಕರ್ಮಿ ರಮೇಶ್ ಬೇಗಾರ್ ನಿರ್ದೇಶನದ 'ವೈಶಂಪಾಯನ ತೀರ' ಇಂದು ಬಿಡುಗಡೆಯಾಗುತ್ತಿದೆ. ಕಳೆದ ವಾರ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ನಡೆದಿತ್ತು. ಹಿರಿಯ ನಿರ್ದೇಶಕ ಗಿರೀಶ್ ಕಾಸರವಳ್ಳಿ, ಸಾಹಿತಿ ಮಹಾಬಲಮೂರ್ತಿ, ಸಂಗೀತ ನಿರ್ದೇಶಕ ಗುರುಕಿರಣ್, ಫಿಲಂ ಛೇಂಬರ್ ಅಧ್ಯಕ್ಷ ಭಾ.ಮಾ. ಹರೀಶ್ ಚಿತ್ರಕ್ಕೆ ಶುಭ ಹಾರೈಸಿದರು.

ನಿರ್ದೇಶಕ ರಮೇಶ್ ಬೇಗಾರ್ ಮಾತನಾಡುತ್ತಾ, ಮಹಾಬಲಮೂರ್ತಿ ಅವರ ಸಣ್ಣಕತೆಯನ್ನಾಧರಿಸಿ 'ವೈಶಂಪಾಯನ ತೀರ' ಚಿತ್ರವನ್ನು ಮಾಡಿದ್ದೇವೆ, ಯಕ್ಷಗಾನ ಕಲೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಪ್ರಕೃತಿ ಮತ್ತು ಪುರುಷನ ನಡುವಣ ಸಂಬಂಧವನ್ನು ಹೇಳುವ ಚಿತ್ರ. ಇಡೀ ಚಿತ್ರವನ್ನು ಕೊಪ್ಪ ಮತ್ತು ಶೃಂಗೇರಿಯ ಸುತ್ತಮುತ್ತಲ ಪರಿಸರದಲ್ಲಿ ಚಿತ್ರೀಕರಿಸಲಾಗಿದೆ. ಈ ಮೂಲಕ ಮಲೆನಾಡಿನ ಭಾಷೆ, ಜನಜೀವನ ಮತ್ತು ಅಲ್ಲಿನ ಸಂಸ್ಕೃತಿಯನ್ನು ತೆರೆಯ ಮೇಲೆ ತರಲಾಗಿದೆ ಎಂದು ಚಿತ್ರದ ಬಗ್ಗೆ ವಿವರಣೆ ನೀಡಿದರು.

ಹಿರಿಯ ನಿರ್ದೇಶಕ ಗಿರೀಶ್ ಕಾಸರವಳ್ಳಿ ಮಾತನಾಡಿ, ರಮೇಶ್ ಬೇಗಾರ್ ಅವರು ಸುಮಾರು ಮೂರು ದಶಕಗಳಿಂದ ಕಲಾಕ್ಷೇತ್ರದಲ್ಲಿ ಸಕ್ರಿಯವಾಗಿದ್ದಾರೆ. ಯಕ್ಷಗಾನದಂತಹ ಕಲೆಯನ್ನು ಹೊಸ ಆಯಾಮದಲ್ಲಿ ನೋಡುವಂತಹ ಅಪರೂಪದ ಪ್ರತಿ ರಮೇಶ್ ಬೇಗಾರ್, ನಾನು ಕೂಡ ಈ ಚಿತ್ರವನ್ನು ನೋಡಲು ಕಾತುರನಾಗಿದ್ದೇನೆ ಎಂದು ಹೇಳಿದರು.

ಈ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿರುವ ನಟ ಪ್ರಮೋದ್ ಶೆಟ್ಟಿ ಮಾತನಾಡುತ್ತಾ, ಇದೊಂದು ವಿಭಿನ್ನ ಕಥೆಯನ್ನು ಒಳಗೊಂಡ ಚಿತ್ರ. ಮಲೆನಾಡ ಸಂಸ್ಕೃತಿಯನ್ನು ನಿರ್ದೇಶಕರು ಮನಮುಟ್ಟುವಂತೆ ಇದರಲ್ಲಿ ತೋರಿಸಿದ್ದಾರೆ. ನಾನು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕಲಾವಿದರು ಹಾಗೂ ತಂತ್ರಜ್ಞರು ಚಿತ್ರದ ಹಾಗೂ ತಮ್ಮ ಪಾತ್ರ ಮತ್ತು ಚಿತ್ರೀಕರಣದ ಅನುಭವಗಳನ್ನು ಹಂಚಿಕೊಂಡರು. ಸ್ವರಸಂಗಮ ಎಂಟರ್‌ಟೈನ್ಮೆಂಟ್ ಲಾಂಛನದಲ್ಲಿ ಆರ್.ಸುರೇಶ್‌ಬಾಬು ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ವೈಶಂಪಾಯನ ತೀರ ಸಿನಿಮಾದಲ್ಲಿ ವೈಜಯಂತಿ ಅಡಿಗ ನಾಯಕಿಯಾಗಿ ನಟಿಸಿದ್ದು, ಉಳಿದಂತೆ ಪ್ರಮೋದ್ ಶೆಟ್ಟಿ, ಬಾಬು ಹಿರಣ್ಣಯ್ಯ, ರಮೇಶ್ ಪಂಡಿತ್, ರವೀಶ್ ಹೆಗಡೆ, ಪ್ರಸನ್ನ ಶೆಟ್ಟಿಗಾರ್, ಗುರುರಾಜ ಹೊಸಕೋಟೆ, ಶೃಂಗೇರಿ ರಾಮಣ್ಣ, ರವಿಕುಮಾರ್, ಸತೀಶ್ ಪೈ, ಸಂತೋಷ್ ಪೈ ಮೊದಲಾದವರು ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಹಾಡುಗಳಿಗೆ ಶ್ರೀನಿ ಕೊಪ್ಪ ಅವರು ಸಂಗೀತ ಸಂಯೋಜಿಸಿದ್ದು, ವಿನು ಮನಸು ಹಿನ್ನೆಲೆ ಸಂಗೀತ ನೀಡಿದ್ದಾರೆ. ಇನ್ನು, ಈ ಚಿತ್ರಕ್ಕೆ ಶಶೀರ ಶೃಂಗೇರಿ ಅವರ ಛಾಯಾಗ್ರಹಣ ಹಾಗೂ ಅವಿನಾಶ್ ಶೃಂಗೇರಿ ಅವರ ಸಂಕಲನವಿದೆ.

'ಸ್ಪೂಕಿ ಕಾಲೇಜ್'ನಲ್ಲಿ ಹಾರರ್ ಕಥಾನಕ!



ಕಾಲೇಜೊಂದರಲ್ಲಿ ನಡೆಯುವ ಸೈಕಲಾಜಿಕಲ್ ಹಾರರ್ ಕಥಾಹಂದರದೊಂದಿಗೆ ನಿರ್ಮಾಣವಾಗಿರುವ ಚಿತ್ರ 'ಸ್ಪೂಕಿ ಕಾಲೇಜ್'. ಇಂದಿನಿಂದ ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಈ ಚಿತ್ರದ ಟ್ರೈಲರ್ ಹಾಗೂ ಪ್ರಿ ರಿಲೀಸ್ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ದಿಯಾ ಖ್ಯಾತಿಯ ಖುಷಿ ಹಾಗೂ ವಿವೇಕ್ ಸಿಂಹ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ ಒದಗಿಸಿದ್ದಾರೆ. ಭರತ್ ನಿರ್ದೇಶನದ ಈ ಚಿತ್ರವನ್ನು ರಂಗಿತರಂಗ ಖ್ಯಾತಿಯ ನಿರ್ಮಾಪಕ ಹೆಚ್.ಕೆ. ಪ್ರಕಾಶ್ ನಿರ್ಮಿಸಿದ್ದಾರೆ. ನಿರ್ದೇಶಕ ಭರತ್ ಮಾತನಾಡುತ್ತಾ, ಸ್ಪೂಕಿ ಎಂದರೆ ಭಯ. ಕಾಲೇಜಿನಲ್ಲಿ ನಡೆಯುವ ಘಟನೆಗಳೇ ಭಯದ ವಾತಾವರಣ ಸೃಷ್ಟಿಸುವುದರಿಂದ ಚಿತ್ರಕ್ಕೆ ಸ್ಪೂಕಿ ಕಾಲೇಜ್ ಹೆಸರಿಟ್ಟಿದ್ದೇನೆ. ಧಾರವಾಡದ ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ ಕೆಸಿಡಿ ಕಾಲೇಜ್‌ನಲ್ಲಿ ನಮ್ಮ ಚಿತ್ರದ ಹೆಚ್ಚಿನ ಭಾಗದ ಚಿತ್ರೀಕರಣ ನಡೆಸಿದ್ದೇವೆ. ದಾಂಡೇಲಿ ಅಭಯಾರಣ್ಯದಲ್ಲೂ ಕ್ಲೈಮ್ಯಾಕ್ಸ್ ಚಿತ್ರೀಕರಣ ಮಾಡಿದ್ದೇವೆ. ವೀರಕೇಸರಿ ಚಿತ್ರದ ಮೆಲ್ಲುಸಿರೆ ಸವಿಗಾನ ಹಾಡನ್ನು ರೀಮಿಕ್ಸ್ ಮಾಡಿ ಬಳಸಿಕೊಳ್ಳಲಾಗಿದ್ದು ಅದರಲ್ಲಿ ಎಕ್ಲವ್ಯಾ ಬೆಡಗಿ ರೀಷ್ಮಾ ನಾಣಯ್ಯ ಹೆಜ್ಜೆ ಹಾಕಿದ್ದಾರೆ. ಅಜನೀಶ್ ಅವರ ಸಂಗೀತ ನಮ್ಮ ಚಿತ್ರದ ಮತ್ತೊಂದು ಹೈಲೆಟ್ ಎಂದು ಹೇಳಿದರು

ನಿರ್ಮಾಪಕ ಹೆಚ್.ಕೆ.ಪ್ರಕಾಶ್ ಮಾತನಾಡಿ, ಚಿತ್ರರಂಗದಲ್ಲಿ 7 ವರ್ಷ ಕಳೆದಿದ್ದೇನೆ. ನಮ್ಮ ಬ್ಯಾನರ್‌ನ 5ನೇ ಚಿತ್ರವಿದು. ನಾನು ರಾಜ್‌ಕುಮಾರ್ ಚಿತ್ರಗಳನ್ನೆ ನೋಡಿಕೊಂಡೇ ಬೆಳೆದವನು. ಅದೇ ನನ್ನನ್ನು ನಿರ್ಮಾಪಕನಾಗಿ ಮಾಡಿತು. ಭರತ್ ಅಂದುಕೊಂಡದ್ದಕ್ಕಿಂತ ಚೆನ್ನಾಗಿ ಸಿನಿಮಾ ಮಾಡಿದ್ದಾರೆ. ಕೋವಿಡ್ ಸಮಯದಲ್ಲಿ ಚಿತ್ರೀಕರಣ ಮಾಡಿದ್ದರಿಂದ ಬಜೆಟ್ ಸ್ವಲ್ಪ ಹೆಚ್ಚಾಯಿತು ಎಂದು ಹೇಳಿದರು.

ನಾಯಕ ವಿವೇಕ್‌ಸಿಂಹ ಮಾತನಾಡಿ ಚೂರಿಕಟ್ಟೆ ಚಿತ್ರದಿಂದ ನನ್ನ ಸಿನಿಜರ್ನಿ ಶುರುವಾಯಿತು. ಆನಂತರ ಪ್ರೀಮಿಯರ್ ಪದ್ಮಿನಿ ಚಿತ್ರದಲ್ಲಿ ಪ್ರಮುಖಪಾತ್ರ ಮಾಡಿದ್ದೆ, ಈ ಚಿತ್ರದಲ್ಲಿ ಕಾಲೇಜ್ ಹುಡುಗನಾಗಿ ಕಾಣಿಸಿಕೊಂಡಿದ್ದೇನೆ ಎಂದರು. ಎರಡು ವರ್ಷಗಳ ನಂತರ ನನ್ನ ಸಿನಿಮಾ ಬಿಡುಗಡೆಯಾಗುತ್ತಿದೆ. "ದಿಯಾ" ಚಿತ್ರದಲ್ಲಿ ಎಲ್ಲರನ್ನೂ ಅಳಿಸಿದ್ದೆ. ಈ ಚಿತ್ರದಲ್ಲಿ ಅಷ್ಟೇ ಭಯಪಡಿಸುತ್ತೇನೆ ಎಂದು ಹೇಳಿದರು. ಇನ್ನು ಈ ಚಿತ್ರದಲ್ಲಿ ನಟಿಸಿರುವ ರಘು ರಮಣಕೊಪ್ಪ, ಉಮೇಶ್ ಕಿನ್ನಳ್ಳಿ, ವಿಜಯ್ ಚೆಂಡೂರ್ ಶೃತಿ, ರಾವ್ ಮುಂತಾದ ಕಲಾವಿದರು ಹಾಗೂ ಛಾಯಾಗ್ರಾಹಕ ಮನೋಹರ್, ಜೋಶಿ ಹಾಗೂ ಅನೇಕ ತಂತ್ರಜ್ಞರು 'ಸ್ಪೂಕಿ ಕಾಲೇಜ್' ಕುರಿತು ಮಾತನಾಡಿದರು.

ಸಿನಿಪದಬಂಧ-456

ಉಮ್ಮತ್ತೂರು ಇಂದುಶೇಖರ್
ಮೊ.9880820462

1			2		■	3	4			5
	■	■		■	6	■		■	■	
	■	7								
8		■	■	■		■		■	■	
	■	9				■		■	10	
■	■		■	■	■	■	■	11	■	■
12		■	13	■	14				■	15
	■	■		■		■	■	■	16	
17							18		■	
	■	■		■		■		■	■	
19					■	20				

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ವಿಜೇತರು: ಎಂ.ತರುಣ್, S/O ಜೆ.ಮಾದೇಶ್, 1641-1, ತೆರಕಣಾಂಬಿ, ಗುಂಡ್ಲುಪೇಟೆ ತಾಲೂಕು, ಚಾಮರಾಜನಗರ ಜಿಲ್ಲೆ.

ಎಡದಿಂದ ಬಲಕ್ಕೆ

1 ವಿಧ್ಯಾರ್ಥಿಗಳ ಪಾಲಿಗೆ ಸುವರ್ಣ ದಿನಗಳು ಪಿಯುಸಿಯಲ್ಲಿದೆ 5
3. ಥ್ರಿಲ್ಲರ್ ಮಂಜು ಮತ್ತು ವೀರಪ್ಪನ್‌ಗೂ ಏನೀ ಸಂಬಂಧ! 5
7. ನಿರ್ದೇಶಕ ಈ.ಚನ್ನಿಗಪ್ಪನ ಬೆಟ್ಟದಲ್ಲಿ ಅಂಧಕಾರ ಆವರಿಸಿದೆ 9
8. ವಿಷ್ಣುವರ್ಧನ್ "ಒಡೆಯ" 2
9. ಅಂಬಿ ಮತ್ತು ಪ್ರಭಾಕರ್ ಬಾರಿಸಿದ ನಗಾರಿ 4
10. ಇವಳು ಯಾರು ಬಲ್ಲೆಯೇನು? ಗೀತೆಯ ಚಿತ್ರ 2
12. ಹ.ಸೂ. ರಾಜಶೇಖರ್ ನಿರ್ದೇಶನದಂತೆ ಯಾರೂ ಗುಂಪು ಸೇರಬೇಡಿ 2
14. ವಾತ್ಸಾಯನನ ಈ ಪುಸ್ತಕ ಪ್ರೀತಿಯ ತತ್ವಶಾಸ್ತ್ರ, ಬಯಕೆಯ ಪ್ರಚೋದನೆ ಹೊಂದಿದೆ 4
16. ಶಿವಣ್ಣ ಲಾಂಗು ಹಿಡಿದ ಸಾಧು 2
17. ಮುದ್ದು ರಂಗಯ್ಯ ಬಾರೋ ಎನ್ನಲು ಸಿದ್ದಲಿಂಗಯ್ಯ ಅವರ ಸುಂದರ ತಾಣ! 9
19.ಕನ್ನಡತಿ ಸೀರಿಯಲ್ ಹೀರೋನ ಚಿಕನ್ ಜೊತೆಗಿನ ಹುಳಿ ಅನ್ನ 5
20.ಇಲ್ಲೇ ಮೇಲಿನಿಂದ ಕೆಳಕ್ಕೆ 15 ರಲ್ಲಿರುವ ಹೂವಿನ ಬಣ್ಣ ಒಂದೇ ಆಗಿದೆ 5

ಸಿನಿ ಪದಬಂಧ 455ರ ಸರಿ ಉತ್ತರ

ಜೋ	ಡಿ	ಜ	ಡೆ	ಜ	ಮು	ನಾ	■	ಶ್ರೀ	ದೇ	ವಿ
ಸೈ	■	ಗ	■	■	ದು	■	■	■	■	ಜ
ಮ	■	ತ್	■	ಗ	ಡಿ	ಬಿ	ಡಿ	ಅ	ಳಿ	ಯ
ನ್	■	ಕಿ	■	■	ದ	■	ರ	■	■	ಶಾಂ
■	ಕೈ	ಲಾ	ಸ	■	ತಾ	■	ಶಿ	■	ಕ್ರಾಂ	ತಿ
■	■	ಡಿ	■	ಭಾ	ವ	ನಾ	■	ಕ	■	■
ರ	ಶ್ಮಿ	■	ಕ	■	ರೆ	■	ಕ	ನ್ನ	ಡಿ	■
ಥ	■	■	ಜ್ಜಾ	■	ಅ	■	■	ಡ	■	ಪ
ಸ	ವ	ತಿ	ಯ	ನೆ	ರ	ಳು	■	ದ	■	ರ
ಪ್ತ	■	■	■	■	ಳಿ	■	■	ಕಂ	■	ಸಂ
ಮಿ	ಲ	ನ	■	ಮಾ	ತು	ತ	ಪ್ಪ	ದ	ಮ	ಗ

ಮೇಲಿನಿಂದ ಕೆಳಕ್ಕೆ

1.ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಡಿಗ್ರಿ ಪಡೆದಾತ 5
2.ಆದಿ ಲೋಕೇಶ್ "ಉಪಾಸಕ" 3
4.ಉಪೇಂದ್ರ ಸುರಿಸಿದ ಅಶ್ರು 5
5.ಹೇಮಂತ್ ರಾವ್ ನಿರ್ದೇಶನದ ಸಸ್ಪೆನ್ಸ್ ,ಥ್ರಿಲ್ಲರ್ ಚಿತ್ರ 5
6.ರಾಧಿಕಾ ಪಂಡಿತ್‌ಗಾಗಿ ಒಂದೆಡೆ ನಿಲ್ಲದೆ ತಿರುಗಿದವನು 4
9.ತನನಂ ತನನಂ ಎಂದವಳು 2
11." ಜಿಂಕೆ ಮರಿ ಒಡ್ತೈತೆ ನೋಡ್ಲಾ ಮಗ ....", ಹಾಡಿನ ಸಿನಿಮಾ 2
12.ಪುಟ್ಟಣ್ಣ ಕಣಗಾಲ್ ಅವರ ಬ್ಲಾಕ್ ಅಂಡ್ ವೈಟ್ ಚಿತ್ರಕ್ಕೆ ಕಲ್ಪನಾ ಅಭಿನಯವಿದೆ 5
13.ಬಿಸಿಲ ನಾಡಿನಿಂದ ಬುಷ್ ಎಂದು ಬಂದವನು 5
14. ಕೋಡ್ಲು ರಾಮಕೃಷ್ಣನ ದೀರ್ಘಕತೆ 4
15.ಇಲ್ಲೇ ಎಡದಿಂದ ಬಲಕ್ಕೆ 20 ರಲ್ಲಿರುವ ಹೂವಿನ ಬಣ್ಣ ಒಂದೇ ಆಗಿದೆ 5
18.ಮಧ್ಯವರ್ತಿ 3

ನಾಲೆ ಅಭಿವೃದ್ಧಿ ಕಾಮಗಾರಿಗೆ ಸಾರಾ ಚಾಲನೆ



ಚುಂಚನಕಟ್ಟೆ, ಜ.5– ರೈತರ ಜಮೀನುಗಳಿಗೆ ನೀರಾವರಿ ಕಲ್ಪಿಸುವ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಇದರಲ್ಲಿ ಲೋಪ ಕಂಡು ಬಂದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಸಾ.ರಾ.ಮಹೇಶ್ ಎಚ್ಚರಿಕೆ ನೀಡಿದರು.

ಸಾಲಿಗ್ರಾಮ ತಾಲೂಕಿನ ಮಾಳನಾಯಕನಹಳ್ಳಿ ಸಮೀಪ ನೀರಾವರಿ ಇಲಾಖೆ ವತಿಯಿಂದ 5 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಮಿರ್ಲೆ ಶ್ರೇಣಿ ಅಡಿ ಬರುವ ಶಾಖಾ ಕಾಲುವೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕಾಮಗಾರಿ ವೇಳೆ ಇಲಾಖೆ ತಯಾರಿಸಿದ ಅಂದಾಜು ಪಟ್ಟಿಯಲ್ಲಿರುವಂತೆ ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು. ಜೊತೆಗೆ ರೈತರ ಸಲಹೆ ಪಡೆದು ಕಾಮಗಾರಿ ನಡೆಸಿ ನಾಲೆ ಕೊನೆ ಭಾಗಕ್ಕೆ ನೀರು ತಲುಪಿಸುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ ಎಂದರು.

ಈಗಾಗಲೇ ಸುಮಾರು 300 ಕೋಟಿ ವೆಚ್ಚದಲ್ಲಿ ಕ್ಷೇತ್ರ ವ್ಯಾಪ್ತಿಯ ಕಟ್ಟೆಪುರ, ಹಾಮರಾಜ, ರಾಮಸಮುದ್ರ ಸೇರಿದಂತೆ ಇನ್ನಿತರ ನಾಲೆಗಳನ್ನು ಆಧುನೀಕರಣ ಮಾಡಲಾಗಿದ್ದು, ಈ ಮೂಲಕ ಶಾಶ್ವತ ನೀರಾವರಿ ಸೌಲಭ್ಯ ಕಲ್ಪಿಸಿ ಕೊಡಲಾಗಿದೆ ಎಂದರು.

ಈ ವೇಳೆ ನಾಲೆ ಅಭಿವೃದ್ಧಿಗೆ ಸಹಕರಿಸಿದ ಶಾಸಕ ಸಾ.ರಾ.ಮಹೇಶ್ ಅವರನ್ನು ರೈತರು ಸನ್ಮಾನಿಸಿದರು. ಬಳಿಕ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಈ ಸಂದರ್ಭ ಸಾಲಿಗ್ರಾಮ ಹಾರಂಗಿ ವಿಭಾಗದ ಇಇ ಈರಣ್ಣ, ಎಇಇ ಗುರುರಾಜು, ಇಂಜಿನಿಯರ್ ಕಿರಣ್, ಉಪ ತಹಸೀಲ್ದಾರ್ ಆರ್.ಎ.ಮಹೇಶ್, ಆರ್‌ಐ ಹೇಮಂತ್, ವಿಎ ಸಂತೋಷ್, ಪಿಡಿಓಗಳಾದ ಚಂದ್ರಶೇಖರ್, ಸುನೀಲ್, ತಾಪಂ ಮಾಜಿ ಸದಸ್ಯ ಶೋಭಾ, ಕುಪ್ಪೆ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಮಿರ್ಲೆ ಗ್ರಾಪಂ ಅಧ್ಯಕ್ಷೆ ನೇತ್ರ, ಮಾಜಿ ಅಧ್ಯಕ್ಷ ಮಹದೇವ, ಸದಸ್ಯರಾದ ಬಾಲು, ಅರುಣ್‌ಕುಮಾರ್, ಮುಖಂಡರಾದ ಧನಂಜಯ, ಲೋಕಿ, ಪ್ರವೀಣ, ಕಾಂತ, ಬಾಲು, ಮಧು, ಚಿದಾನಂದ್, ಅಶೋಕ್, ರೈತ ಮನೋಹರ್, ಸುರೇಶ, ಸುಭಾಷ್ ನಾಯಕ, ಚೆಲುವೇಗೌಡ, ಅಣ್ಣಪ್ಪ, ಹಳಿಯೂರು ಬಡಾವಣೆ ಡೈರಿ ಅಧ್ಯಕ್ಷ ಕೃಷ್ಣಮೂರ್ತಿ, ಮಿರ್ಲೆ ಸೊಸೈಟಿ ಮಾಜಿ ಅಧ್ಯಕ್ಷ ಅರವಿಂದ್, ಮುರುಳಿ, ಜೆಡಿಎಸ್ ಉಪಾಧ್ಯಕ್ಷ ತುಕಾರಾಂ, ಈರಣ್ಣ, ಅಣ್ಣಪ್ಪ, ಮನು, ಕರಿಯಪ್ಪ, ಸೇರಿದಂತೆ ಮತ್ತಿತರರಿದ್ದರು.

ಚುಂಚನಕಟ್ಟೆ ಜಾನುವಾರು ಜಾತ್ರೆ ರದ್ದು

ಚುಂಚನಕಟ್ಟೆ: ಸಾಲಿಗ್ರಾಮ ತಾಲೂಕಿನ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಜಾನುವಾರು ಜಾತ್ರೆಯನ್ನು ರದ್ದುಪಡಿಸಲಾಗಿದ್ದು, ರೈತರು ಜಾತ್ರೆ ಕಟ್ಟಬಾರದು ಎಂದು ಶಾಸಕ ಸಾ.ರಾ.ಮಹೇಶ್ ಮನವಿ ಮಾಡಿದರು.

ಗುದ್ದಲಿ ಪೂಜೆ ವೇಳೆ ರೈತರು ಜಾತ್ರೆ ಕಟ್ಟಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಚರ್ಮಗಂಟು ರೋಗ ವ್ಯಾಪಕವಾಗಿ ಹರಡುತ್ತಿರುವುದರಿಂದ ಸರ್ಕಾರದ ಸೂಚನೆ ಮೇರೆಗೆ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಹೀಗಾಗಿ ಜಾತ್ರೆ ಕಟ್ಟದಂತೆ ತಿಳಿಸಿದರು.

ಇದಕ್ಕೆ ರೈತರು ಆಕ್ಷೇಪ ವ್ಯಕ್ತಪಡಿಸಿ ಚನ್ನರಾಯಪಟ್ಟಣದಲ್ಲಿ ಜಾತ್ರೆಗೆ ಅವಕಾಶ ನೀಡಲಾಗಿದೆ ಎಂದಾಗ ಅಲ್ಲಿನ ಶಾಸಕ ಬಾಲಕೃಷ್ಣ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಜಾತ್ರೆ ಕುರಿತು ಮಾಹಿತಿ ಕೇಳಲಾಗಿ ನಮ್ಮಲ್ಲಿಯೂ ಜ.22 ರವರೆಗೆ ಜಾತ್ರೆ ರದ್ದು ಪಡಿಸಲಾಗಿದೆ ಎಂದರು.

ರಾಜ್ಯದಲ್ಲಿ ಎಲ್ಲಾದರು ಜಾನುವಾರು ಜಾತ್ರೆ ನಡೆಸಲು ಅವಕಾಶ ಕೊಟ್ಟರೆ ಚುಂಚನಕಟ್ಟೆಯಲ್ಲಿ ನಾನೇ ನಿಂತು ಜಾತ್ರೆ ಕಟ್ಟಿಸುವೆ ಎಂದು ಭರವಸೆ ನೀಡಿದರು.

ಕೋಟೆಯಲ್ಲಿ ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘ ಉದ್ಘಾಟನೆ



ಹೆಚ್.ಡಿ.ಕೋಟೆ, ಜ.5– ಜನರಿಗೆ ಸಮರ್ಪಕವಾಗಿ ಪಡಿತರ ವಿತರಿಸುವಲ್ಲಿ ನ್ಯಾಯಬೆಲೆ ಅಂಗಡಿ ಮಾಲೀಕರ ಪಾತ್ರ ಮಹತ್ವದ್ದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ತಾಪಂ ಸಭಾಂಗದಲ್ಲಿ ಹೆಚ್.ಡಿ.ಕೋಟೆ ತಾಲೂಕು ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದಿಂದ ನೀಡುವ ಪಡಿತರವನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕಾರ್ಯ ತಮ್ಮಿಂದ ಆಗಿದೆ. ಹಾಗಾಗಿ ನಾನು ಈ ವಿಚಾರದಲ್ಲಿ ಯಾವುದೇ ಹಸ್ತಕ್ಷೇಪ ಮಾಡಿಲ್ಲ ಎಂದರು.

ನ್ಯಾಯಬೆಲೆ ಅಂಗಡಿ ಮಾಲೀಕರ ವಯಸ್ಸು ಮೀರಿದ ಬಳಿಕ ಅವರ ಕುಟುಂಬದವರಿಗೆ ಅಂಗಡಿ ನಡೆಸಲು ಅವಕಾಶ ನೀಡಬೇಕೆಂಬ ನಿಮ್ಮ ಮನವಿಯನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಸರ್ಕಾರದ ಯಾವುದೇ ಸೌಲಭ್ಯ ಪಡೆಯಲು ಸಂಘ ಸಂಸ್ಥೆಗಳ ಮೂಲಕ ಒಗ್ಗೂಡಿದಾಗ ಮಾತ್ರ ಸಾಧ್ಯ ಎಂದ ಅವರು ಸಂಘದ ಕಚೇರಿಗಾಗಿ ನಿವೇಶನ ಕೇಳಿದ್ದಿರಾ ತಾಲೂಕು ಆಡಳಿತದೊಂದಿಗೆ ಮಾತನಾಡಿ ಕೊಡಿಸುವುದಾಗಿ ತಿಳಿಸಿದರು.

ಈ ವೇಳೆ ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷ ಬಿ.ವಿ.ಬಸವರಾಜು, ಮಾಜಿ ಅಧ್ಯಕ್ಷರಾದ ಆರ್.ಪಿ.ಉಮೇಶ್, ಪಟೇಲ್ ರಾಜೇಗೌಡ, ಉಪಾಧ್ಯಕ್ಷ ಸುರೇಶ್, ಕಾರ್ಯದರ್ಶಿ ಫಾಜಿಲ್, ಸದಸ್ಯರಾದ ಸೋಮೇಶ್, ಈರೇಗೌಡ, ಮಹದೇವಪ್ಪ, ಸದಾಶಿವು, ಸಂತೋಷ್, ಲಿಂಗರಾಜು, ಪ್ರಸಾದ್, ಗಿರಿಗೌಡ, ಮಲ್ಲಪ್ಪ ಇದ್ದರು.

ವಿವಿಧೆಡೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ತಿ.ನರಸೀಪುರ, ಜ.5– ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದರೂ ಹೆಚ್ಚಿನ ಅನುದಾನ ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗಿದ್ದು, ಮುಂದಿನ ಅವಧಿಯಲ್ಲಿ ಗ್ರಾಮಗಳು ಅಭಿವೃದ್ಧಿ ಪರ್ವ ಕಾಣಲಿವೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ವರುಣಾ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ರಸ್ತೆ, ಚರಂಡಿ, ಕಾಲುವೆ ಮತ್ತು ಶಾಲಾ ಕೊಠಡಿಗಳ ನಿರ್ಮಾಣ ಸೇರಿದಂತೆ 1.7 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಇದೇ ವೇಳೆ ಶಾಸಕರು ಕೆಆರ್‌ಐಡಿಎಲ್ ವತಿಯಿಂದ ಹುನುಗನಹಳ್ಳಿ ಹಾಗೂ ರಂಗ ಸಮುದ್ರದಲ್ಲಿ ತಲಾ 20 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ, ಕುಪ್ಯಾದಲ್ಲಿ 5 ಲಕ್ಷ ರೂ. ವೆಚ್ಚದ ಆಸ್ಪತ್ರೆ ಪಾರ್ಕಿಂಗ್, ತುಂಬಲದಲ್ಲಿ 25 ಲಕ್ಷ, ಹಿಟ್ಟುವಳ್ಳಿಯಲ್ಲಿ 10 ಲಕ್ಷ ಮತ್ತು ಪಟ್ಟೇಹುಂಡಿಯಲ್ಲಿ 10 ಲಕ್ಷ ರೂ. ವೆಚ್ಚದ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು. ಅಲ್ಲದೇ ಕಾವೇರಿ ನೀರಾವರಿ ನಿಗಮದಡಿ ಮಾದೇಗೌಡನಹುಂಡಿ ಹಾಗೂ ರಂಗನಾಥಪುರಹುಂಡಿಯಲ್ಲಿ 30 ಲಕ್ಷ ವೆಚ್ಚದಲ್ಲಿ ಕಾಲುವೆ ಏರಿ ರಸ್ತೆ ಅಭಿವೃದ್ಧಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವೇಕಾ ಶಾಲಾ ಯೋಜನೆಯಡಿ ಕುಪ್ಯ, ಇಂಡವಾಳು ಹಾಗೂ ರಾಮನಾಥಪುರ ಹುಂಡಿ ಗ್ರಾಮಗಳಲ್ಲಿ ತಲಾ 15 ಲಕ್ಷ ರೂ. ವೆಚ್ಚದಲ್ಲಿ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಈ ವೇಳೆ ಮಾಜಿ ಜಿಪಂ ಸದಸ್ಯ ಕೆ.ಮಹದೇವ, ಪುರಸಭಾಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ರಂಗಸಮುದ್ರ ಗ್ರಾಪಂ ಅಧ್ಯಕ್ಷೆ ಸೌಮ್ಯ, ಉಪಾಧ್ಯಕ್ಷ ನಾರಾಯಣ, ಕುಪ್ಯಾ ಗ್ರಾಪಂ ಅಧ್ಯಕ್ಷ ರಾಘವೇಂದ್ರ, ತುಂಬಲ ಗ್ರಾಪಂ ಅಧ್ಯಕ್ಷೆ ಸುಲೋಚನಾ, ಗ್ರಾಪಂ ಸದಸ್ಯರಾದ ಕುಪ್ಯಾ ಭಾಗ್ಯಮ್ಮ, ಗೋವಿಂದ, ತುಂಬಲ ಗ್ರಾಪಂ ಮಾಜಿ ಉಪಾಧ್ಯಕ್ಷ ಚಂದ್ರಶೇಖರ್, ಸದಸ್ಯರಾದ ಕಂಬಯ್ಯ, ನಿಂಗಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್‌ಕುಮಾರ್, ಸಿದ್ದರಾಮಯ್ಯ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಉದಯ್, ವರುಣಾ ಪಿಎಸಿಎಸ್ ಅಧ್ಯಕ್ಷ ಮಹೇಶ್, ನಾಗೇಶ್, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಪುರಸಭೆ ಮಾಜಿ ಅಧ್ಯಕ್ಷ ಸೋಮು, ಪುರಸಭೆ ಸದಸ್ಯರಾದ ನಾಗರಾಜು, ಬಾದಾಮಿ ಮಂಜು, ತುಂಬಲ ಪ್ರಕಾಶ್, ಅಮ್ಜದ್ ಖಾನ್, ತಾಪಂ ಸದಸ್ಯ ರಮೇಶ, ಮುಖಂಡರಾದ ಪ್ರಶಾಂತ್ ಬಾಬು, ಕಲ್ಪನಾ, ಅಮಾವಾಸ್ಯೆಗೌಡ, ಅಧಿಕಾರಿಗಳಾದ ಎಇಇ ಚೆಂಗಪ್ಪ, ಲಕ್ಷ್ಮಣರಾವ್, ಎಇ ರಾಜುನಾಯ್ಕ, ದಿಲೀಪ್ ಕುಮಾರ್, ಸಂದೇಶ್, ಆಕರ್ಷ, ಭಾನು, ಅನುಷಾ, ಪಿಡಿಒಗಳಾದ ರಾಜಣ್ಣ, ಧನಂಜಯ, ವೃಷಭೇಂದ್ರ, ಗುತ್ತಿಗೆದಾರರ ಮಂಟೇಲಿಂಗಪ್ಪ, ವಿ.ಸಿ.ಬಸವಣ್ಣ, ಲೋಕೇಶ್ ಹಾಜರಿದ್ದರು.

ಅಕ್ರಮ ದಾಸ್ತಾನು: 135 ಚೀಲ ಯೂರಿಯಾ ವಶ



ನಂಜನಗೂಡು, ಜ.5– ಕಾರ್ಖಾನೆಯೊಂದರಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 135 ಚೀಲ ಯೂರಿಯಾ ರಸಗೊಬ್ಬರವನ್ನು ಕೃಷಿ ಹಾಗೂ ಪೊಲೀಸ್ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹರ್ಷ ಇಂಪೆಕ್ಸ್ ಕಾರ್ಖಾನೆಯಲ್ಲಿ ಯೂರಿಯಾವನ್ನು ಅಕ್ರಮವಾಗಿ ದಾಸ್ತಾನು ಮಾಡಿ ಪ್ಲೈವುಡ್ ಗಮ್ ತಯಾರಿಕೆಗಾಗಿ ಬಳಸಲಾಗುತ್ತಿತ್ತು. ಖಚಿತ ಮಾಹಿತಿ ಮೇರೆಗೆ ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್. ವಿದ್ಯಾಸಾಗರ್, ಪ್ರಧಾನ ಕಾರ್ಯದರ್ಶಿ ಇಮ್ಮಾವು ರಘು ಕಾರ್ಖಾನೆಗೆ ತೆರಳಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ಸಬ್ಸಿಡಿ ರಸಗೊಬ್ಬರ ಕಂಡು ಪೊಲೀಸರು ಮತ್ತು ಕೃಷಿ ಇಲಾಖೆ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಕೃಷಿ ಇಲಾಖೆ ಮತ್ತು ಪೊಲೀಸರು ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ 135 ಚೀಲ ಸಬ್ಸಿಡಿ ಯೂರಿಯಾ ರಸಗೊಬ್ಬರವನ್ನು ವಶಕ್ಕೆ ಪಡೆದಿದ್ದಾರೆ.

ಕೃಷಿ ಸಹಾಯಕ ನಿರ್ದೇಶಕ ದೀಪಕ್ ಮಾತನಾಡಿ, ರೈತ ಸಂಘದ ಪದಾಧಿಕಾರಿಗಳ ಮಾಹಿತಿ ಮೇರೆಗೆ ಹರ್ಷ ಇಂಪೆಕ್ಸ್ ಕಾರ್ಖಾನೆ ಮೇಲೆ ದಾಳಿ ನಡೆಸಿದಾಗ 47 ಕೆಜಿ ತೂಕದ 135 ಚೀಲಗಳಲ್ಲಿ ಅಕ್ರಮವಾಗಿ ಸಬ್ಸಿಡಿ ಯುರಿಯಾ ರಸಗೊಬ್ಬರ ದಾಸ್ತಾನು ಮಾಡಲಾಗಿತ್ತು. ಚೀಲಗಳ ಮೇಲೆ ಸಬ್ಸಿಡಿ ಯೂರಿಯಾ ರಸಗೊಬ್ಬರವೆಂಬುದಾಗಿ ಮತ್ತು ಕೃಷಿ ಉಪಯೋಗಕ್ಕೆ ಮಾತ್ರ ಎಂಬುದಾಗಿ ನಮೂದಾಗಿತ್ತು. ಈ ಅಕ್ರಮ ದಾಸ್ತಾನನ್ನು ವಶಕ್ಕೆ ಪಡೆದು ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ. ವಶಕ್ಕೆ ಪಡೆಯಲಾದ ದಾಸ್ತಾನಿನ ಯೂರಿಯಾ ಮಾದರಿಯನ್ನು ಸಂಗ್ರಹಿಸಿ ಪರಿಶೀಲನೆಗಾಗಿ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ ಎಂದರು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದ್ದು, ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ತನಿಖೆ ಕೈಗೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ತಹಸೀಲ್ದಾರ್ ಶಿವಮೂರ್ತಿ, ಉಪ ತಹಸೀಲ್ದಾರ್ ಪ್ರಶಾಂತ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್, ಸತೀಶ್ ರಾವ್, ಇಮ್ಮಾವು ರಘು ಇತರರಿದ್ದರು.

ಇಂದು ಬಿ.ಹರ್ಷವರ್ಧನ್ ಜನ್ಮದಿನ ಸಂಭ್ರಮ

ನಂಜನಗೂಡು ಅಭಿವೃದ್ಧಿಯಲ್ಲಿ ಮೈಲಿಗಲ್ಲು



ನಂಜನಗೂಡು, ಜ.5– ನಂಜನಗೂಡಿನ ಅಭಿವೃದ್ಧಿ ಹರಿಕಾರ, ಸಮಾಜ ಸುಧಾರಣೆಯ ಕನಸುಗಾರ ಹಾಗೂ ಮಾನವೀಯ ಮೌಲ್ಯಗಳೊಂದಿಗೆ ಬದುಕುವ ಅಪರೂಪದ ರಾಜಕಾರಣಿ ಯುವ ಉತ್ಸಾಹಿ ಜನನಾಯಕ ಶಾಸಕ ಬಿ.ಹರ್ಷವರ್ಧನ್.

ಶಾಸಕರಾಗಿ ಕ್ಷೇತ್ರದ ಸಮಗ್ರ ಅಭಿವೃದ್ಧಿ ಕೈಗೊಂಡಿರುವ ಶಾಸಕರು, ಪ್ರಧಾನಿ ಮೋದಿಯವರ ಸ್ವಚ್ಛ ಭಾರತ್ ಪರಿಕಲ್ಪನೆಯಡಿ ನೂರಾರು ಗ್ರಾಮಗಳಲ್ಲಿ ರಸ್ತೆ ಚರಂಡಿ, ಸೇತುವೆ ನಿರ್ಮಾಣ, ಪಾರ್ಕ್ ನಿರ್ಮಾಣ, ಸಮುದಾಯ ಭವನಗಳ ನಿರ್ಮಾಣ, ಪಶು ಚಿಕಿತ್ಸಾಲಯ, ಅಂಗನವಾಡಿ ಮತ್ತು ಶಾಲಾ ಕೊಠಡಿಗಳ ನಿರ್ಮಾಣ ಮಾಡಿದ್ದಾರೆ. ಇನ್ನೂ ಬಹುತೇಕ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸಂಸದ ವಿ.ಶ್ರೀನಿವಾಸಪ್ರಸಾದ್ ಶಾಸಕರಾಗಿದ್ದ ವೇಳೆ ನೆನೆಗುದಿಗೆ ಬಿದ್ದಿದ್ದ ಹಲವು ಯೋಜನೆಗಳನ್ನು ಪುನಶ್ಚೇತನಗೊಳಿಸಿದ್ದಾರೆ.

ತಾಲೂಕಿನಲ್ಲಿ ಕಳೆದ 38 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ನುಗು ಏತ ನೀರಾವರಿ, ಹೆಡಿಯಾಲ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಗಳನ್ನು ಜಾರಿಗೊಳಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಚಾಲನೆ ನೀಡಿ ಸಾವಿರಾರು ರೈತರಿಗೆ ನೆರವಾಗಿದ್ದಾರೆ. ಅಲ್ಲದೇ ಶ್ರೀಕಂಠೇಶ್ವರ ದೇವಾಲಯದಲ್ಲಿ 3 ಕೋಟಿ ವೆಚ್ಚದ ಬೆಳ್ಳಿರಥ, ಭಕ್ತರ ಅನುಕೂಲಕ್ಕಾಗಿ 75 ಹಾಸಿಗೆಯುಳ್ಳ ಸಂಕೀರ್ಣ ಕಾಮಗಾರಿಗೂ ಚಾಲನೆ ನೀಡಿದ್ದು, ಕಪಿಲಾ ನದಿ ಸ್ವಚ್ಛತೆಗೆ ವಿಶೇಷ ಯೋಜನೆ ರೂಪಿಸಿದ್ದಾರೆ. ಶ್ರೀರಾಘವೇಂದ್ರಸ್ವಾಮಿ ಮೂಲಮಠ ಅಭಿವೃದ್ಧಿಗೆ 2.5 ಕೋಟಿ ವಿಶೇಷ ಅನುದಾನ ನೀಡುವ ಜೊತೆಗೆ ಕಪಿಲಾ ನದಿ ಪ್ರವಾಹದಿಂದ ಆಗುವ ಅನಾಹುತ ತಪ್ಪಿಸಲು ಬೃಹತ್ ಶಾಶ್ವತ ತಡೆಗೋಡೆ ನಿರ್ಮಾಣ ಯೋಜನೆ ರೂಪಿಸಿ ಸರ್ಕಾರದ ಗಮನ ಸೆಳೆದಿದ್ದಾರೆ. ಅಲ್ಲದೇ 28 ನಿರಾಶ್ರಿತ ಬಡ ಪೌರಕಾರ್ಮಿಕರ ಕುಟುಂಬಗಳಿಗೆ ಶಾಶ್ವತ ಸೂರು ಕಲ್ಪಿಸಿ ಆಶ್ರಯದಾತರಾಗಿದ್ದಾರೆ.

ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ ಎಂಬ ಹಾದಿಯಲ್ಲಿ ಸಾಗುತ್ತಿರುವ ಹರ್ಷವರ್ಧನ್ ಕಳೆದ ನಾಲ್ಕೂವರೆ ವರ್ಷದಲ್ಲಿ 700 ಕೋಟಿ ರೂ.ಗಳಿಗೂ ಹೆಚ್ಚು ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಕೊರೊನಾ ಸಂದರ್ಭ ಕ್ಷೇತ್ರದ ಜನರ ಕಷ್ಟಗಳಿಗೆ ಸ್ಪಂದಿಸಿರುವ ಹರ್ಷವರ್ಧನ್ ಮುಂಬರುವ ದಿನಗಳಲ್ಲಿ ಅಭಿವೃದ್ಧಿ ಮೂಲಕ ಮಾಜಿ ಸಚಿವ ಬಿ.ಬಸವಲಿಂಗಪ್ಪ ಹಾಗೂ ವಿ.ಶ್ರೀನಿವಾಸ್ ಪ್ರಸಾದ್ ಹಾದಿಯಲ್ಲಿ ಸಾಗಿ ಜನರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಲಿ ಎಂಬುದೇ ನಮ್ಮ ಆಶಯ.



ಮೂಗೂರಿನ ಶ್ರೀತ್ರಿಪುರ ಸುಂದರಿ ಅಮ್ಮನವರ ನೂತನ ರುದ್ರಾಕ್ಷಿ ಮಂಟಪವನ್ನು ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ದೇಗುಲದ ಆವರಣದಲ್ಲಿ ಗುರುವಾರ ಪುಷ್ಪಾರ್ಚನೆ ಮಾಡುವ ಮೂಲಕ ಲೋಕಾರ್ಪಣೆ ಮಾಡಿದರು. ಈ ವೇಳೆ ಗೌಡರ ಎಂ.ಪಿ.ನಾಗರಾಜು, ಹಿರಿಯ ಮುಖಂಡರಾದ ಎಂ.ಪಿ.ಪುಟ್ಟಸ್ವಾಮಿ, ಬಸವಣ್ಣ, ಸುನಂದಮ್ಮ, ಅರ್ಚಕರಾದ ರವಿ, ಶಿಲ್ಪಿ ಪ್ರಕಾಶ್ ಆಚಾರ್ಯ, ಕೆಂಪಣ್ಣ, ವಿಜಯ್ ಕುಮಾರ್, ಅನುಶ್ರೀ, ಅಭಿಷೇಕ್, ಎಂ.ಬಿ.ಬಾಬು, ಪಿಎಸಿಎಸ್ ಅಧ್ಯಕ್ಷ ಮಹೇಂದ್ರ ಕುಮಾರ್ ನಂದರಾಜು, ನಿಜಗುಣ, ಮಹದೇವಪ್ಪ ಇನ್ನಿತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ನಂಜನಗೂಡು, ಜ.5– ಹುರಾ, ಹಲ್ಲಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಜ.7ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 3ರವರೆಗೆ ಹುರಾ, ಹಾಡ್ಯ, ಹಲ್ಲರೆ, ದೇವರಾಯಶೆಟ್ಟಿಪುರ ಮತ್ತು ಹೆಡಿಯಾಲ ಗ್ರಾಮಗಳು, ಗ್ರಾಪಂ ವ್ಯಾಪ್ತಿಯ ಪ್ರದೇಶಗಳು. ನೆಲ್ಲಿತಾಳಪುರ, ಕುರಿಹುಂಡಿ, ಹರದನಹಳ್ಳಿ ಮತ್ತು ದುಗ್ಗಳ್ಳಿ ಗ್ರಾಮಗಳು/ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರದೇಶಗಳು. ಹುಲ್ಲಹಳ್ಳಿ, ಶಿರಮಳ್ಳಿ, ಹಗಿನವಾಳು, ರಾಂಪುರ, ಹೆಗ್ಗಡಹಳ್ಳಿ, ದುಗ್ಗಳ್ಳಿ ಮತ್ತು ಹುಸ್ಕೂರು, ಕುರಿಹುಂಡಿ, ಯಾಲಹಳ್ಳಿ, ವಳಗೆರೆ, ಹರತಲೆ, ಮೊಬ್ಬಳ್ಳಿ, ಗಾಂಧಿ ಗ್ರಾಮ, ಬ್ಯಾಳಾರು, ಮಾದಪುರ, ಕಾರ್ಯ ಗ್ರಾಮ ಪಂಚಾಯ್ತಿ, ಗ್ರಾಮಗಳು ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯಗೊಳ್ಳಲಿದೆ.

ನಂದೀಪುರದಲ್ಲಿ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ



ಪಿರಿಯಾಪಟ್ಟಣ, ಜ.5–ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಕರ್ತರು ಕ್ಷೇತ್ರದ ಮನೆ ಮನೆಗೆ ತಲುಪಿಸುವ ಮೂಲಕ ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಕರೆ ನೀಡಿದರು.

ತಾಲೂಕಿನ ನಂದೀಪುರದಲ್ಲಿ ನಡೆದ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ರಾಜ್ಯ ಬಿಜೆಪಿ ಉಪಾಧ್ಯಕ್ಷ ರಾಜೇಂದ್ರ, ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್ ಮಾತನಾಡಿದರು. ಈ ವೇಳೆ ಮುಖಂಡರಾದ ಪರೀಕ್ಷಿತ್ ರಾಜೇ ಅರಸ್, ಸೋಮಶೇಖರ್, ವಸಂತ್, ಶಶಿ, ನಳಿನಿಗೌಡ ಸೇರಿದಂತೆ ನೂರಾರು ಕಾರ್ಯಕರ್ತರು ಹಾಜರಿದ್ದರು.

ಬಿಜೆಪಿ ಸರ್ಕಾರಗಳಿಂದ ಪ.ಜಾತಿ, ಪ.ವರ್ಗ ತುಳಿಯುವ ಹುನ್ನಾರ

ತಿ.ನರಸೀಪುರ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಸುನೀಲ್ ಬೋಸ್ ಆರೋಪ



ತಿ.ನರಸೀಪುರ ಜ.5– ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗೀಕರಣ ನೆಪದಲ್ಲಿ ಉದ್ಯಮಿಗಳಿಗೆ ಮಾರಾಟ ಮಾಡುವ ಮೂಲಕ ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಶೋಷಿತ ಸಮುದಾಯಗಳ ಬದುಕನ್ನು ಕಿತ್ತುಕೊಂಡು, ಪರಿಶಿಷ್ಟ ಜಾತಿ ಮತ್ತು ಪವರ್ಗಗಳ ಜನರನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ತುಳಿಯುವ ಹುನ್ನಾರ ನಡೆಸುತ್ತಿವೆ ಎಂದು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಸುನೀಲ್ ಬೋಸ್ ಆರೋಪಿಸಿದರು.

ಜ.8ರಂದು ಚಿತ್ರದುರ್ಗದಲ್ಲಿ ಪ.ಜಾತಿ ಮತ್ತು ಪ.ವರ್ಗಗಳ ಬೃಹತ್ ಸಮಾವೇಶ ನಡೆಯುವ ಹಿನ್ನೆಲೆಯಲ್ಲಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಸ್ಸಿ/ಎಸ್ಟಿ ಸಮುದಾಯಗಳ ಅಭಿವೃದ್ಧಿ ಯೋಜನೆಗಳು ಜಾರಿಯಾಗಲಿಲ್ಲ. ಜನಪರ ಕಾರ್ಯಕ್ರಮಗಳು ಮರೀಚಿಕೆಯಾದವು ಎಂದು ದೂರಿದರು.

ಎಲ್ಲಾ ಧರ್ಮ ಮತ್ತು ಸಮುದಾಯಗಳಿಗೆ ಸಾಮಾಜಿಕ ನ್ಯಾಯದಡಿ ಅವಕಾಶ ನೀಡುವ ಕಾಂಗ್ರೆಸ್ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಭರವಸೆಯ ರಾಜಕೀಯ ಪಕ್ಷವಾಗಿದೆ. ಪರಿಶಿಷ್ಟರ ಸಣ್ಣಪುಟ್ಟ ಉಪ ಸಮುದಾಯಗಳಿಗೂ ರಾಜಕೀಯ ಅಧಿಕಾರ ಸಿಗುವುದು ಕಾಂಗ್ರೆಸ್‌ನಲ್ಲಿ ಮಾತ್ರ. ಹಾಗಾಗಿ ಮುಂಬರುವ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲು ಈಗಿನಿಂದಲೇ ಸಂಘಟಿತರಾಗೋಣ. ಸಮಾವೇಶದಲ್ಲಿ ಕಾರ್ಯಕರ್ತರು ಮತ್ತು ಮುಖಂಡರು ಭಾಗವಹಿಸಬೇಕು, ಜೊತೆಗೆ ಜನರನ್ನು ಕರೆದೊಯ್ಯಬೇಕು ಎಂದು ಸುನೀಲ್ ಬೋಸ್ ಕರೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿದರು. ಜಿಪಂ ಮಾಜಿ ಸದಸ್ಯರಾದ ಹೊನ್ನನಾಯಕ, ಚಂದ್ರಶೇಖರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚನ್ನಕೇಶವ, ತಾಪಂ ಮಾಜಿ ಅಧ್ಯಕ್ಷ ನಟರಾಜು, ಶಿವಸ್ವಾಮಿ, ಮಾಜಿ ಉಪಾಧ್ಯಕ್ಷ ಪ್ರಸನ್ನ, ಮಾಜಿ ಸದಸ್ಯರಾದ ಗಣೇಶ, ರಾಮಲಿಂಗಯ್ಯ, ರಂಗಸ್ವಾಮಿ, ಎಸ್‌ಟಿ ಕಾಂಗ್ರೆಸ್ ಅಧ್ಯಕ್ಷ ನಾಗರಾಜು, ಗ್ರಾಪಂ ಅಧ್ಯಕ್ಷ ಡಾ.ಡಿ.ಮಹದೇವಸ್ವಾಮಿ, ಮಾಜಿ ಅಧ್ಯಕ್ಷ ಚಂದ್ರಶೇಖರ, ಶಿವಕುಮಾರ್, ಸದಸ್ಯರಾದ ಶಾಂತರಾಜು, ಕಲಿಯೂರು ಶಿವಣ್ಣ, ಮಾಜಿ ಸದಸ್ಯ ಟಿ.ಬೆಟ್ಟಹಳ್ಳಿ ಗೋಪಾಲ್, ಮುಖಂಡರಾದ ಪರಮೇಶ, ಕಾಳಿಹುಂಡಿ ಮಹೇಂದ್ರ, ಗದ್ದೆಮೊಳೆ ಸಿದ್ದರಾಜು, ಚಂದಹಳ್ಳಿ ಮಲ್ಲೇಶ, ಷಡಕ್ಷರಿ, ಕೆಬ್ಬೆಹುಂಡಿ ಮಹೇಶ ಇನ್ನಿತರರಿದ್ದರು.

> ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲು ಚಿತ್ರದುರ್ಗದಲ್ಲಿ ನಡೆಯುವ ಬೃಹತ್ ಸಮಾವೇಶ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಬಲ ಪ್ರದರ್ಶನಕ್ಕೆ ವೇದಿಕೆಯಾಗಬೇಕು. ಎರಡು ಸಮುದಾಯಗಳು ಕಾಂಗ್ರೆಸ್ ಪರ ಇರುವುದನ್ನು ನಾಡಿಗೆ ತಿಳಿಸಬೇಕು. ಚುನಾವಣೆಗೆ ಸಜ್ಜಾಗಿದ್ದೇವೆ ಎಂಬುದನ್ನು ಘೋಷಿಸುವಂತಾಗಬೇಕು.
> **– ಸುನೀಲ್ ಬೋಸ್, ತಿ.ನರಸೀಪುರ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ.**

ನಂ.ಗೂಡಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಖಚಿತ



ಮಲ್ಕುಂಡಿ, ಜ.5– ಮುಂಬರುವ ಚುನಾವಣೆಯಲ್ಲಿ ನಂಜನಗೂಡು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಖಚಿತ ಎಂದು ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಕೆ.ಜಿ.ಮಹೇಶ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ದುರಾಡಳಿತದಿಂದ ಕ್ಷೇತ್ರದ ಜನತೆ ಬೇಸತ್ತಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗಿದೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಸಂಸದರಾಗಿದ್ದ ವೇಳೆ ಹೆಚ್ಚಿನ ಅನುದಾನ ನೀಡಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಜನತೆಯ ಸಂಕಷ್ಟಗಳಿಗೆ ಸ್ಪಂದಿಸಿದ್ದಾರೆ. ಹೀಗಾಗಿ ಕಾಂಗ್ರೆಸ್‌ಹೈಕಮಾಂಡ್ ಧ್ರುವನಾರಾಯಣ್‌ಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದರು.

ಸಾಲಬಾಧೆ: ರೈತ ಆತ್ಮಹತ್ಯೆ



ಹಂಪಾಪುರ, ಜ.5– ಸಾಲಬಾಧೆ ತಾಳಲಾರದೇ ರೈತನೋರ್ವ ವಿಷದ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಹಿರೇನಂದಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಕೆಂಡಗಣ್ಣಪ್ಪ(60) ಸಾವನ್ನಪ್ಪಿದವರು. ಈತ ತಮ್ಮ ತಂದೆ ಪುಟ್ಟಸ್ವಾಮಪ್ಪನವರ ಹೆಸರಿನಲ್ಲಿದ್ದ 5 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಲು ಬ್ಯಾಂಕ್‌ನಲ್ಲಿ 5 ಲಕ್ಷ ರೂ., ತಮ್ಮ ಪತ್ನಿ ಹೆಸರಲ್ಲಿ ಮಹಿಳಾ ಸಂಘಗಳಲ್ಲಿ ಸಾಲ ಸೇರಿದಂತೆ ಖಾಸಗಿಯವರಿಂದ 3 ಲಕ್ಷ ಸಾಲ ಸೇರಿದಂತೆ ಸುಮಾರು 8 ಲಕ್ಷ ರೂ. ಸಾಲ ಮಾಡಿ, ಭತ್ತ, ರಾಗಿ, ಜೋಳ ಬೆಳೆದಿದ್ದರು. ಆದರೆ ಬೆಳೆಗೆ ಬೆಂಬಲ ಬೆಲೆ ಸಿಗದ ಕಾರಣ ಮಾಡಿದ ಸಾಲ ತೀರಿಸಲಾಗದೇ ಮನನೊಂದಿದ್ದ ಕೆಂಡಗಣ್ಣಪ್ಪ ಮನೆಯಲ್ಲಿ ವಿಷದ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ಪರಿಶೀಲನೆ ನಡೆಸಿ ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಒತ್ತಾಯಿಸಿದ್ದಾರೆ.

ಹಸು ತೊಳೆಯಲು ಹೋದ ರೈತ ನೀರು ಪಾಲು



ಹುಣಸೂರು, ಜ.5– ನದಿಯಲ್ಲಿ ಹಸು ತೊಳೆಯಲು ಹೋದ ರೈತನೋರ್ವ ಕಾಲುಜಾರಿ ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ವಡ್ಡಂಬಾಳು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಹದೇವಶೆಟ್ಟಿ(46) ಸಾವನ್ನಪ್ಪಿದವರು. ಈತ ಬುಧವಾರ ಬೆಳಗ್ಗೆ ಗ್ರಾಮದ ಲಕ್ಷ್ಮಣತೀರ್ಥ ನದಿಗೆ ಹಸು ತೊಳೆಯಲು ಹೋದ ವೇಳೆ ಆಯತಪ್ಪಿ ಕಾಲುಜಾರಿ ಬಿದ್ದು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಸಂಜೆಯಾದರೂ ಮಹದೇವಶೆಟ್ಟಿ ಮನೆಗೆ ಬಾರದಿದ್ದರಿಂದ ಕುಟುಂಬದವರು ನದಿ ಬಳಿ ನೋಡಿದಾಗ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ASTRUM HOMES
ASTRUM GRANDVIEW MYSURU
DREAM HOME? OR DREAM INVESTMENT?
CHOOSE BOTH!
Bandipalya (Opp. APMC Yard)
Mysore-Ooty Road (NH-212)
(Adj to Ring Road)
PLOT SIZE: 1163 sq.ft. onwards
PREMIUM PLOTS Starting from ₹4599 ₹4099/- Per Sq.ft
*All images are artists impressions
RERA APPROVED PRM/KA/RERA/1268/378/PR/200922/005250
MUDA APPROVED 20/2022-23
96200 33222
www.astrumhomes.com



ಅಭಿವೃದ್ಧಿ ಹರಿಕಾರ,
ಜನಪ್ರಿಯ ಶಾಸಕ
ಬಿ.ಹರ್ಷವರ್ಧನ್
ರವರಿಗೆ
47 ನೇ ವರ್ಷದ
ಶುಭಾಶಯಗಳು
ಶುಭಕೋರುವವರು: ನಂಜನಗೂಡು ತಾಲ್ಲೂಕು ಬಿಜೆಪಿ ಮುಖಂಡರುಗಳು



ನಂಜನಗೂಡು ಕ್ಷೇತ್ರದ ಜನೋಪಯೋಗಿ ಶಾಸಕರಾದ
ಸನ್ಮಾನ್ಯ ಶ್ರೀ ಬಿ.ಹರ್ಷವರ್ಧನ್ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭ ಕೋರುವವರು
ಬಿ. ಹರ್ಷವರ್ಧನ್ ಸ್ನೇಹ ಬಳಗ